23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 305 | ನವದೆಹಲಿ | ಬೆಲೆ ₹10 | ಮೇ 11 2026, ಸೋಮವಾರ


## ಒಳಪುಟಗಳಲ್ಲಿ




ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಟಿಕೆಟ್‌ಗಳಿಗೆ ಯುಪಿಐ ಸೇವೆ - ಪು.5

ಐತಿಹಾಸಿಕ 1.14 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ: ಖರ್ಗೆ - ಪು.6

ಬೆಳಗಿನಜಾವ ಐಪಿ ಸೆಟ್‌ಗಳಿಗೆ, ತ್ರಿಫೇಸ್ ವಿದ್ಯುತ್ ಪೂರೈಕೆಗೆ ಅಗ್ರಹಿಸಿ ಹೋರಾಟ - ಪು.7


# ಕರ್ನಾಟಕದಲ್ಲಿ ಕೈ ಒಳಜಗಳ: ಮುಖ್ಯಮಂತ್ರಿ ಸ್ಥಾನ ಎಷ್ಟು ದಿನ ಇರುತ್ತದೋ ಗೊತ್ತಿಲ್ಲ: ಪ್ರಧಾನಿ ಲೇವಡಿ







ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಅಶೋಕ್, ಪರಿಷತ್ ಪ್ರತಿಪಕ್ಷ ನಾಯಕ ಛಲವಾಧಿ ನಾರಾಯಣಸ್ವಾಮಿ, ಶಾಸಕ ಅಶ್ವತ್ಥನಾರಾಯಣ್, ಎಸ್.ಆರ್.ವಿಶ್ವನಾಥ್, ಮಾಜಿ ಸಿ.ಎಂ.ಬಿ.ಎಸ್.ಯಡಿಯೂರಪ್ಪ ಮತ್ತಿತರರು ಹಾಜರಿದ್ದರು.

**ಬೆಂಗಳೂರು, ಮೇ 10: ಅಧಿಕಾರದ ಆಸೆಗಾಗಿ ಯಾವುದೇ ಪಕ್ಷದೊಳಗೆ ಓಡಿಹೋಗುವ, ನಂಬಿದವರಿಗೆ ಕೈಕೊಡುವ, ಡಿಎಂಕೆ ಬೆನ್ನಿಗೆ ಚೂರಿ ಹಾಕಿರುವ ಕಾಂಗ್ರೆಸ್ ಪಕ್ಷವನ್ನು ಯಾರೊಬ್ಬರೂ ನಂಬಬಾರದೆಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಕರೆ ಕೊಟ್ಟಿದ್ದಾರೆ.**

ತಮಿಳುನಾಡಿನ ಈಗಿನ ಪರಿಸ್ಥಿತಿ ನೋಡಿ. 30 ವರ್ಷಗಳಿಂದ ಕಾಂಗ್ರೆಸ್ ಜೊತೆ ಡಿಎಂಕೆ ನಿಕಟ ಸಂಬಂಧ ಹೊಂದಿತ್ತು. 2014ರಿಂದ ಪಕ್ಷ ಉಳಿದಿದ್ದೇ ಮೈತ್ರಿ ಕಾರಣಕ್ಕಾಗಿ. ಅಧಿಕ್ಕಾರ ಕಳೆದುಕೊಳ್ಳುತ್ತಿದ್ದಂತೆ ಕಾಂಗ್ರೆಸ್ ಮೈತ್ರಿ ಮುರಿದುಕೊಂಡು ಡಿಎಂಕೆ ಬೆನ್ನಿಗೆ ಚೂರಿ ಇರಿದಿದೆ. ಶತಮಾನಗಳ ಇತಿಹಾಸವಿರುವ ಆ ಪಕ್ಷಕ್ಕೆ ಮತ್ತೊಂದು ಪಕ್ಷದ ಅಗತ್ಯವಿದೆ. ಹೀಗಾಗಿ ಯಾರೊಬ್ಬರೂ ನಂಬಬೇಡಿ ಎಂದು ಕಿವಿಮಾತು ಹೇಳಿದರು. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರಿಗೆ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬಿಜೆಪಿ ವತಿಯಿಂದ ಹಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಕರ್ನಾಟಕದ ಅಧಿಕಾರ ಹಂಚಿಕೆ, ಬಿಕ್ಕಟ್ಟು, ಆಡಳಿತ ವೈಫಲ್ಯ, ಭ್ರಷ್ಟಾಚಾರದ ಬಗ್ಗೆ ಉಲ್ಲೇಖ ಮಾಡಿದರು.ಮೊದಲಿಗೆ ಎಲ್ಲರಿಗೂ ನಮಸ್ಕಾರಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿದ ಮೋದಿಯವರು, ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಎಷ್ಟು ದಿನ ಇರುತ್ತಾರೋ ಗೊತ್ತಿಲ್ಲ. ಇಲ್ಲಿನ ಖಜಾನೆ ಮಾತ್ರ ಲೂಟಿಯಾಗುತ್ತಿದೆ ಎಂದು ಆರೋಪಿಸಿದರು.

ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು ಇಲ್ಲಿನ ಸರ್ಕಾರವು ಆಂತರಿಕ ವಿವಾದಗಳನ್ನು ಬಗೆಹರಿಸುವುದರಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದೆ. ಮುಖ್ಯಮಂತ್ರಿ ಎಷ್ಟು ದಿನ ಅಧಿಕಾರದಲ್ಲಿರುತ್ತಾರೆ ಎಂಬುದು ನಿರ್ಧರಿಸಲಾಗಿಲ್ಲ. ಅವರು ತಮದೇ ಪಕ್ಷದ ನಾಯಕರಿಗೆ ಭರವಸೆ ನೀಡುತ್ತಾರೆ.



ಕಾರ್ಯಕ್ರಮದಲ್ಲಿ ಪ್ರದಾನಿ ಮೋದಿ ಅಚರನ್ನು ಸನ್ಮಾನಿಸಲಾಯಿತು

ನಂತರ ಅವರ ಬೆನ್ನಿಗೆ ಚೂರಿ ಹಾಕುತ್ತಾರೆ. ಛತ್ತೀಸ್‌ಗಢ, ರಾಜಸ್ಥಾನದಲ್ಲೂ ಅದೇ ಆಯಿತು. ಕರ್ನಾಟಕದಲ್ಲಿ ಅದೇ ಆಟ ನಡೆಯುತ್ತದೆ. ಈಗ ಕೇರಳದ ಸರದಿ ಎಂದು ಎಚ್ಚರಿಕೆ ನೀಡಿದರು. ಕಾಂಗ್ರೆಸ್ ನಿರಾಸೆಯಲ್ಲಿ ಮುಳುಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಸಿದ್ಧಾಂತ ಉಳಿದಿಲ್ಲ. ಲೋಕಕಲ್ಯಾಣ ಬಿಜೆಪಿಯ ಆದ್ಯತೆ. ಒಳ್ಳೆಯ ಸರ್ಕಾರ ನಮ್ಮ ಮಾದರಿ. 50 ಕೋಟಿ ಜನ ಬಡತನದಿಂದ ಹೊರಬಂದಿರುವುದು ಇದಕ್ಕೆ ಉದಾಹರಣೆ ಎಂದು ಸಮರ್ಥಿಸಿಕೊಂಡರು.

ಹಿಮಾಚಲಪ್ರದೇಶದಲ್ಲಿ ಸಫಾಯಿ ಕರ್ಮಚಾರಿಗಳಿಗೆ ವೇತನ ಕೊಡಲಾಗುತ್ತಿಲ್ಲ, ತೆಲಂಗಾಣದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗಿದೆ. ಕೇರಳದಲ್ಲಿ ಬಹುಮತದೊಂದಿಗೆ ಚುನಾವಣೆ ಗೆದ್ದರೂ ಇನ್ನೂ ಸಿಎಂ ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ರಾಜಸ್ಥಾನದಲ್ಲಿ ಏನಾಯಿತು ಎಂಬುದು ನಿಮಗೆ ಗೊತ್ತಿದೆ. ಕರ್ನಾಟಕದಲ್ಲೂ ಅದೇ ಮುಂದುವರಿಯುತ್ತದೆ ಎಂದು ಪುನರುಚ್ಚರಿಸಿದರು. ಭಾಷಣದುದ್ದಕ್ಕೂ ಪಶ್ಚಿಮ ಬಂಗಾಳದ ಫಲಿತಾಂಶದ ಬಗ್ಗೆ ಮಾತನಾಡಿದ ಅವರು, ಬಂಗಾಳದ ಜನರು ಇತಿಹಾಸ ನಿರ್ಮಿಸಿದ್ದಾರೆ. ದಶಕಗಳ ಅರಾಜಕತೆಯನ್ನು ಕೊನೆಗಾಣಿಸಿ ವಿಕಾಸದ ಹಾದಿ ಹಿಡಿದಿದ್ದಾರೆ. ಈ ಗೆಲುವು ಕೇವಲ ಬಿಜೆಪಿಯದ್ದಲ್ಲ, ಇದು ಪ್ರಜಾಪ್ರಭುತ್ವದ ಗೆಲುವು. ಅಸ್ಸಾಂನಲ್ಲಿ ಸತತ ಎರಡನೇ ಬಾರಿಗೆ ಜನಾದೇಶ ನೀಡಿರುವುದು ನವ ಭಾರತದ ನಿರ್ಮಾಣಕ್ಕೆ ಸಿಕ್ಕ ಶಕ್ತಿ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಬಂಗಾಳದಲ್ಲಿ ಬಿಜೆಪಿಗೆ ಅಸ್ತಿತ್ವವೇ ಇರಲಿಲ್ಲ. ಕೊನೆಗೆ 3 ಸ್ಥಾನ ದೊರೆಯಿತು. ಮತ್ತೆ ಚುನಾವಣೆಯಲ್ಲಿ ಮೂರು ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಅದೇ ರಾಜ್ಯದಲ್ಲಿ ಈಗ 200ಕ್ಕೂ ಹೆಚ್ಚು ಸ್ಥಾನ ಗಳಿಸಿ ಸರ್ಕಾರ ರಚಿಸಿದ್ದೇವೆ. ಕೇರಳದಲ್ಲಿಯೂ ಈಗ 3 ಸ್ಥಾನ ಗಳಿಸಿದ್ದೇವೆ. ಮುಂದಿನ ದಿನಗಳಲ್ಲಿ ಬಂಗಾಳದ ರೀತಿ ಕೇರಳದಲ್ಲಿಯೂ ಕಮಲ ಅರಳಲಿದೆ ಎಂದು ಮೋದಿ ಹೇಳಿದರು. ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಿದ್ದನ್ನು ಪ್ರಸ್ತಾಪಿಸಿದ ಪ್ರಧಾನಿ, ಕಾಂಗ್ರೆಸ್ನವರು ಮಹಿಳಾ ಮೀಸಲಾತಿಯನ್ನು ತಡೆದರು. ಇದು ಜಾರಿಯಾಗಿದ್ದರೆ ಸಾಮಾನ್ಯ ವರ್ಗದ ಮಹಿಳೆಯರು ಕೂಡ ಇಂದು ವಿಧಾನಸಭೆ ಮತ್ತು ಸಂಸತ್ತಿಗೆ ಆಯ್ಕೆಯಾಗಿರುತ್ತಿದ್ದರು. ಕರ್ನಾಟಕದ ಮಹಿಳೆಯರು ಈ ದ್ರೋಹವನ್ನು ಎಂದಿಗೂ ಕ್ಷಮಿಸ ಬಾರದು ಎಂದು ಕರೆ ನೀಡಿದರು.

> ಬಂಗಾಳದ ಗೆಲುವಿನ ಉತ್ಸಾಹ ಹೆಚ್ಚಾಗಿದ್ದು ಮುಂದೆ ಕೇರಳ, ಕರ್ನಾಟಕದಲ್ಲೂ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ದೇಶದ ಅತಿದೊಡ್ಡ ಮಹಿಳಾ ವಿರೋಧಿ ಪಕ್ಷ. ಮಹಿಳಾ ವಿಧೇಯಕ ಸಂಸತ್ತಲ್ಲಿ ಪಾಸ್ ಆಗಿದ್ದರೆ ಮಹಿಳೆಯರ ಶಕ್ತಿ ಹೆಚ್ಚುತ್ತಿತ್ತು. ಕರ್ನಾಟಕದಿಂದಲೂ ಹೆಚ್ಚಿನ ಸಂಖ್ಯೆಯ ಮಹಿಳಾ ಶಾಸಕರು, ಸಂಸದರು ಬರಬಹುದಿತ್ತು.

ಕಾಂಗ್ರೆಸ್‌ನ ಈ ದ್ರೋಹವನ್ನು ದೇಶದ ಜನ ಕ್ಷಮಿಸಲ್ಲ ಎಂದು ವಾಗ್ದಾಳಿ ನಡೆಸಿದರು. ರಾಷ್ಟ್ರ ನೀತಿಯ ರಾಜನೀತಿ ನಮಗೆ ಬೇಕಿದೆ. ಕರ್ನಾಟಕ ಬಿಜೆಪಿಗೆ ಒಂದು ಶಕ್ತಿಯನ್ನು ನೀಡಿತ್ತು. ಆಂಧ್ರದಲ್ಲಿ ಎನ್‌ಡಿಎ ಸರ್ಕಾರ ಇದೆ. ಲೋಕಸಭಾ ಸದಸ್ಯರ ಲೆಕ್ಕದಲ್ಲಿ ಕರ್ನಾಟಕದಲ್ಲಿ ಬಿಜೆಪಿ ನಂಬರ್ 1, ತೆಲಂಗಾಣದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಈ ಹಿಂದೆ 3 ಶಾಸಕರಿದ್ದ ಪಶ್ಚಿಮ ಬಂಗಾಳದಲ್ಲಿ 200ಕ್ಕೂ ಹೆಚ್ಚು ಶಾಸಕರಿದ್ದಾರೆ. ಕೇರಳದಲ್ಲಿ 3 ಎಂಎಲ್‌ಎಗಳು ಗೆದ್ದಿದ್ದಾರೆ ಎಂದರು.


400ಕ್ಕೂ ಅಧಿಕ ಸ್ಥಾನದಲ್ಲಿ ಕಾಂಗ್ರೆಸ್‌ಗೆ ಕಳೆದ ಮೂರು ಚುನಾವಣೆಗಳಲ್ಲಿ ಅವಕಾಶ ಇಲ್ಲದಂತಾಗಿದೆ. ಅವರ ಬಳಿಕ ಅಜೆಂಡಾ ಇಲ್ಲ, ನಿರಾಶರಾಗಿದ್ದಾರೆ.

ನಮ ಮಂತ್ರ ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ನಮ್ಮದು ಒಳ್ಳೆಯ ಆಡಳಿತ ನೀಡುವ ಮಂತ್ರ. ಅದಕ್ಕೆ ನಮಗೆ ಪದೇ ಪದೇ ಜನ ಅವಕಾಶ ಕೊಡುತ್ತಿದ್ದಾರೆ ಎಂದು ಸಮರ್ಥಿಸಿಕೊಂಡರು. ಬೆಂಗಳೂರನ್ನು ಭಾರತದ ಭವಿಷ್ಯದ ಎಂಜಿನ್ ಎಂದು ಕರೆದ ಪ್ರಧಾನಿ, ಇಂದು ಇಡೀ ಜಗತ್ತು ಡಿಜಿಟಲ್ ಇಂಡಿಯಾದ ಬಗ್ಗೆ ಮಾತನಾಡುತ್ತಿದ್ದರೆ ಅದಕ್ಕೆ ಬೆಂಗಳೂರಿನ ಯುವಶಕ್ತಿಯೇ ಕಾರಣ. ಕರ್ನಾಟಕದ ಐಟಿ ನೈಪುಣ್ಯ ಮತ್ತು ಸಂಶೋಧನೆಗಳು ದೇಶವನ್ನು ಸ್ವಾವಲಂಬಿಯಾಗಿಸುತ್ತಿವೆ ಎಂದರು. ಭಾರತವು ಬಲಿಷ್ಠವಾಗಬೇಕಾದರೆ ಅದು ಕೇವಲ ಆರ್ಥಿಕತೆಯಿಂದ ಸಾಧ್ಯವಿಲ್ಲ. ನಮಗೆ ಮಾನಸಿಕ ಶಾಂತಿ ಮತ್ತು ಆಧ್ಯಾತ್ಮಿಕ ಬಲವೂ ಬೇಕು. ಶ್ರೀರವಿಶಂಕರ್ ಗುರೂಜಿಯವರಂತಹ ಮಹನೀಯರು ಈ ಕೆಲಸವನ್ನು ಜಾಗತಿಕ ಮಟ್ಟದಲ್ಲಿ ಮಾಡುತ್ತಿದ್ದಾರೆ. ಅವರ 70ನೇ ಜನೋತ್ಸವದ ಸಂದರ್ಭದಲ್ಲಿ ಹೊಸ ಧ್ಯಾನ ಮಂದಿರ ಉದ್ಘಾಟಿಸಿದ್ದು ನನ್ನ ಸೌಭಾಗ್ಯ ಎಂದು ಪ್ರಧಾನಿ ಹೇಳಿದರು.

> ಕರ್ನಾಟಕದಲ್ಲಿ ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ. ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ. ಪ್ರಧಾನಿಯವರ ಕಣ್ಣಿಗೆ ಏನು ಕಾಣುತ್ತಿದೆಯೋ ಗೊತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು. ಪಂಚರಾಜ್ಯಗಳ ಚುನಾವಣೆ ಬಳಿಕ ಸಿಎಂ ಕುರ್ಚಿಗಳು ಅಲ್ಲಾಡುತ್ತಿವೆ. ಕರ್ನಾಟಕದಲ್ಲಿ ಕರ್ನಾಟಕದಲ್ಲಿ ಸಿಎಂ ಕುರ್ಚಿ ಅಲುಗಾಡುತ್ತಿದೆ. ಕೇರಳ, ಪಂಜಾಬ್‌ನಲ್ಲೂ ಇದೇ ರೀತಿ ಆಗಿದೆ ಎಂದು ಪ್ರಧಾನಿ ಮೋದಿ ನೀಡಿರುವ ಹೇಳಿಕೆಗೆ ರಾಯಚೂರಿನ ಲಿಂಗಸಗೂರಿನಲ್ಲಿ ಪ್ರತಿಕ್ರಿಯೆ ನೀಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಕರ್ನಾಟಕದಲ್ಲಿ ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ, ಪ್ರಧಾನಿಗೆ ಏನು ಕಾಣುತ್ತಿದೆಯೋ ಗೊತ್ತಿಲ್ಲ ಎಂದರು.



## ಬಂಗಾಳದಲ್ಲಿ ಸುವೇಂದು ದರ್ಬಾರ್ ಶುರು: ಶುಕ್ರವಾರ ಮೊದಲ ಸಂಪುಟ ಸಭೆ



ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಹೊಸ ಸರ್ಕಾರ ಕಾರ್ಯಾರಂಭ ಮಾಡಿದೆ. ಮೊದಲ ಬಿಜೆಪಿ ಸರ್ಕಾರದ ಚಟುವಟಿಕೆಗಳು ತೀವ್ರಗೊಂಡಿವೆ. ಹೊಸದಾಗಿ ಆಯ್ಕೆಯಾದ ಶಾಸಕರ ಪ್ರಮಾಣ ವಚನ ಪ್ರಕ್ರಿಯೆಯು ಬುಧವಾರದಿಂದ ಪ್ರಾರಂಭ ವಾಗಲಿದ್ದು, ಗುರುವಾರದವರೆಗೆ ಮುಂದುವರಿಯಲಿದೆ.

ಅದಕ್ಕೂ ಮೊದಲು, ಸೋಮವಾರ ಹಿರಿಯ ನಾಯಕ ತಪಸ್ ರಾಯ್, ರಾಜ್ಯಪಾಲ ಆರ್ ಎನ್ ರವಿ ಅವರಿಂದ ಹಂಗಾಮಿ ಸ್ಪೀಕರ್ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಶಂಕರ್ ಘೋಷ್ ಮತ್ತು ಜಗನ್ನಾಥ್ ಚಟ್ಟೋಪಾಧ್ಯಾಯ ಸಮಾರಂಭದಲ್ಲಿ ಅವರಿಗೆ ಸಹಾಯ ಮಾಡಲು ಹಾಜರಿರುತ್ತಾರೆ. ಹಂಗಾಮಿ ಸ್ಪೀಕರ್ ಅವರ ಮೇಲ್ವಿಚಾರಣೆಯಲ್ಲಿಯೇ ಹೊಸದಾಗಿ ಆಯ್ಕೆಯಾದ ಶಾಸಕರು ಔಪಚಾರಿಕವಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಈ ಮೂಲಕ ಶಾಸಕರು ತಮ್ಮ ಶಾಸಕಾಂಗ ಕರ್ತವ್ಯ ಆರಂಭಿಸಲಿದ್ದಾರೆ. ಶುಕ್ರವಾರ ಮೊದಲ ಸಂಪುಟ ಸಭೆ: ಈ ನಡುವೆ ಸುವೇಂದು ಅಧಿಕಾರಿ ಅವರ ಹೊಸ ಫಲಕವನ್ನು ರಾಜ್ಯ ವಿಧಾನಸಭೆಯಲ್ಲಿ ಈಗಾಗಲೇ ಸ್ಥಾಪಿಸಲಾಗಿದೆ. ಶುಕ್ರವಾರ ಬಿಜೆಪಿ ಸರ್ಕಾರದ ಮೊದಲ ಸಚಿವ ಸಂಪುಟ ಸಭೆ ನಬನ್ನಾದಲ್ಲಿ ನಡೆಯಲಿದೆ.

## ಭದ್ರಾ ಮೇಲ್ದಂಡೆ ನದಿ ಯೋಜನೆಗೆ ಡಿ.ಸುಧಾಕರ್ ಹೆಸರು: ಡಿಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು, ಮೇ 10– ಭದ್ರಾ ಮೇಲ್ದಂಡೆ ಯೋಜನೆಗೆ ಡಿ.ಸುಧಾಕರ್ ಅವರ ಹೆಸರನ್ನು ನಾಮಕರಣ ಮಾಡಲು ಕ್ರಮ ಕೈಗೊಳ್ಳುವುದಾಗಿ ಜಲ ಸಂಪನೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.ತಮ ನಿವಾಸದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ, ಸುಧಾಕರ್ ಅವರು ಅಪಾರ ಕಾಳಜಿವಹಿಸಿದ್ದರು. ಕೆಲಸ ಮುಗಿದ ಬಳಿಕ ಅದರ ಉದ್ಘಾಟನೆಗೆ ತೀವ್ರ ಆಸಕ್ತಿ ವಹಿಸಿದ್ದರು. ಆದರೆ ಚಿಕ್ಕ ವಯಸ್ಸಿನಲ್ಲೇ ಅಕಾಲಿಕ ನಿಧನಕ್ಕೀ ಡಾಗಿದ್ದಾರೆ ಎಂದು ವಿಷಾದಿಸಿದರು. ತಮ ಆತೀಯ ಸ್ನೇಹಿತ ಹಾಗೂ ಸಂಪುಟದ ಸಹೋದ್ಯೋಗಿ. ಸುಧಾಕರ್ ಮಂಡಿ ನೋವಿನ ಶಸ್ತ್ರ ಚಿಕಿತ್ಸೆಗೊಳಗಾದ ಬಳಿಕ ಚೇತರಿಸಿಕೊಳ್ಳಲಿಲ್ಲ ಎಂದು ಹೇಳಿದರು.ಅವರ ಆರೋಗ್ಯ ಸುಧಾರಿಸಿ ಮೊದಲಿನಂತಾಗುತ್ತಾರೆಂದು ನಾವು ಬಹಳ ನಿರೀಕ್ಷೆ ಹೊಂದಿದ್ದೆವು. ಆದರೆ ಅದು ಈಡೇರಲಿಲ್ಲ. ನಮ ಜೊತೆ ಹೆಚ್ಚು ಒಡನಾಟ ಹೊಂದಿದ್ದರು. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿ ದ್ದಾಗಲೇ ಅವರಿಗೆ ಹಿರಿಯೂರು ಕ್ಷೇತ್ರದಿಂದ ಟಿಕೆಟ್ ಕೊಡಿಸಲು ತಾವು ಪ್ರಯತ್ನಿಸಿದ್ದಾಗಿ ಡಿ.ಕೆ.ಶಿವಕುಮಾರ್ ಹೇಳಿದರು.2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಅವರಿಗೆ ಯೋಜನೆ ಮತ್ತು ಮುಜರಾಯಿ ಖಾತೆಗಳನ್ನು ನೀಡಲು ನಿರ್ಧರಿಸಲಾಗಿತ್ತು. ನಂತರ ರಾಮಲಿಂಗಾರೆಡ್ಡಿ ಅವರಿಗೆ ಮುಜರಾಯಿ ಖಾತೆ ನೀಡಿ, ಸುಧಾಕರ್ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳ ಜವಾಬ್ದಾರಿ ನೀಡಿದ್ದಾಗಿ ತಿಳಿಸಿದರು.

> "ಸಚಿವರಾದ ಡಿ. ಸುಧಾಕರ್ ಅವರು ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಹೋರಾಟ ಮಾಡಿದ್ದರು. ಅವರ ಸ್ಮರಣಾರ್ಥ ನೀರಾವರಿ ಯೋಜನೆಗೆ ಸುಧಾಕರ್ ಅವರ ಹೆಸರಿಡಲು ಆಲೋಚನೆ ಮಾಡಲಾಗುವುದು" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

> ನನ್ನ ಆಪ್ತಮಿತ್ರ ಹಾಗೂ ಸಂಪುಟ ಸಹೋದ್ಯೋಗಿ ಡಿ. ಸುಧಾಕರ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಭಾವಪೂರ್ಣ ನಮನ ಸಲ್ಲಿಸಿ, ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿದೆ. ಸಾರ್ವಜನಿಕ ಬದುಕಿನಲ್ಲಿ ಮೌಲ್ಯಗಳನ್ನು ಇಟ್ಟುಕೊಂಡು ಬದುಕಿದ್ದ ಡಿ. ಸುಧಾಕರ್ ಅವರ ಸರಳತೆ, ಸೌಜನ್ಯ ಮತ್ತು ಜನಪರ ಕಾಳಜಿ ಎಲ್ಲರಿಗೂ ಮಾದರಿ.
>
> ದೇವರು ಅಗಲಿದ ಸ್ನೇಹಿತನ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ. ಹೃದಯ ಶ್ರೀಮಂತಿಕೆಯ ಮನುಷ್ಯ. ಇವರ ಸಾವಿನಿಂದ ನಮ್ಮ ಸರ್ಕಾರಕ್ಕೆ, ಕ್ಷೇತ್ರಕ್ಕೆ ನಷ್ಟ ಉಂಟಾಗಿದೆ. ನನಗೆ ವೈಯಕ್ತಿಕವಾಗಿ ಬಹಳ ಆಘಾತ ಉಂಟಾಗಿದೆ. ಭಾರವಾದ ಹೃದಯದಿಂದ ಅಂತಿಮ ವಿದಾಯ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ನೋವನ್ನು ವ್ಯಕ್ತಪಡಿಸಿದರು.

ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆಯಲ್ಲಿ 5 ದಿನದ ಉಸ್ತುವಾರಿಯನ್ನು ಡಿ.ಸುಧಾಕರ್ ನಿರ್ವಹಿಸಿದ್ದರು. ಮಳೆ ಬಂದು ಅವ್ಯವಸ್ಥೆಗಳಾದಾಗ ಅದನ್ನು ಸರಿಪಡಿಸಲು ಡಿ.ಸುಧಾಕರ್ ಮತ್ತು ಅವರ ಬೆಂಬಲಿಗರು ಶ್ರಮಪಟ್ಟಿದ್ದನ್ನು ಕಣ್ಣಾರೆ ಕಂಡಿದ್ದನ್ನು ಸ್ಮರಿಸಿಕೊಂಡರು. ಜೈನ ಸಮುದಾಯಕ್ಕೆ ಸೇರಿದ್ದರೂ ಎಲ್ಲರನ್ನು ಒಳಗೊಳ್ಳುವ ಮೂಲಕ ಜನಪ್ರಿಯ ನಾಯಕರಾಗಿದ್ದರು ಎಂದು ವಿವರಿಸಿದರು.

## ತಮಿಳುನಾಡಿನಲ್ಲಿ ದಳಪತಿ ದರ್ಬಾರ್: ಸಿಎಂ ಆಗಿ ವಿಜಯ್ ಪ್ರಮಾಣ

**ಚೆನ್ನೈ, ಮೇ 10:** ತಮಿಳುನಾಡಿನ ರಾಜಕೀಯದಲ್ಲಿ ಹೊಸ ಸಂಚಲನ ಮೂಡಿಸಿರುವ ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ ಸರ್ಕಾರ ಇಂದು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಚೆನ್ನೈನ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆದ ಅದ್ದೂರಿ ಸಮಾರಂಭದಲ್ಲಿ ವಿಜಯ್ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಸದ್ಯ ವಿಜಯ್ ಅವರು ತಮ್ಮ ಸಂಪುಟದಲ್ಲಿ 9 ಮಂದಿ ಶಾಸಕರಿಗೆ ಮಂತ್ರಿಗಿರಿ ನೀಡಿದ್ದಾರೆ. ಟಿವಿಕೆಗೆ ಬೆಂಬಲ ನೀಡಿದ ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ವಿಸಿಕೆ, ಸಿಪಿಐ, ಸಿಪಿಎಂ ಮತ್ತು ಮುಸ್ಲಿಂ ಲೀಗ್ ಪಕ್ಷಗಳು ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ್ದರಿಂದ ಈ ಪಕ್ಷಗಳ ಶಾಸಕರು ಸಂಪುಟ ಸೇರುತ್ತಿಲ್ಲ.

ಈ ಹಿಂದೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ವಿಸಿಕೆ ಬೇಡಿಕೆ ಇಟ್ಟಿದೆ ಎಂದು ಹೇಳಲಾಗಿತ್ತು. ಆದರೆ ವಿಜಯ್ ಸರ್ಕಾರದಲ್ಲಿ ಸದ್ಯಕ್ಕೆ ಯಾರಿಗೂ ಡಿಸಿಎಂ ಸ್ಥಾನ ನೀಡಿಲ್ಲ.

ಟಿವಿಕೆ (107), ಕಾಂಗ್ರೆಸ್ (5), ಸಿಪಿಐ (2), ಸಿಪಿಎಂ (2), ವಿಸಿಕೆ (2), ಮುಸ್ಲಿಂ ಲೀಗ್ (2) ಸರ್ಕಾರ ರಚನೆಯ ಬೆನ್ನಲ್ಲೇ ಬಹುಮತ ಸಾಬೀತುಪಡಿಸಲು ರಾಜ್ಯಪಾಲರು ಮೇ 13ರವರೆಗೆ (3 ದಿನಗಳು) ಗಡುವು ನೀಡಿದ್ದಾರೆ. 120 ಶಾಸಕರ ಬೆಂಬಲದೊಂದಿಗೆ ವಿಜಯ್ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚಿಸಲಿದ್ದಾರೆ.







### ಪ್ರಮಾಣವಚನ ಸ್ವೀಕರಿಸಿದ ಸಚಿವರು

- ಎನ್. ಆನಂದ್ – ಪಕ್ಷದ ಪ್ರಧಾನ ಕಾರ್ಯದರ್ಶಿ
- ಆಧವ್ ಅರ್ಜುನ– ಚುನಾವಣಾ ಪ್ರಚಾರ ನಿರ್ವಹಣೆಯ ಪ್ರಧಾನ ಕಾರ್ಯದರ್ಶಿ
- ಕೆ.ಎ. ಸೆಂಗೊಟ್ಟೈಯನ್ – ಟಿವಿಕೆ ಪಕ್ಷದ ಕಾರ್ಯಕಾರಿ ಸಮಿತಿಯ ಮುಖ್ಯ ಸಂಯೋಜಕ
- ಡಾ. ಕೆ.ಜಿ. ಅರುಣ್ರಾಜ್– ನೀತಿ ಮತ್ತು ಪ್ರಚಾರ ವಿಭಾಗದ ಪ್ರಧಾನ ಕಾರ್ಯದರ್ಶಿ
- ಪಿ. ವೆಂಕಟರಮಣನ್ – ಪಕ್ಷದ ಖಜಾಂಚಿ
- ಸಿ.ಟಿ.ಆರ್. ನಿರ್ಮಲ್ ಕುಮಾರ್ – ಜಂಟಿ ಪ್ರಧಾನ ಕಾರ್ಯದರ್ಶಿ
- ಎ. ರಾಜಮೋಹನ್ – ಪ್ರಚಾರ ಕಾರ್ಯದರ್ಶಿ
- ಡಾ. ಟಿ.ಕೆ. ಪ್ರಭು – ಮಂತ್ರಿ
- ಎಸ್. ಕೀರ್ತನಾ – ಸಂಪುಟದ ಅತ್ಯಂತ ಕಿರಿಯ ಸಚಿವೆ

## ಕರ್ನಾಟಕದಲ್ಲಿ 10 ಲಕ್ಷ ಬಾಂಗ್ಲಾದೇಶಿಗಳು, ಕಾಂಗ್ರೆಸ್ ಅವರನ್ನು ರಕ್ಷಿಸುತ್ತಿದೆ: ಅಶೋಕ ಆರೋಪ

**ಬೆಂಗಳೂರು, ಮೇ 10:** ಕರ್ನಾಟಕದಲ್ಲಿ 10 ಲಕ್ಷಕ್ಕೂ ಹೆಚ್ಚು ಬಾಂಗ್ಲಾದೇಶಿಗಳು ಅಕ್ರಮವಾಗಿ ವಾಸಿಸುತ್ತಿದ್ದಾರೆ ಮತ್ತು ಆಡಳಿತಾರೂಢ ಕಾಂಗ್ರೆಸ್ ಸರ್ಕಾರವು "ಮತಬ್ಯಾಂಕ್ ರಾಜಕೀಯಕ್ಕಾಗಿ ಅವರನ್ನು ರಕ್ಷಿಸುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಭಾನುವಾರ ಆರೋಪಿಸಿದರು. ಇಲ್ಲಿ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಅವರ ಮೇಲೆ ತೀಕ್ಷ್ಣವಾದ ದಾಳಿ ನಡೆಸಿದರು, ರಾಜ್ಯ ಸರ್ಕಾರವು ಚುನಾವಣಾ ಲಾಭಕ್ಕಾಗಿ ಅಕ್ರಮ ಒಳನುಸುಳುವಿಕೆ ಚಟುವಟಿಕೆಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕರು ಮತಗಳಿಗಾಗಿ ಬಾಂಗ್ಲಾದೇಶಿ ನುಸುಳುಕೋರರನ್ನು ಬಯಸುತ್ತಾರೆ. ಸರ್ಕಾರವು ಕರ್ನಾಟಕದಲ್ಲಿ ಅಕ್ರಮ ವಸಾಹತು ಚಟುವಟಿಕೆಗಳಿಗೆ ಕಣ್ಣುಮುಚ್ಚಿದೆ ಎಂದು ಅವರು ಆರೋಪಿಸಿದರು.

ಬೆಂಗಳೂರಿನಲ್ಲಿ ಮಾತ್ರ ಹಲವಾರು 'ಬಾಂಗ್ಲಾ ಶಿಬಿರಗಳು' ಇವೆ ಮತ್ತು ಮಹದೇವಪುರ ಮತ್ತು ಕೊಡಗು ಸೇರಿದಂತೆ ಜಿಲ್ಲೆಗಳಲ್ಲಿ ಅಕ್ರಮ ವಲಸಿಗರು ಹರಡಿದ್ದಾರೆ, ಅಲ್ಲಿ ಉದ್ಯೋಗದಾತರು ಅವರನ್ನು ಅಗ್ಗದ ಕಾರ್ಮಿಕರಾಗಿ ನೇಮಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಲಾಗಿದೆ. (2ನೇ ಪುಟಕ್ಕೆ)

## ನಿತ್ಯ ಪಂಚಾಂಗ 11.05.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ ಋತು, ಚಾಂದ್ರಮಾನ, ಚೈತ್ರ–ವೈಶಾಖ ಮಾಸ

ವೈಶಾಖ ಬಹುಳ, ನವಮಿ, ಶತಭಿಷ ನಕ್ಷತ್ರ, ಗೌರಾಂಬುಧೀಶ್ವರ ರಥ, ಮುಕ್ತಾಬಾಯಿ ಪುಣ್ಯದಿನ, ಹುಲಗಿ ಹುಲಿಗಮ್ಮ ರಥ, ಕುಷ್ಟಗಿ ಗುಮಗೇರಾ ದುರ್ಗಾದೇವಿ ಜಾತ್ರೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| | ರಾಹುಕಾಲ | ಯಮಗಂಡ | ಗುಳಿಕಕಾಲ |
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 –12.00 | 1.30 – 3.00 |
| ಮಂಗಳ | 3.00 – 4.30 | 9.00 –10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 –12.00 |
| ಗುರು | 1.30 – 3.00 | 6.00 – 7.30 | 9.00 –10.30 |
| ಶುಕ್ರ | 10.30 –12.00 | 3.00 – 4.30 | 7.30 – 9.00 |
| ಶನಿ | 9.00 –10.30 | 1.30 – 3.00 | 6.00 – 7.30 |

# ಸಚಿವ ಸುಧಾಕರ್ ನಿಧನ: ಚಳ್ಳಕರೆಯಲ್ಲಿ ಇಂದು ಅಂತ್ಯಸಂಸ್ಕಾರ

**ಬೆಂಗಳೂರು, ಮೇ.10:** ರಾಜ್ಯ ಸರ್ಕಾರದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದ ಡಿ.ಸುಧಾಕರ್ (66) ಅವರು ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಮಂಡಿ ನೋವಿನ ಕಾರಣಕ್ಕಾಗಿ ಕಳೆದ ತಿಂಗಳು ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೊಳಗಾಗಿದ್ದ ಅವರಿಗೆ, ಎರಡು ದಿನಗಳ ಬಳಿಕ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ತೀವ್ರ ಶ್ವಾಸಕೋಶ ಸೋಂಕಿನಿಂದ ಬಳಲುತ್ತಿದ್ದ ಅವರನ್ನು ಎಲೆಕ್ಟ್ರಾನಿಕ್ ಸಿಟಿಯ ಕೃಷ್ಣ ಇನ್ಸ್ ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಹಲವು ದಿನಗಳ ಕಾಲ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಮುಂಜಾನೆ 3.15ಕ್ಕೆ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಆರ್. ಚಿನ್ನಿದೊರೈ ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿ ಅಧಿಕಾರದಲ್ಲಿದ್ದಾಗಲೇ ನಿಧನರಾದ ಡಿ.ಸುಧಾಕರ್ ಅವರಿಗೆ ನಾಡಿನಾದ್ಯಂತ ಅಭಿಮಾನಿಗಳು, ಜನ ಪ್ರತಿನಿಧಿಗಳು ಕಂಬನಿ ಮಿಡಿದಿದ್ದಾರೆ.

1961ರ ಮಾರ್ಚ್ 28ರಂದು ಚಳ್ಳಕೆರೆಯಲ್ಲಿ ಜನಿಸಿದ್ದ ದಶರಥಯ್ಯ ಸುಧಾಕರ್ 2004ರಲ್ಲಿ ಚಿತ್ರದುರ್ಗ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದರು. 2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದ ಬಳಿಕ ಚಳ್ಳಕೆರೆ ಎಸ್ಟಿ ಮೀಸಲು ಕ್ಷೇತ್ರವಾಯಿತು.

ಅಲ್ಲಿಂದ ಹಿರಿಯೂರು ಕ್ಷೇತ್ರಕ್ಕೆ ವಲಸೆ ಹೋದ ಸುಧಾಕರ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಯಡಿಯೂರಪ್ಪ ಅವರ ಸರ್ಕಾರಕ್ಕೆ ಆ ಸಂದರ್ಭದಲ್ಲಿ ಸ್ಪಷ್ಟ ಬಹುಮತ ಬರದ ಹಿನ್ನೆಲೆಯಲ್ಲಿ, ಪಕ್ಷೇತರ ಶಾಸಕರಾಗಿದ್ದ ಡಿ.ಸುಧಾಕರ್, ಪಿ. ಎಂ.ನರೇಂದ್ರಸ್ವಾಮಿ, ಶಿವರಾಜ ತಂಗಡಗಿ, ವೆಂಕಟರಮಣಪ್ಪ ಅವರ ಬೆಂಬಲದೊಂದಿಗೆ ಬಿಜೆಪಿ ಸರ್ಕಾರ ರಚನೆಯಾಗಿತ್ತು. ಆ ವೇಳೆ ಯಡಿಯೂರಪ್ಪ ಅವರ ಸರ್ಕಾರದಲ್ಲಿ ಡಿ.ಸುಧಾಕರ್ ಸಮಾಜ ಕಲ್ಯಾಣ ಸಚಿವರಾಗಿ 2008ರಿಂದ 2009ರ ವರೆಗೂ ಕೆಲಸ ಮಾಡಿದ್ದರು. ನಂತರ 2010ರಿಂದ 11ರವೆಗೂ ಯುವಜನ ಸೇವೆ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು. 2013ರಲ್ಲಿ ಹಿರಿಯೂರು ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ 71 ಸಾವಿರ ಮತಗಳ ಅಂತರದಿಂದ ಗೆಲುವು ಕಂಡಿದ್ದರು. 2018ರಲ್ಲಿ ಬಿಜೆಪಿಯ ಕೆ.ಪೂರ್ಣಿಮಾ ಅವರ ಎದುರು ಸೋಲು ಕಂಡರು. 2023ರಲ್ಲಿ ಮರು ಆಯ್ಕೆಯಾಗಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿ ಕೆಲಸ ಮಾಡಿದ್ದರು. ಸುಧಾಕರ್ ಅವರು ಸಜ್ಜನ ರಾಜಕಾರಣಿ ಎಂದು ಹೆಸರು ಪಡೆದಿದ್ದರು. ಜೊತೆಗೆ ಕೆಲವು ಹಣ ಕಾಸಿನ ವ್ಯವಹಾರ, ಬ್ಯಾಂಕ್ ವಂಚನೆ, ಆಸ್ತಿ ವಿವಾದ ಸೇರಿದಂತೆ ವಿವಾದಗಳಿಗೂ ಗುರಿಯಾಗಿದ್ದರು. ಸುಧಾಕರ್ ಅವರು, ಪತ್ನಿ, ಪುತ್ರ ಸುಹಾಸ್ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

### ಸರ್ಕಾರಿ ರಜೆ:

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸುಧಾಕರ್ ಅವರ ಗೌರವಾರ್ಥ ಮೇ 11 ರಂದು ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಕಚೇರಿಗಳಿಗೆ, ಶಾಲಾ, ಕಾಲೇಜುಗಳಿಗೆ, ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳಿಗೆ ಸಾರ್ವಜನಿಕ ರಜೆ ಘೋಷಿಸಲಾಗಿದೆ. ಮೇ 10 ರಿಂದ 12ರವರೆಗೆ ಮೂರು ದಿನಗಳ ಕಾಲ ರಾಜ್ಯಾದ್ಯಂತ ಶೋಕಾಚರಿಸುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಬೆಳಗ್ಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರಾದ ಕೃಷ್ಣಭೈರೇಗೌಡ ಮತ್ತಿತರರು ಅಂತಿಮ ದರ್ಶನ ಪಡೆದರು. ಬಳಿಕ 12 ಗಂಟೆಯಿಂದ 4 ಗಂಟೆಯವರೆಗೂ ಹಿರಿಯೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಚಳ್ಳಕೆರೆಯ ಸ್ವಗೃಹದಲ್ಲಿ ಪೂಜೆ ವಿಧಿ–ವಿಧಾನಗಳನ್ನು ನೆರವೇರಿಸಿ, ಚಳ್ಳಕೆರೆಯ ಕ್ರೀಡಾಂಗಣದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಾಳೆ ಮಧ್ಯಾಹ್ನ 3 ರಿಂದ 4 ಗಂಟೆವರೆಗೂ ಚಳ್ಳಕೆರೆಯಲ್ಲಿ ಜೈನ ಸಮುದಾಯದ ಸಂಪ್ರದಾಯ ಪ್ರಕಾರ ಅಂತ್ಯಕ್ರಿಯೆ ನಡೆಯಲಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ರಾಜ್ಯ ಸಚಿವರಾದ ಚಲುವರಾಯ ಸ್ವಾಮಿ, ಈಶ್ವರ್ ಖಂಡ್ರೆ, ಲಕ್ಷ್ಮೀ ಹೆಬ್ಬಾಳ್ಕರ್, ಎಂ.ಬಿ.ಪಾಟೀಲ್, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

## ಮುಖ್ಯಮಂತ್ರಿ ಸಂತಾಪ

ಯೋಜನೆ ಮತ್ತು ಸಾಂಖ್ಯಿಕ ಸಚಿವ ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟವುಂಟಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಇಂದು ಸದಾಶಿವ ನಗರದಲ್ಲಿರುವ ಸಚಿವ ಸುಧಾಕರ್ ಅವರ ನಿವಾಸದಲ್ಲಿ ಅಂತಿಮ ದರ್ಶನ ಪಡೆದು ಮಾಧ್ಯಮದವರೊಂದಿಗೆ ಮಾತನಾಡಿದರು.

**ಸಹಕಾರ ಕ್ಷೇತ್ರಕ್ಕೂ ಕೊಡುಗೆ**

ಸುಧಾಕರ್ ಅವರು ಮೂಲತಃ ಚಳ್ಳಕರೆಯವರು. 2008ರಿಂದ ಹಿರಿಯೂರು ಶಾಸಕರಾಗಿದ್ದರು. ಎರಡನೇ ಬಾರಿಗೆ ಮಂತ್ರಿಯಾಗಿದ್ದ ಅವರು ಅತ್ಯಂತ ಜನಪ್ರಿಯ ವ್ಯಕ್ತಿ. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆ ನೀಡಿರುವ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡಾ ಶಾಸಕರಾಗಿದ್ದವರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದರು. ಚಳ್ಳಕೆರೆ ಎಸ್.ಟಿ ಮೀಸಲು ಕ್ಷೇತ್ರವಾಗಿದ್ದರಿಂದ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು ಎಂದು ವಿವರಿಸಿ, ರೈತರ ಹಾಗೂ ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಜನಪ್ರಿಯ ವ್ಯಕ್ತಿಯಾಗಿದ್ದರು ಎಂದರು.

**ಆತ್ಮಕ್ಕೆ ಚಿರಶಾಂತಿ ದೊರಕಲಿ:**

ಸುಧಾಕರ್ ಅವರು ಪತ್ನಿ, ಪುತ್ರಿ ಹಾಗೂ ಪುತ್ರ ಸೇರಿದಂತೆ ಅಪಾರ ಬಂಧುಬಳಗ, ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಕುಟುಂಬದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು.

**ಮೂರು ದಿನಗಳ ಶೋಕಾಚರಣೆ :**

ಚಿತ್ರದುರ್ಗ ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ಶೋಕಾಚರಣೆ ಮಾಡುತ್ತಿದ್ದು, ಚಿತ್ರದುರ್ಗದಲ್ಲಿ ಸೋಮವಾರ ರಜೆ ಘೋಷಣೆ ಮಾಡಲಾಗಿದೆ ಎಂದರು.

**ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ:**

ನಾಳೆ ಚಳ್ಳಕೆರೆಯಲ್ಲಿ ಸಂಜೆ 4.00 ಗಂಟೆಗೆ ನಡೆಯಲಿರುವ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು ಅವರ ಮತಕ್ಷೇತ್ರ ಹಿರಿಯೂರಿಗೆ ಅವರ ಪಾರ್ಥಿವ ಶರೀರವನ್ನು ದರ್ಶನಕ್ಕಾಗಿ ಇರಿಸಿದ್ದು, ನಾಳೆ ಚಳ್ಳಕೆರೆಗೆ ಕರೆದೊಯ್ಯಲಾಗುವುದು ಎಂದು ವಿವರಿಸಿದರು. ಎಲ್ಲಾ ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದರು.

## ತಮಿಳುನಾಡು ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣ: ಕರ್ನಾಟಕ ಸಿಎಂ ಸಿದ್ದರಾಮಯ್ಯ ಅಭಿನಂದನೆ



**ಚನ್ನೈ, ಮೇ 10:** ತಮಿಳುನಾಡಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಟ, 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ಅಧ್ಯಕ್ಷ ವಿಜಯ್ ಅವರಿಗೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನೆಗಳನ್ನು ತಿಳಿಸಿದ್ದಾರೆ. ಸಿನಿಮಾ ರಂಗದಿಂದ ಜನಸೇವೆಯತ್ತ ವಿಜಯ್ ಕೈಗೊಂಡಿರುವ ಈ ಪ್ರಜಾಪ್ರಭುತ್ವದ ಪಯಣ ಶ್ಲಾಘನೀಯ ಎಂದು ಅವರು ಬಣ್ಣಿಸಿದ್ದಾರೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಕ್ಸ್ ಖಾತೆಯಲ್ಲಿ ಶುಭಕೋರಿದ್ದು, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಆಳವಾದ ನಾಗರಿಕ ಸಂಬಂಧಗಳು ಹಾಗೂ ಸಾಂಸ್ಕೃತಿಕ ಸಾಮ್ಯತೆಯನ್ನು ಹಂಚಿಕೊಂಡಿವೆ ಎಂದು ತಿಳಿಸಿದ್ದಾರೆ.

ಎರಡು ರಾಜ್ಯಗಳು ಸಾಮಾಜಿಕ ನ್ಯಾಯ, ಒಳಗೊಳ್ಳುವ ಬೆಳವಣಿಗೆ ಮತ್ತು ಒಕ್ಕೂಟ ಸಹಕಾರಕ್ಕಾಗಿ ಸಮಾನ ಆಕಾಂಕ್ಷೆಗಳನ್ನು ಹೊಂದಿವೆ. ಉಭಯ ರಾಜ್ಯಗಳ ನಡುವಿನ ಪಾಲುದಾರಿಕೆಯನ್ನು ಬಲಪಡಿಸಲು ಮತ್ತು ಪಾರಂಪರಿಕ ಮೌಲ್ಯಗಳನ್ನು ಎತ್ತಿಹಿಡಿಯಲು ವಿಜಯ್ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ಅವರು ಹೇಳಿದ್ದಾರೆ. ಜಾತ್ಯತೀತತೆ, ಸಾಂವಿಧಾನಿಕ ಮೌಲ್ಯಗಳನ್ನು ಮುನ್ನಡೆಸಲು ಹಾಗೂ ವಿಭಜಕ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಸಾಮೂಹಿಕ ಹೋರಾಟಕ್ಕಾಗಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ತಮಿಳುನಾಡಿನ ಜನರ ಸೇವೆಯಲ್ಲಿ ವಿಜಯ್ ಅವರ ಅಧಿಕಾರಾವಧಿಯು ಯಶಸ್ವಿ ಮತ್ತು ಪರಿವರ್ತನೆಯ ಹಾದಿಯಾಗಲಿ ಎಂದು ಅವರು ಶುಭ ಹಾರೈಸಿದ್ದಾರೆ. ಈ ಸಂದೇಶದ ಮೂಲಕ ಸಿದ್ದರಾಮಯ್ಯ ಅವರು ನೆರೆಯ ರಾಜ್ಯದ ನೂತನ ನಾಯಕನೊಂದಿಗೆ ಸೌಹಾರ್ದಯುತ ಸಂಬಂಧವನ್ನು ವೃದ್ಧಿಸುವ ಮತ್ತು ಪ್ರಾದೇಶಿಕ ಹಿತಾಸಕ್ತಿಗಳಿಗಾಗಿ ಒಂದಾಗಿ ಶ್ರಮಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

### ಸಂತಾಪ:

ಬಡವರ ಪರ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದ ಉತ್ತಮ ಆಡಳಿತಗಾರ ಡಿ.ಸುಧಾಕರ್ ಅವರ ಅಗಲಿಕೆ ನೋವುಂಟು ಮಾಡಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸಂತಾಪ ಸೂಚಿಸಿದ್ದಾರೆ.ಯೋಜನಾ ಸಚಿವ ಡಿ.ಸುಧಾಕರ್ ಅವರು ನಮನ್ನು ಅಗಲಿರುವುದು ನನಗೆ ನೋವುಂಟು ಮಾಡಿದೆ. ಸರಳ ಸಜ್ಜನಿಕೆ ರಾಜಕಾರಣಿ ಅತ್ಯುತ್ತಮ ಆಡಳಿತಗಾರ ನಾನು ಸಂಸತ್ತಿನಲ್ಲಿದ್ದಾಗ ಅವರು ನನ್ನ ಮಾತನಾಡಿಸದೇ ಹೋಗುತ್ತಿರಲಿಲ್ಲ.

ಅವರಿಗೂ ನನಗೂ ಅವಿನಾಭಾವ ಸಂಬಂಧವಿತ್ತು. ಅವರು ಅನಾರೊಗ್ಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿ ಅವರ ಯೋಗಕ್ಷೇಮ ವಿಚಾರಿಸಿದ್ದೆ. ಅವರು ಸದಾ ಬಡವರ ಪರವಾಗಿ ಕೆಲಸ ಮಾಡುತ್ತಿದ್ದರು ಎಂದು ಸರಿಸಿದರು.

ಹಲವಾರು ಜನರಿಗೆ ಸಹಾಕರಿ ಸಹಾಯ ಹಸ್ತರಾಗಿದ್ದವರು ಇಂದು ಅವರ ನಿಧನದ ಸುದ್ದಿ ತಿಳಿದು ನನಗೆ ನೊವುಂಟು ಮಾಡಿದೆ. ಅವರ ಆತಕ್ಕೆ ಶಾಂತಿಯನ್ನು ಕೊರುತ್ತೇನೆ ಹಾಗೂ ಅವರ ಕುಟುಂಬಕ್ಕೆ ಮತ್ತು ಅಭಿಮಾನಿಗಳಿಗೆ ದುಖಃವನ್ನುಚಿ ಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದರು.

## ಯು.ಟಿ.ಖಾದರ್ ಸಂತಾಪ



ಸಚಿವ ಸುಧಾಕರ್ ಡಿ. ಅವರ ನಿಧನದ ಸುದ್ದಿ ತಿಳಿದು ಅಪಾರ ದುಃಖವಾಗಿದೆ. ಸುಧಾಕರ್ ಡಿ. ಅವರು 4 ಬಾರಿ ವಿಧಾನಸಭಾ ಸದಸ್ಯರಾಗಿ, ಸಮಾಜ ಕಲ್ಯಾಣ ಸಚಿವರಾಗಿ ಹಾಗೂ ವಿವಿಧ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ, ಸರಳ ವ್ಯಕ್ತಿತ್ವ ಮತ್ತು ಜನಪರ ಕಾರ್ಯಗಳಿಂದ ಅವರು ಜನಮನದಲ್ಲಿ ವಿಶೇಷ ಸ್ಥಾನ ಪಡೆದಿದ್ದರು ಎಂದು ವಿಧಾನಸಭಾಧ್ಯಕ್ಷ ಯು.ಟ.ಖಾದರ್ ಶೋಕಿಸಿದ್ದಾರೆ.

ಅವರ ಅಗಲಿಕೆ ರಾಜ್ಯಕ್ಕೆ ಮತ್ತು ಹಿರಿಯೂರು ಕ್ಷೇತ್ರದ ಜನತೆಗೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯ ದುಃಖವನ್ನು ಭರಿಸುವ ಸರ್ವ ಶಕ್ತಿಯನ್ನು ಅವರ ಕುಟುಂಬದವರಿಗೆ, ಬಂಧುಗಳಿಗೆ ಮತ್ತು ರಾಜ್ಯದ ಜನತೆಗೆ ನೀಡಲಿ ಹಾಗೂ ಅಗಲಿದ ಆತ್ಮಕ್ಕೆ ಚಿರ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ಅವರು ತಿಳಿಸಿದ್ದಾರೆ.

## ಸಚಿವ ಸುಧಾಕರ್ ನಿಧನಕ್ಕೆ ಮಾಜಿ ಸಂಸದ ಜಾಧವ್ ಕಂಬನಿ



ರಾಜ್ಯ ಸರ್ಕಾರದ ಯೋಜನೆ ಮತ್ತು ಸಾಂಖಿಕ ಖಾತೆಯ ಸಚಿವರು, ಹಿರಿಯೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಡಿ.ಸುಧಾಕರ್ ಸಚಿವ ಮತ್ತು ಶಾಸಕರಾಗಿ ನಾಡಿಗೆ ದೊಡ್ಡ ಕೊಡುಗೆ ನೀಡಿದ್ದಾರೆ.

ಅವರ ಸೇವೆ ಸದಾ ಸ್ಮರಣೀಯ. ಅವರ ಅಗಲುವಿಕೆ ರಾಜ್ಯಕ್ಕೆ ತುಂಬಲಾರದ ನಷ್ಟ ಎಂದು ಮಾಜಿ ಸಂಸದ ಡಾ.ಜಾಧವ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಸುಧಾಕರ್ ಯೋಜನೆ ಖಾತೆಯ ಸಚಿವರಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್ ಡಿ ಬಿ) ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಾಕಷ್ಟು ಕೊಡುಗೆಯನ್ನು ನೀಡಿರುವುದು ಸ್ಮರಣೀಯವಾಗಿದೆ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ ಮತ್ತು ಅವರ ಕುಟುಂಬವರ್ಗಕ್ಕೆ, ಬಂಧು–ಮಿತ್ರರಿಗೆ, ಅಭಿಮಾನಿಗಳಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

ಅವರ ಆದರ್ಶ ಮುಂದಿನ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಲಿ ಎಂದು ಡಾ. ಜಾಧವ್ ಸಂತಾಪ ಪತ್ರದಲ್ಲಿ ತಿಳಿಸಿದ್ದಾರೆ.

# ಗ್ರೀಕ್ ನಾಟಕಗಳಿಂದ ಸಾರ್ವಕಾಲಿಕ ಸತ್ಯಗಳ ಅನಾವರಣ: ಪ್ರೊ.ತರೀಕೆರೆ ತಾರಾನಾಥ



**ಧಾರವಾಡ, ಮೇ 10:** ಗ್ರೀಕ್ ನಾಟಕಗಳು ಸಾರ್ವಕಾಲಿಕ ಸತ್ಯಗಳನ್ನು ನಾಟ್ಯೀಕರಿಸುತ್ತವೆ. ಗ್ರೀಕ್ ನಾಟಕಗಳಲ್ಲಿ ವಿಧಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಾನವ ನೈತಿಕತೆ, ಧರ್ಮ ಹಾಗೂ ನಾಗರಿಕತೆಗಳಿಗೆ ಸಂಬಂಧಿಸಿದ ಅನೇಕ ಗಂಭೀರ ಪ್ರಶ್ನೆಗಳನ್ನು ಗ್ರೀಕ್ ನಾಟಕಗಳು ಎತ್ತುತ್ತವೆ. ಅವು ಎತ್ತುವ ಪ್ರಶ್ನೆಗಳೇ ಗ್ರೀಕ್ ನಾಟಕಗಳನ್ನು ಇಂದಿಗೂ ಜೀವಂತವಾಗಿರಿಸಿ ಕೊಂಡಿವೆ ಎಂದು ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತರೀಕೆರೆ ಸಿ. ತಾರಾನಾಥ ಹೇಳಿದ್ದಾರೆ.

ಧಾರವಾಡ ಕಟ್ಟೆಯು ಹಾಸನ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಕಾಲೇಜಿನ ಸಹಕಾರದೊಂದಿಗೆ ಆಯೋಜಿಸಿದ್ದ "ಗ್ರೀಕ್ ನಾಟಕಗಳ ಉಪನ್ಯಾಸ ಮಾಲಿಕೆ"ಯನ್ನು ಉದ್ಘಾಟಿಸಿ ಪ್ರೊ. ತಾರಾನಾಥ ಮಾತನಾಡಿದರು.

ಗ್ರೀಕ್ ನಾಟಕಗಳ ಅಧ್ಯಯನವು ವಿದ್ಯಾರ್ಥಿಗಳಿಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವಾಗುತ್ತದೆ. ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರಗಳನ್ನು ಕೈಕೊಂಡು ಯಶಸ್ಸಿನ ಮೆಟ್ಟಿಲೇರಲು ಗ್ರೀಕ್ ನಾಟಕಗಳ ಅಧ್ಯಯನ ಸಹಕಾರಿಯಾಗಿದೆ ಎಂದು ಪ್ರೊ. ತರೀಕೆರೆ ಸಿ. ತಾರಾನಾಥ ಹೇಳಿದರು.

ಗ್ರೀಕ್ ನಾಟಕಗಳಲ್ಲಿ ಅಲ್ಲಿನ ನಾಗರಿಕತೆಯ ಸಮಗ್ರ ಅಭಿವ್ಯಕ್ತಿ ಕಾಣುತ್ತದೆ. ಈ ನಾಟಕಗಳಲ್ಲಿ ಕೋರಸ್ ಪ್ರೇಕ್ಷಕರನ್ನು ಕಥಾವಸ್ತುವಿನೊಂದಿಗೆ ಸಂಬಂಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗ್ರೀಕ್ ಧಾರ್ಮಿಕ ಆಚರಣೆಗಳ ಹಿನ್ನೆಲೆಯಲ್ಲಿಯೇ ಗ್ರೀಕ್ ನಾಟಕಗಳು ಹುಟ್ಟಿಕೊಂಡಿವೆ. ಗ್ರೀಕ್ ದುರಂತ ನಾಯಕರು ಮಾನವ ಬದುಕಿನ ಮೇಲೆ ತೀವ್ರ ಪರಿಣಾಮ ಬೀರುತ್ತಾರೆ. ಗ್ರೀಕ್ ನಾಯಕರ ದುರಂತಗಳು ಆಧುನಿಕ ಮನುಷ್ಯರಿಗೂ ಪಾಠವಾಗುತ್ತವೆ. ನಟರು ಮತ್ತು ಪಾತ್ರಗಳ ನಡುವಿನ ಅಂತರವನ್ನು ತೋರಿಸಲು ಗ್ರೀಕ್ ರಂಗಭೂಮಿಯಲ್ಲಿ ಮುಖವಾಡಗಳನ್ನು ಬಳಸಲಾಗುತ್ತಿತ್ತು ಎಂದು ಮೃತ್ಯುಂಜಯ ಕಾಲೇಜಿನ ಪ್ರಾಂಶುಪಾಲರಾದ

ಡಾ. ನೀಲಕ್ಕಾ ಪಾಟೀಲ ಹೇಳಿದರು.

ಗ್ರೀಕ್ ಸಾಹಿತ್ಯವು ಯುರೋಪಿನ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡಿದೆ. ಜಗತ್ತಿನ ರಂಗಭೂಮಿಗೆ ಭಾರತೀಯ ಸಂಸ್ಕೃತ ನಾಟಕ ಪರಂಪರೆ ಮತ್ತು ಗ್ರೀಕ್ ನಾಟಕ ರಂಗಭೂಮಿ ಶ್ರೇಷ್ಠ ಕೊಡುಗೆಗಳನ್ನು ನೀಡಿವೆ. ವಿಶ್ವದ ಎರಡು ಮಹತ್ವದ ರಂಗಭೂಮಿ ಪರಂಪರೆಗಳೆಂದರೆ ಭಾರತೀಯ ಮತ್ತು ಗ್ರೀಕ್ ರಂಗಭೂಮಿಗಳು ಎಂದು ಮುಖ್ಯ ಅತಿಥಿಯಾಗಿದ್ದ ಡಾ. ಡಿ. ಎಂ. ಹಿರೇಮಠ್ ಬಣ್ಣಿಸಿದರು.

ಗ್ರೀಕ್ ನಾಟಕಗಳ ಅಧ್ಯಯನವು ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಸಹಕಾರಿಯಾಗಿದೆ. ವಿಶ್ವ ಸಾಹಿತ್ಯವು ಮೂಲತಃ ಒಂದೇ ಮಾನವ ಅನುಭವದ ವಿಭಿನ್ನ ಅಭಿವ್ಯಕ್ತಿ. ಗ್ರೀಕ್ ಮತ್ತು ಭಾರತ ಜಗತ್ತಿನ ಅತ್ಯಂತ ಪ್ರಾಚೀನ ನಾಗರಿಕತೆಗಳಾಗಿವೆ. ಭಾರತೀಯ ರಂಗಭೂಮಿ ಮತ್ತು ಗ್ರೀಕ್ ರಂಗಭೂಮಿಗಳ ವಿನ್ಯಾಸದಲ್ಲಿ ವ್ಯತ್ಯಾಸಗಳಿದ್ದರೂ, ಎರಡರಲ್ಲಿಯೂ ಜ್ಞಾನದ ಅಗಾಧತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಸಾಕ್ರಟೀಸ್ ಕೊನೆಯ ಕ್ಷಣದವರೆಗೂ ತನ್ನ ಅರಿವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸಿದಂತೆ, ಗ್ರೀಕರು ಜೀವನ ಮತ್ತು ಸಾವಿನ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ನಿರಂತರವಾಗಿ ಯತ್ನಿಸಿದರು. ಶಕ್ತಿ ಮತ್ತು ಧೈರ್ಯವನ್ನು ಆಹ್ವಾನಿಸಿಕೊಳ್ಳಲು ಗ್ರೀಕ್ ನಟರು ಮುಖವಾಡಗಳನ್ನು ಧರಿಸುತ್ತಿದ್ದರು. ತಮ್ಮ ನಿಜಸ್ವರೂಪವನ್ನು ಮರೆಮಾಚಿ ಪಾತ್ರದೊಳಗೆ ಸಂಪೂರ್ಣವಾಗಿ ಪ್ರವೇಶಿಸಲು ಮುಖವಾಡಗಳು ಸಹಕಾರಿಯಾಗುತ್ತಿದ್ದವು ಎಂದು ಸಾಹಿತಿ ಪ್ರೊ. ವೆಂಕಟಗಿರಿ ದಳವಾಯಿ ಹೇಳಿದರು.

ಗ್ರೀಕ್ ಮತ್ತು ಭಾರತೀಯ ನಾಟಕ ರಂಗಭೂಮಿಗಳ ನಡುವೆ ಅನೇಕ ಸಾದೃಶ್ಯ ಸಂಬಂಧಗಳಿವೆ. ಭಾರತೀಯ ನಾಟಕಕಾರರೂ ವಿಶ್ವ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಗ್ರೀಕ್ ನಾಟಕಗಳ ಅಧ್ಯಯನವು ಇಂದಿನ ಕಾಲಕ್ಕೂ ಪ್ರಸ್ತುತವಾಗಿದೆ. ಪ್ರೀತಿ, ದ್ವೇಷ, ಸೇಡು ಮುಂತಾದ ಮಾನವೀಯ ಭಾವನೆಗಳು ಎಲ್ಲ ಕಾಲಕ್ಕೂ ಅನ್ವಯಿಸುತ್ತವೆ ಎಂದು ಲೇಖಕ ಡಾ. ವಿ.ಟಿ.ನಾಯಕ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಬಸವರಾಜ ಡೋಣೂರ ಮಾತನಾಡಿ, ಗ್ರೀಕ್ ನಾಟಕಗಳ ಮೂಲ ಆಶಯವು ಬದುಕಿನಲ್ಲಿ ಎದುರಾಗುವ ಸಂಕಷ್ಟಗಳನ್ನು ಮನುಷ್ಯನು ಧೈರ್ಯ, ಸಹನೆ ಮತ್ತು ಆತ್ಮಬಲದಿಂದ ಎದುರಿಸಿ ತನ್ನ ಬದುಕನ್ನು ನಿರ್ಮಿಸಿಕೊಳ್ಳಬೇಕು ಎಂಬುದಾಗಿದೆ. ವಿಧಿಯ ಶಕ್ತಿಯ ಮುಂದೆ ಮನುಷ್ಯ ನಿಸ್ಸಹಾಯನಾಗುತ್ತಾನೆ, ವಿಧಿಯೊಂದಿಗಿನ ಹೋರಾಟದಲ್ಲಿ ಮನುಷ್ಯ ಸೋಲುತ್ತಾನೆ. ಆದರೆ ಮನುಷ್ಯ ತನ್ನ ಸೋಲನ್ನು ಸರಳವಾಗಿ ಒಪ್ಪಿಕೊಳ್ಳಬಾರದು. ತನ್ನ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಅವನು ಸತತ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯರಾದ ಅಶೋಕ್ ಚಿಕ್ಕೋಡಿ, ಡಾ. ತಾರಾ ಬಿ.ಎನ್, ಡಾ. ನಾಗಯ್ಯ, ಡಾ. ಪೊಲೀಸ್ ಪಾಟೀಲ್, ಡಾ. ಬಾಬು ಬೆನ್ನಿ, ಡಾ. ಎಸ್.ಎಸ್. ಸಂಗೊಳ್ಳಿ, ಡಾ. ರೆಹಮಾನ್, ಪ್ರತಿಕ್ ಹಾಗೂ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಧಾರವಾಡ ಕಟ್ಟೆಯ ಪ್ರಧಾನ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ದಾನರಡ್ಡಿ ಕಾರ್ಯಕ್ರಮದ ನಿರೂಪಣೆ ಮಾಡಿದರು.



ಮುಸ್ಲಿಂ ಲೀಗ್ ನ ಅಭ್ಯರ್ಥಿಯಾಗಿ ಕಾಸರಗೋಡು ಕ್ಷೇತ್ರದಿಂದ ಕೇರಳ ವಿಧಾನಸಭೆಗೆ ಆಯ್ಕೆಯಾಗಿರುವ ಮಾಹಿನ್ ಕಲ್ಲತ್ರ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಅಭಿನಂದಿಸಿದರು. ಚುನಾವಣೆ ವೇಳೆ ಸಿದ್ದರಾಮಯ್ಯ ಅವರು ಮಾಹಿನ್ ಅವರ ಪರ ಪ್ರಚಾರ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಮಾಹಿನ್ ಅವರು ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಧನ್ಯವಾದ ತಿಳಿಸಿದರು. ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಹಾಜರಿದ್ದರು.

ಮೊದಲನೇ ಪುಟದಿಂದ

## ಕರ್ನಾಟಕದಲ್ಲಿ 10 ಲಕ್ಷ ಬಾಂಗ್ಲಾದೇಶಿಗಳು

ಬೆಂಗಳೂರಿನ ಕೋಗಿಲು ಪ್ರದೇಶದಲ್ಲಿ ಬಾಂಗ್ಲಾದೇಶಿ ವಸಾಹತುಗಾರರು ಗುಡಿಸಲುಗಳನ್ನು ನಿರ್ಮಿಸುವ ಮೂಲಕ ಸುಮಾರು 10 ಎಕರೆ ನಾಗರಿಕ ಭೂಮಿಯನ್ನು ಅತಿಕ್ರಮಿಸಿದ್ದಾರೆ ಎಂದು ಅವರು ಆರೋಪಿಸಿದರು. ಅವರ ಪ್ರಕಾರ, ಬಿಜೆಪಿ ಈ ಕ್ರಮವನ್ನು ವಿರೋಧಿಸುವ ಮೊದಲು ಸಿದ್ದರಾಮಯ್ಯ ಸರ್ಕಾರ ಅವರಿಗೆ ವಸತಿ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಿತ್ತು. ಪಶ್ಚಿಮ ಬಂಗಾಳವು ಭಾರತದೊಳಗೆ ಅಕ್ರಮ ಬಾಂಗ್ಲಾದೇಶಿ ನುಸುಳುವಿಕೆಗೆ "ದ್ವಾರ" ವಾಗಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದರು ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಆಧಾರ್ ಮತ್ತು ಪಡಿತರ ಚೀಟಿಗಳನ್ನು ನೀಡುವ ಮೂಲಕ ಒಳನುಸುಳುವವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ ಎಂದು ಆರೋಪಿಸಿದರು.

"ಬಾಂಗ್ಲಾದೇಶಿಗಳು ದೇಶಾದ್ಯಂತ ಹರಡುವ ಮೊದಲು ಬಂಗಾಳವನ್ನು ಭಾರತದ ದ್ವಾರವಾಗಿ ಬಳಸುತ್ತಿದ್ದರು. ಮಮತಾ ಬ್ಯಾನರ್ಜಿ ಅವರಿಗೆ ಅಧಿಕೃತ ದಾಖಲೆಗಳನ್ನು ಒದಗಿಸಿದರು ಮತ್ತು ಅವರಿಗೆ ಮುಕ್ತವಾಗಿ ಚಲಿಸಲು ಅವಕಾಶ ಮಾಡಿಕೊಟ್ಟರು" ಎಂದು ಅವರು ಆರೋಪಿಸಿದರು. ಪಶ್ಚಿಮ ಬಂಗಾಳದಲ್ಲಿ "ದ್ವಾರ"ವನ್ನು ಈಗ ಮುಚ್ಚಲಾಗಿದೆ ಮತ್ತು ಅಕ್ರಮ ಮತ್ತು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು ಪಲಾಯನ ಮಾಡುವಂತೆ ಒತ್ತಾಯಿಸಲಾಗುತ್ತದೆ ಎಂದು ಅಶೋಕ ಹೇಳಿಕೊಂಡರು. ಕೆಲವು ಒಳನುಸುಳುವವರು ದರೋಡೆ ಮತ್ತು ಇತರ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ಎಂದು ಅವರು ಆರೋಪಿಸಿದರು. ಚುನಾವಣಾ ಪ್ರಯೋಜನಗಳಿಗಾಗಿ ಕಾಂಗ್ರೆಸ್ ರಾಷ್ಟ್ರೀಯ ಭದ್ರತೆಯನ್ನು ರಾಜಿ ಮಾಡಿಕೊಂಡಿದೆ ಎಂದು ಆರೋಪಿಸಿ, ರಾಜ್ಯ ಸರ್ಕಾರವು "ರಾಷ್ಟ್ರ ವಿರೋಧಿ ಅಂಶಗಳ" ವಿರುದ್ಧ ದೃಢವಾಗಿ ಕ್ರಮ ಕೈಗೊಳ್ಳಲು ವಿಫಲವಾಗಿದೆ ಎಂದು ಅಶೋಕ ಹೇಳಿದರು.

ಈ ಹಿಂದೆ ವಿಧಾನಸೌಧ ಆವರಣದಲ್ಲಿ "ಪಾಕಿಸ್ತಾನ ಜಿಂದಾಬಾದ್" ಘೋಷಣೆ ವಿವಾದದ ಬಗ್ಗೆ ಮಾತನಾಡುತ್ತಾ, ಕಾಂಗ್ರೆಸ್ ಸರ್ಕಾರವು ಹೊಣೆಗಾರರ ವಿರುದ್ಧ ಸಾಕಷ್ಟು ಕ್ರಮ ಕೈಗೊಂಡಿಲ್ಲ ಎಂದು ಅವರು ಹೇಳಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಸಾಫ್ಟ್‌ವೇರ್ ಜೊತೆಗೆ ಬೆಂಗಳೂರು ಆಧ್ಯಾತ್ಮಿಕತೆಗೆ ಹೊಸ ಎತ್ತರವನ್ನು ನೀಡುತ್ತದೆ: ಮೋದಿ

**ಬೆಂಗಳೂರು, ಮೇ 10:** ಸಮಾಜ ಸ್ವಯಂ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಸರ್ಕಾರ ಯಶಸ್ಸು ಕಾಣುತ್ತದೆ. ಸಮಾಜ ಸಕ್ರಿಯವಾದಾಗ ದೇಶದ ದೊಡ್ಡ ಸಾವಾಲುಗಳಿಗೆ ಸಾಮೂಹಿಕ ಪರಿಹಾರ ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು. ಆರ್ಟ್ ಆಫ್ ಲಿವಿಂಗ್ನ 45ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಧ್ಯಾನ ಮಂದಿರ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ನಗರ ಸಾಫ್ಟ್ ವೇರ್ ಹಾಗೂ ಸೇವೆಗೆ ಪ್ರಸಿದ್ಧವಾಗಿದೆ. ಆಧ್ಯಾತ್ಮಿಕ ಚೇತನವನ್ನೂ ಈ ನಗರ ಹೊಸ ಉತ್ತುಂಗಕ್ಕೆ ಕೊಂಡೊಯ್ದಿದೆ. ಇಂದು ಪ್ರಪಂಚದಾದ್ಯಂತದ ಜನರು ಭಾರತದ ಆಧ್ಯಾತ್ಮಿಕ ಮೌಲ್ಯಗಳಿಂದ ಪ್ರಭಾವಿತರಾಗಿದ್ದಾರೆ ಮತ್ತು ಈ ಪ್ರಾಚೀನ ಮೌಲ್ಯಗಳಿಂದ ಭಾರತದ ಅನೇಕ ಸಂಸ್ಥೆಗಳು ಪ್ರೇರಣೆ ಪಡೆಯುತ್ತಿವೆ. ಪುರಾತನ ಸಂಸ್ಕಾರದಿಂದ ಭಾರತದ ಅನೇಕ ಸಂಸ್ಥೆಗಳಿಗೆ ಪ್ರೇರೇಪಣೆ ಸಿಗುತ್ತಿದೆ. ನಮ್ಮ ಭಾರತ ವಿವಿಧತೆಯಿಂದ ಕೂಡಿದ ದೇಶವಾಗಿದೆ. ಅನೇಕ ನಂಬಿಕೆ, ಉಪಾಸನೆ, ಸಂಸ್ಕೃತಿಗಳನ್ನು ಹೊಂದಿದೆ. ವಿವಿಧತೆಯ ಮೂಲತತ್ವ ಏನೆಂದರೆ ಬೇರೆಯವರಿಗಾಗಿ ಜೀವನ ನಡೆಸುವುದು ಎಂದು ವ್ಯಾಖ್ಯಾನಿಸಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯೂ ಸದಾ ಸಮಾಜದ ಈ ಶಕ್ತಿಯನ್ನು ಜೊತೆಗೆ ಕೊಂಡೊಯ್ಯುತ್ತಿದೆ. ಯುವಶಕ್ತಿಯತ್ತ ಗಮನ ಕೇಂದ್ರೀಕರಿಸಬೇಕಾಗಿದೆ. ಹೊಸ ಆವಿಷ್ಕಾರಗಳು ನಡೆಯುತ್ತಿದೆ. ಭಾರತ ಬಹಳ ಕ್ಷೇತ್ರಗಳಲ್ಲಿ ನೇತೃತ್ವ ವಹಿಸುತ್ತಿದೆ. ಡಿಜಿಟಲ್ ಪೇಮೆಂಟ್ನಲ್ಲಿ ಜಾಗತಿಕ ನಾಯಕನಾಗಿದೆ. ಸ್ಟಾರ್ಟ್ ಅಪ್ನಲ್ಲಿ ವೇಗದಲ್ಲಿ ಜಗತ್ತಿನ ಮೂರನೇ ಇಕೋ ಸಿಸ್ಟಮ್ ಆಗಿ ಹೊರಹೊಮ್ಮಿದೆ ಎಂದು ಹೇಳಿದರು.

ಭಾರತವು ಈ ಬದಲಾವಣೆಗಳಲ್ಲಿ ಕೇವಲ ಭಾಗವಹಿಸುತ್ತಿಲ್ಲ, ಬದಲಾಗಿ ಡಿಜಿಟಲ್ ಪಾವತಿಗಳು, ಮೂಲಸೌಕರ್ಯ ವಿಸ್ತರಣೆ ಮತ್ತು ಸ್ಟಾರ್ಟ್–ಅಪ್ ಪರಿಸರ ವ್ಯವಸ್ಥೆ ಸೇರಿದಂತೆ ಹಲವಾರು ವಲಯಗಳಲ್ಲಿ ನಾಯಕತ್ವ ವಹಿಸುತ್ತಿದೆ. ಭಾರತದ ಯುವಕರು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದಾರೆ ಮತ್ತು ಅಂತಹ ಎಲ್ಲಾ ರಾಷ್ಟ್ರೀಯ ಯಶಸ್ಸಿಗೆ ಕೊಡುಗೆ ನೀಡುತ್ತಿದ್ದಾರೆ. ಆಧುನಿಕ ಯುಗದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು, ಯುವಕರಿಗೆ ಸಹಾಯ ಮಾಡುವಲ್ಲಿ ಆರ್ಟ್ ಆಫ್ ಲಿವಿಂಗ್ನ ಪಾತ್ರವನ್ನು ಶ್ಲಾಘಿಸಿದರು.ವಿಕಸಿತ ಭಾರತ ಶಾಂತ ಮನಸ್ಥಿತಿ, ಸಂವೇದನಾ ಶೀಲತೆ, ಸಾಮಾಜಿಕ ಕಳಕಳಿ ಹೊಂದಿರುವ ಯುವ ಜನಾಂಗದಿಂದ ಮಾತ್ರ ಸಾಧ್ಯ. ಭಾರತದ ಸಮಗ್ರ ಅಭಿವೃದ್ಧಿಗಾಗಿ ಎಲ್ಲಾ ಸ್ತರಗಳಲ್ಲಿ ಸಾಮೂಹಿಕ ಪ್ರಯಾಸ ಅಗತ್ಯ ಇದೆ. ಆರ್ಟ್ ಆಫ್ ಲಿವಿಂಗ್ನಂಥ ಸಂಸ್ಥೆಗಳು ಇದರ ಜವಾಬ್ದಾರಿ ವಹಿಸಬೇಕು. ಕೆಮಿಕಲ್ ಗೊಬ್ಬರಗಳಿಂದ ನಮ್ಮ ಭೂ ತಾಯಿ ಹಾಳಾಗುತ್ತಿದೆ. ಈ ಸಂಬಂಧ ಅಭಿಯಾನ ಮಾಡುವಲ್ಲಿ ಆರ್ಟ್ ಆಫ್ ಲಿವಿಂಗ್ ಕೊಡುಗೆ ಹೆಚ್ಚಿದೆ. ಇಕಾಲಜಿ ಮತ್ತು ಎಕಾನಮಿಯನ್ನು ನಾವು ಬೇರ್ಪಡಿಸಲು ಸಾಧ್ಯವಿಲ್ಲ ಎಂದರು.ಕೆಲ ದಿನಗಳಲ್ಲಿ ಮುಂಗಾರು ಆರಂಭವಾಗಲಿದೆ. ಈ ಹಿನ್ನೆಲೆ ಜಲಸಂರಕ್ಷಣೆ ಸಂಬಂಧ ವ್ಯಾಪಕ ಜಾಗೃತಿ ಮೂಡಿಸಬಹುದು. ವಿದ್ಯುತ್ ಶಕ್ತಿ ಉಳಿಸುವುದು, ಏಕ ಬಳಕೆ ಪ್ಲಾಸ್ಟಿಕ್ನಿಂದ ದೂರ ಇರುವುದು, ಸ್ಥಾನೀಯ ಉತ್ಪಾದಕತೆಗೆ ಪ್ರೋತ್ಸಾಹ ನೀಡುವುದು ಆರ್ಟ್ ಆಫ್ ಲಿವಿಂಗ್ ಆಗಿದೆ. ಮಿಷನ್ ಲೈಫ್ ಕೂಡ ಆರ್ಟ್ ಆಫ್ ಲಿವಿಂಗ್ ಆಗಿದೆ. ಈ ಗುರಿಗಳನ್ನು ನೀವು ಪೂರ್ಣಗೊಳಿಸಬೇಕು ಎಂದು ಕರೆ ನೀಡಿದರು.

ಮಾತನಾಡಿದ ಶ್ರೀ ರವಿಶಂಕರ ಗುರೂಜಿ, ವಿಶ್ವದ ಪರಮಮಿತ್ರ ಭಾರತದ ಅಮೂಲ್ಯಪುತ್ರ, ಶ್ರೇಷ್ಠ ಪುತ್ರ ಪ್ರಧಾನಿ ನರೇಂದ್ರ ಮೋದಿ ಆಗಿದ್ದಾರೆ. ವಸುದೈವ ಕುಟುಂಬಕಂ ಉದ್ಘೋಷದ ಮೂಲಕ ನೀವು ಭಾರತವನ್ನು ಬೇರೆಯದೇ ಸ್ತರಕ್ಕೆ ತೆಗೆದುಕೊಂಡುಹೋಗಿದ್ದೀರಿ. ನಾವು ಈ ಮುಂಚೆ ಹೆಚ್ಚು ಅಸುರಕ್ಷತೆ ಅನುಭವಿಸುತ್ತಿದ್ದೆವು. ಆದರೆ ಈಗ ಅದಿಲ್ಲ. ರೆಡ್ ಟೆರರ್ಗೆ ನೀವು ಅಂತ್ಯ ಹಾಡಿದ್ದೀರಿ. ದೇಶದಲ್ಲಿ ಹೊಸ ಹುರುಪು ನೀಡಿದ್ದೀರಿ ಎಂದು ಶ್ಲಾಘಿಸಿದರು. ಕಡಿಮೆ ಅವಧಿಯಲ್ಲಿ ನೀವು ಭಾರತವನ್ನು ಕೇಳುವ ದೇಶದಿಂದ ಕೊಡುವಂಥ ದೇಶವನ್ನಾಗಿ ಮಾಡಿದ್ದೀರಿ. ಜಗತ್ತು ಆರ್ಥಿಕ ಸ್ಥಿತಿ ಹದಗೆಟ್ಟಾಗ ನೀವು ಭಾರತವನ್ನು ಸಂಭಾಳಿಸಿದಿರಿ. ಭಾರತವನ್ನು 14ನೇ ಆರ್ಥಿಕತೆಯಿಂದ ಈಗ ಮೂರನೇ ಆರ್ಥಿಕತೆಯ ಹೊಸ್ತಿಲಲ್ಲಿ ತಂದು ನಿಲ್ಲಿಸಿದ್ದೀರಿ. ಅಯೋಧ್ಯೆಯಲ್ಲಿ ಶ್ರೀರಾಮ ಟೆಂಟ್ನಲ್ಲಿ ವಾಸವಾಗಿದ್ದರು. ನೀವು ಅದರ ಎಲ್ಲಾ ಸಮಸ್ಯೆಯನ್ನು ನಿರ್ಮೂಲನೆ ಮಾಡಿ ಭವ್ಯ ಮಂದಿರವನ್ನು ನಿರ್ಮಿಸಿದ್ದೀರಿ. ಕಾಶಿಗೆ ನೀವು ಭವ್ಯತೆಯನ್ನು ಕೊಟ್ಟಿದ್ದೀರಿ. ಕರ್ನಾಟಕದಿಂದ ಕಾಶಿಗೆ ನಿಕಟ ಸಂಬಂಧ ಇದೆ. ಯೋಗಕ್ಕೆ ನೀವು ಸ್ಥಾನಮಾನ ನೀಡಿದ್ದೀರಿ. ವಿಶ್ವ ಯೋಗ ದಿನ ಮಾಡಿ ಯೋಗಕ್ಕೆ ಸರ್ವ ಮಾನ್ಯ ನೀಡಿದ್ದೀರಿ. ದೇಶವನ್ನು ಹೀಗೆ ಮುಂಚೂಣಿಯಲ್ಲಿ ಕೊಂಡೊಯ್ಯಿರಿ. ದೀರ್ಘಾಯು ಆಗಿರಿ ಎಂದು ಪ್ರಧಾನಿ ಮೋದಿ ಅವರಿಗೆ ಹಾರೈಸಿದರು.




## ಆರ್ಟ್ ಆಫ್ ಲಿವಿಂಗ್ ಧ್ಯಾನ ಮಂದಿರ ಉದ್ಘಾಟಿಸಿದ ಪ್ರಧಾನಿ

### ಬೆಂಗಳೂರು ಆಧ್ಯಾತ್ಮಿಕ ಚಿಂತನೆಗಳ ನೆಲೆ 'ನಮೋ' ಬಣ್ಣನೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಕೇಂದ್ರದಲ್ಲಿ ನಿರ್ಮಿಸಲಾದ ಧ್ಯಾನ ಮಂದಿರವನ್ನು ಉದ್ಘಾಟಿಸಿದ್ದಾರೆ.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಹುಟ್ಟುಹಬ್ಬ ಹಿನ್ನೆಲೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿ ಅವರಿಗೆ ಶ್ರೀ ಶ್ರೀ ರವಿಶಂಕರ್ ಗುರೂಜಿ ಆರ್ಟ್ ಆಫ್ ಲಿವಿಂಗ್ ಫೋಟೊ ಕೊಟ್ಟು ಸನ್ಮಾನ ಮಾಡಿದರು.

ಅವರು ಭಾನುವಾರ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಕೇಂದ್ರದಲ್ಲಿ ನಿರ್ಮಿಸಲಾದ ಧ್ಯಾನ ಮಂದಿರವನ್ನು ಉದ್ಘಾಟಿಸಿದ್ದಾರೆ. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಹುಟ್ಟುಹಬ್ಬ ಹಿನ್ನೆಲೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿ ಅವರಿಗೆ ಶ್ರೀ ಶ್ರೀ ರವಿಶಂಕರ್ ಗುರೂಜಿ ಆರ್ಟ್ ಆಫ್ ಲಿವಿಂಗ್ ಫೋಟೊ ಕೊಟ್ಟು ಸನ್ಮಾನ ಮಾಡಿದರು. ಕಮಲದ ಆಕೃತಿಯಲ್ಲಿ ನಿರ್ಮಾಣ ಮಾಡಲಾಗಿರುವ ನೂತನ ಧ್ಯಾನ ಮಂದಿರವನ್ನು ಉದ್ಘಾಟಿಸಿದ ಪ್ರಧಾನಿ ಮೋದಿ ಎಲ್ಲರಿಗೂ ನಮಸ್ಕಾರ ಎಂದು ಕನ್ನಡದಲ್ಲೇ ಮಾತು ಆರಂಭಿಸಿದರು.

ಬಳಿಕ ಮಾತನಾಡಿದ ಅವರು, ಇಲ್ಲಿಯ ಭೇಟಿ ಸ್ಮೃತಿ ಪಟಲದಲ್ಲಿ ಸದಾ ಇರಲಿದೆ. ಸಂಸ್ಥೆಯ ಬಗ್ಗೆ ರವಿಶಂಕರ್ ಗುರೂಜಿ ಅವರು ಬಹಳ ಹೇಳಿದ್ದಾರೆ. ಕೆಲಸಕ್ಕೆ ನಾವು ಇರೋದು, ನಿಮಗಾಗಿ, ನಿಮ್ಮಿಂದ ಇದೆಲ್ಲಾ, ನಾನು ಮತ್ತೊಮ್ಮೆ ಇಲ್ಲಿಗೆ ಬರುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

# ಪ್ರಧಾನಿ ಸಂಚಾರ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿ ಪತ್ತೆ: ಶಂಕಿತನ ಬಂಧನ

**ಬೆಂಗಳೂರು, ಮೆ 10:** ನಗರದ ಹೊರವಲಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಭೇಟಿಯ ಸಂದರ್ಭದಲ್ಲಿ ಸಂಚಾರ ಮಾರ್ಗದ ಸಮೀಪದಲ್ಲೇ ಜಿಲೆಟಿನ್ ಪತ್ತೆಯಾಗಿತ್ತು. ಈ ಸಂಬಂಧ ಈಗ ಚುರುಕುಗೊಂಡಿದ್ದು ರಾಮನಗರ ಡಿ.ವೈ.ಎಸ್.ಪಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ. ಈಗಾಗಲೇ ಅನುಮಾನದ ಮೇರೆಗೆ ಓರ್ವ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಇಂದು (ಮೇ 10) ಮೋದಿ ಆರ್ಟ್ ಆಫ್ ಲಿವಿಂಗ್ ಕೇಂದ್ರದ 45ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದ ವೇಳೆ ಈ ಸುರಕ್ಷತಾ ಲೋಪ ಕಂಡುಬಂದಿದೆ. ಇಂದು ಬೆಳಿಗ್ಗೆ ಭದ್ರತಾ ಸಿಬ್ಬಂದಿಗಳು ತಪಾಸಣೆ ನಡೆಸುತ್ತಿದ್ದಾಗ, ತಾತಗುಣಿ ಬಳಿಯ ಅಗ್ರಹಾರ ಕೆರೆಯ ರಸ್ತೆ ಬದಿಯ ಪಾದಚಾರಿ ಮಾರ್ಗದಲ್ಲಿ ಎರಡು ಜಿಲೆಟಿನ್ ಕಡ್ಡಿಗಳು ಬಿದ್ದಿರುವುದು ಕಂಡುಬಂದಿದೆ. ಇದು ಪ್ರಧಾನಿ ಮೋದಿ ಭಾಗವಹಿಸಬೇಕಿದ್ದ ಮುಖ್ಯ ಕಾರ್ಯಕ್ರಮದ ಸ್ಥಳದಿಂದ ಕೇವಲ ಮೂರು ಕಿಲೋಮೀಟರ್ ದೂರದಲ್ಲಿದೆ. ತಕ್ಷಣವೇ ಕಾರ್ಯಪ್ರವೃತ್ತರಾದ ಬಾಂಬ್ ಪತ್ತೆ ದಳ ಮತ್ತು ಶ್ವಾನ ದಳದ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಈ ಪ್ರದೇಶ ಗಣಿಗಾರಿಕೆಗೆ ಹೆಸರುವಾಸಿಯಾಗಿರುವುದರಿಂದ, ಅಲ್ಲಿ ಬಳಸುವ ಸ್ಫೋಟಕಗಳು ಇಲ್ಲಿಗೆ ಹೇಗೆ ಬಂದವು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.ಈ ಜಿಲೆಟಿನ್ ಕಡ್ಡಿಗಳು ಕೇವಲ ಗಣಿಗಾರಿಕೆಯ ಅಚಾತುರ್ಯವೇ ಅಥವಾ ಯಾವುದಾದರೂ ವಿಧ್ವಂಸಕ ಕೃತ್ಯದ ಭಾಗವೇ ಎಂಬ ಬಗ್ಗೆ ಪೊಲೀಸರು ವಿವಿಧ ಆಯಾಮಗಳಲ್ಲಿ ವಿಚಾರಣೆ ನಡೆಸುತ್ತಿದ್ದು, ಸದ್ಯ ಇಡೀ ಪ್ರದೇಶವನ್ನು ಹದ್ದಿನ ಕಣ್ಣಿನಿಂದ ಕಾವಲು ಕಾಯಲಾಗುತ್ತಿದೆ. ಸ್ಥಳದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಬೀಡುಬಿಟ್ಟಿದ್ದು, ಭದ್ರತೆಯಲ್ಲಿ



ದೇಶದ ಪ್ರಧಾನಮಂತ್ರಿಗಳ ನಿಗದಿತ ಸಂಚಾರದ ರಸ್ತೆಯಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ಗಂಭೀರ ಭದ್ರತಾ ಲೋಪ ಮಾತ್ರವಲ್ಲ, ಇದು ಕಾನೂನು ಸುವ್ಯವಸ್ಥೆ ಹೊಣೆ ಹೊತ್ತಿರುವ ರಾಜ್ಯದ ಕಾಂಗ್ರೆಸ್ ಸರಕಾರದ ಅಕ್ಷಮ್ಯ ಮತ್ತು ಗಂಭೀರ ವೈಫಲ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಭದ್ರತೆ ಸಂಪೂರ್ಣ ಕುಸಿದಿದೆ. ಅದೂ ಕೂಡ ರಾಜಧಾನಿ ಬೆಂಗಳೂರಿನಲ್ಲಿ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಖಂಡಿಸಿದ್ದಾರೆ. ಗರಿಷ್ಠ ಭದ್ರತೆ ನೀಡಬೇಕಾದ ದೇಶದ ಆದರಣೀಯ ಪ್ರಧಾನಮಂತ್ರಿಗಳ ಸುರಕ್ಷತೆ ವಿಷಯದಲ್ಲಿ ಕಿಂಚಿತ್ ಲೋಪಕ್ಕೂ ಅವಕಾಶ ಇರಕೂಡದು. ಇಂತಹ ಸೂಕ್ಷ್ಮ, ಗಂಭೀರ ವಿಷಯವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಶೀಘ್ರದಲ್ಲಿ ಕೂಲಂಕುಶ ತನಿಖೆ ನಡೆಸಿ, ಕೃತ್ಯದ ಹಿಂದಿನ ದುಷ್ಕರ್ಮಿಗಳನ್ನು ಪತ್ತೆ ಮಾಡಿ ಶಿಕ್ಷಿಸುವುದು ಮಾತ್ರವಲ್ಲ, ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಮತ್ತು ಆಧ್ಯಾತ್ಮಿಕ ನಾಯಕ ರವಿಶಂಕರ್ ಅವರು ಭಾನುವಾರ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಅಂತರರಾಷ್ಟ್ರೀಯ ಕೇಂದ್ರ ಆವರಣದ ಗಣೇಶ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

# ಬೀದರ್–ಕಲಬುರಗಿ ಮಧ್ಯೆ ವಿಶೇಷ ರೈಲು ಸಂಚಾರ ಕಾಯಂ

### ರೈಲ್ವೆ ಇಲಾಖೆಗೆ ಡಾ. ಉಮೇಶ್ ಜಾಧವ್ ಅಭಿನಂದನೆ



**ಕಲಬುರಗಿ, ಮೇ 10:** ಲೋಕಸಭಾ ಸದಸ್ಯರಾಗಿದ್ದ ವೇಳೆ ರೈಲ್ವೇ ಇಲಾಖೆ ಮೇಲೆ ಒತ್ತಡ ಹೇರಿ ಆರಂಭಿಸಿದ ವಿಶೇಷ ರೈಲು ಸೇವೆಗಳನ್ನು ಈಗ ಮೇ 2026 ರಿಂದ ಭಾರತೀಯ ರೈಲ್ವೆ ಶಾಶ್ವತ ಆಧಾರದ ಮೇಲೆ ನಿಯಮಿತ ಸಂಚಾರಕ್ಕೆ ಅನುಮತಿ ನೀಡಿದ್ದು ಸಂತಸದ ಸಂಗತಿ ಎಂದು ಮಾಜಿ ಲೋಕಸಭಾ ಸದಸ್ಯರಾದ ಡಾ. ಉಮೇಶ್ ಜಾಧವ್ ಹೇಳಿದ್ದಾರೆ.

ಕೇಂದ್ರ ರೈಲು ಇಲಾಖೆಯ ಸಚಿವ ಅಶ್ವಿನಿ ವೈಷ್ಣವ್ ಅವರ ಜೊತೆ ವಿಶೇಷ ರೈಲುಗಳನ್ನು ಕಾಯಂ ಆಗಿ ಸಂಚಾರ ಮಾಡಲು ಒತ್ತಡ ಹೇರಿದ ಪರಿಣಾಮವಾಗಿ ಇದೀಗ ಒಪ್ಪಿಗೆ ದೊರೆತಿದ್ದು ಬೆಂಗಳೂರು, ಕಲಬುರಗಿ, ಬೀದರ್ ಮಧ್ಯೆ ಸಂಚರಿಸುವ ರೈಲು ಪ್ರಯಾಣಿಕರಿಗೆ ಮೋದಿ ಸರ್ಕಾರವು ದೊಡ್ಡ ಕೊಡುಗೆಯನ್ನು ನೀಡಿದೆ.

ಈ ಭಾಗದಲ್ಲಿ ವಂದೇ ಭಾರತ್ ರೈಲು ಸೇವೆ ಆರಂಭಿಸುವಂತೆ ಬೇಡಿಕೆ ಒಡ್ಡಿ ಮನವಿ ಸಲ್ಲಿಸಿದಾಗ ಈ ವಿಶೇಷ ರೈಲುಗಳನ್ನು ಸಂಚಾರಕ್ಕೆ ಇಲಾಖೆ ಅನುಮತಿ ನೀಡಿತ್ತು.

ವಂದೇ ಭಾರತ್ ರೈಲು ಸೇವೆ ಆರಂಭವಾದಾಗ ತಾತ್ಕಾಲಿಕ ಅವಧಿಗೆ ಪರವಾನಿಗೆ ಇದ್ದ ವಿಶೇಷ ರೈಲು ಸಂಚಾರ ಈಗ ನಿಯಮಿತಗೊಳಿಸಲಾಗಿದೆ. ರೈಲು ಸಂಖ್ಯೆ 06539/06540 ಎಸ್‌ಎಂವಿಬಿ ಬೆಂಗಳೂರು – ಕಲಬುರಗಿ ವಾರಕ್ಕೆ ಮೂರು ಬಾರಿ ಸಂಚರಿಸುತ್ತಿದ್ದ ವಿಶೇಷ ಎಕ್ಸ್‌ಪ್ರೆಸ್ ರೈಲಿಗೆ 2024 ರ ಮಾರ್ಚ್ 9 ರಂದು ಹಸಿರು ನಿಶಾನೆ ತೋರಿದಾಗ ಪ್ರಯಾಣವು ಆರಂಭಗೊಂಡಿತ್ತು. ನಂತರ ಸಾರ್ವಜನಿಕರ ಭಾರೀ ಬೇಡಿಕೆ ಯಿಂದಾಗಿ ಇದನ್ನು ಬೀದರ್ ವರೆಗೆ ವಿಸ್ತರಿಸಲಾಯಿತು. ಮತ್ತೊಂದು ವಿಶೇಷ ಸೇವೆ 06207/08 ಬೆಂಗಳೂರು ಕಂಟೋನ್ಮೆಂಟ್ – ಕಲಬುರಗಿ ಸಾಪ್ತಾಹಿಕ ಎಕ್ಸ್ಪ್ರೆಸ್ ಅನ್ನು ನಂತರ ಸಂಚಾರಕ್ಕೆ ಅನುಮತಿ ನೀಡಲಾಗಿತ್ತು.

ಈಗ ಎರಡೂ ರೈಲು ಸೇವೆಗಳನ್ನು ಹೊಸ ರೈಲು ಸಂಖ್ಯೆಗಳೊಂದಿಗೆ ಕ್ರಮಬದ್ಧಗೊಳಿಸಲಾಗಿದೆ. 16559/16560 ಎಸ್ ಎಮ್ ವಿಬಿ ಬೆಂಗಳೂರು – ಬೀದರ್ ತನಕ ವಾರಕ್ಕೆ ಎರಡು ಸಲ ಸಂಚರಿಸುವ ಎಕ್ಸ್‌ಪ್ರೆಸ್ ಎಸ್‌ಎಂವಿಬಿ ಬೆಂಗಳೂರಿನಿಂದ ಮೇ 15, 2026 ಮತ್ತು ಬೀದರ್‌ನಿಂದ ಮೇ 16, 2026 ರಿಂದ ನಿಯಮಿತಗೊಳಿಸಲಾಗಿದೆ.

16563/16564 ಬೆಂಗಳೂರು ಕಂಟೋನ್ಮೆಂಟ್– ಕಲಬುರಗಿ ಸಾಪ್ತಾಹಿಕ ಎಕ್ಸ್‌ಪ್ರೆಸ್ ಬೆಂಗಳೂರು ಕಂಟೋನ್ಮೆಂಟ್‌ನಿಂದ ಮೇ 16, 2026 ರಿಂದ ಮತ್ತು ಕಲಬುರಗಿಯಿಂದ ಮೇ 17, 2026 ರಿಂದ ನಿಯಮಿತಗೊಳಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ರೈಲು ಪ್ರಯಾಣಿಕರ ಪ್ರಯಾಣ ಸಮಸ್ಯೆಗೆ ಪರಿಹಾರ ರೂಪವಾಗಿ ರೈಲು ಸೇವೆ ಲಭ್ಯವಾಗಲಿದೆ.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ರೈಲ್ವೆ ಸಂಪರ್ಕವನ್ನು ಸುಧಾರಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಸಚಿವ ಅಶ್ವಿನಿ ವೈಷ್ಣವ್ ಮತ್ತು ಸಹಾಯಕ ಸಚಿವರಾದ ವಿ.ಸೋಮಣ್ಣ ಅವರ ಮೇಲೆ ನಿರಂತರ ಒತ್ತಡ ಹಾಕಿದ್ದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಇಲಾಖೆಯು ದೊಡ್ಡ ಕೊಡುಗೆಯನ್ನು ನೀಡಿರುವುದಕ್ಕೆ ಅಭಿನಂದನೆಗಳು ಎಂದು ಡಾ.ಉಮೇಶ್ ಜಾಧವ್ ಹರ್ಷ ವ್ಯಕ್ತಪಡಿಸಿದ್ದಾರೆ.

# ತಮಿಳುನಾಡಿನ ಜನಾದೇಶವು ಸಾಮಾಜಿಕ ನ್ಯಾಯ ಮತ್ತು ಸ್ವಾಭಿಮಾನದ ಪರಂಪರೆ ಎತ್ತಿಹಿಡಿದಿದೆ: ವಿಜಯ್‌ಗೆ ಅಭಿನಂದನೆ– ಮಲ್ಲಿಕಾರ್ಜುನ ಖರ್ಗೆ

**ನವದೆಹಲಿ, ಮೇ 10:** ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿ. ಜೋಸೆಫ್ ವಿಜಯ್ ಅವರನ್ನು ಅಭಿನಂದಿಸಿದ್ದಾರೆ, ಹೊಸ ಸರ್ಕಾರದ ರಚನೆಯು ರಾಜ್ಯದ ದೀರ್ಘಕಾಲೀನ ಆದರ್ಶಗಳಾದ ಸ್ವಾಭಿಮಾನ, ಸಾಮಾಜಿಕ ನ್ಯಾಯ ಮತ್ತು ವೈಚಾರಿಕ ಚಿಂತನೆಯ ಶಾಶ್ವತ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದ ನಂತರ, ಸಾಮಾಜಿಕ ಮಾಧ್ಯಮ ವೇದಿಕೆ ಘ ನಲ್ಲಿ ಪೋಸ್ಟ್ ಮಾಡಿದ ಖರ್ಗೆ, ವಿಜಯ್, ತಮಿಳಗ ವೆಟ್ರಿ ಕಳಗಂ ಮತ್ತು "ಸಂಪೂರ್ಣ ಪ್ರಗತಿಪರ ಮೈತ್ರಿಕೂಟ"ಕ್ಕೆ ತಮ್ಮ "ಹೃದಯಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳನ್ನು" ಸಲ್ಲಿಸಿದ್ದಾರೆ.

"ಈ ಸರ್ಕಾರದ ರಚನೆಯು ಸ್ವಾಭಿಮಾನ, ಸಾಮಾಜಿಕ ನ್ಯಾಯ, ಸಬಲೀಕರಣ ಮತ್ತು ವೈಚಾರಿಕ ಚಿಂತನೆಯ ಶಾಶ್ವತ ಶಕ್ತಿಯನ್ನು ಪುನರುಚ್ಚರಿಸುತ್ತದೆ, ತಮಿಳುನಾಡಿನ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ದೀರ್ಘಕಾಲದಿಂದ ವ್ಯಾಖ್ಯಾನಿಸಿರುವ ಮೌಲ್ಯಗಳು. ಇದು ಪೆರಿಯಾರ್ ಮತ್ತು ಕಾಮರಾಜರ್ ರೂಪಿಸಿದ ಪರಂಪರೆಯಾಗಿದೆ" ಎಂದು ಕಾಂಗ್ರೆಸ್ ನಾಯಕ ಹೇಳಿದರು.



ತಮಿಳುನಾಡಿನಾದ್ಯಂತ ಲಕ್ಷಾಂತರ ಜನರು, ವಿಶೇಷವಾಗಿ ಮಹತ್ವಾಕಾಂಕ್ಷೆಯ ಯುವಕರು, ಹೊಸ ಸರ್ಕಾರದ ಮೇಲೆ ನಂಬಿಕೆ ಇಟ್ಟಿದ್ದಾರೆ ಮತ್ತು ವಿಜಯ್ ಅವರ ನಾಯಕತ್ವವು ಆಡಳಿತದಲ್ಲಿ ಆ ಆದರ್ಶಗಳನ್ನು ಎತ್ತಿಹಿಡಿಯುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ ಎಂದು ಖರ್ಗೆ ಹೇಳಿದರು.

"ತಮಿಳುನಾಡಿನಾದ್ಯಂತ ಲಕ್ಷಾಂತರ ಜನರು, ವಿಶೇಷವಾಗಿ ಮಹತ್ವಾಕಾಂಕ್ಷೆಯ ಯುವಕರು, ಟಿವಿಕೆ ಮೇಲೆ ತಮ್ಮ ನಂಬಿಕೆಯನ್ನು ಇಟ್ಟಿದ್ದಾರೆ. ಅವರ ನಾಯಕತ್ವದಲ್ಲಿ, ಈ ಆದರ್ಶಗಳು ಆಡಳಿತವನ್ನು ಮಾರ್ಗದರ್ಶನ ಮಾಡುವುದನ್ನು ಮತ್ತು ರಾಷ್ಟ್ರವನ್ನು ಪ್ರೇರೇಪಿಸುವುದನ್ನು ಮುಂದುವರಿಸುತ್ತವೆ ಎಂದು ನನಗೆ ವಿಶ್ವಾಸವಿದೆ" ಎಂದು ಅವರು ಬರೆದಿದ್ದಾರೆ, "ಕರುಣೆ, ಒಳಗೊಳ್ಳುವಿಕೆ ಮತ್ತು ಬದ್ಧತೆಯೊಂದಿಗೆ ಜನರಿಗೆ ಸೇವೆ ಸಲ್ಲಿಸುವಲ್ಲಿ ಹೊಸ ಸರ್ಕಾರ ಯಶಸ್ವಿಯಾಗಲಿ ಎಂದು ಹಾರೈಸಿದರು.

"ಮುಖ್ಯಮಂತ್ರಿ ಹುದ್ದೆಗೆ ವಿಜಯ್ ಅವರ ಉನ್ನತಿಯು ನಟ–ರಾಜಕಾರಣಿಗೆ ನಾಟಕೀಯ ರಾಜಕೀಯ ಏರಿಕೆಯನ್ನು ಸೂಚಿಸುತ್ತದೆ, ಅವರು ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗಳ ಬಗ್ಗೆ ವರ್ಷಗಳ ಊಹಾಪೋಹಗಳ ನಂತರ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು. ಪ್ರಮುಖ ರಾಜಕೀಯ ಶಕ್ತಿಯಾಗಿ ಅವರ ಪಕ್ಷವು ಹೊರಹೊಮ್ಮಿರುವುದು ತಮಿಳುನಾಡಿನ ರಾಜಕೀಯ ಭೂದೃಶ್ಯವನ್ನು ಗಮನಾರ್ಹವಾಗಿ ಬದಲಾಯಿಸಿದೆ, ಸಾಂಪ್ರದಾಯಿಕವಾಗಿ ದ್ರಾವಿಡ ಪಕ್ಷಗಳು ಪ್ರಾಬಲ್ಯ ಹೊಂದಿವೆ.

ದ್ರಾವಿಡ ಚಳುವಳಿ, ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ಗುರುತಿನಲ್ಲಿ ಬೇರೂರಿರುವ ತಮಿಳುನಾಡು ರಾಜಕೀಯದ ಸೈದ್ಧಾಂತಿಕ ಅಡಿಪಾಯಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಕಾಂಗ್ರೆಸ್ ಪಕ್ಷದ ಪ್ರಯತ್ನವನ್ನು ಖರ್ಗೆ ಅವರ ಹೇಳಿಕೆಗಳು ಒತ್ತಿಹೇಳುತ್ತವೆ. ಸಮಾಜ ಸುಧಾರಕ ಪೆರಿಯಾರ್ ಇ.ವಿ. ರಾಮಸಾಮಿ ಮತ್ತು ಮಾಜಿ ಕಾಂಗ್ರೆಸ್ ನಾಯಕ ಕೆ. ಕಾಮರಾಜ್ ಅವರ ಉಲ್ಲೇಖಗಳು ಹೊಸ ಸರ್ಕಾರದ ಅಡಿಯಲ್ಲಿ ತಮಿಳುನಾಡಿನ ಸಾಮಾಜಿಕ–ರಾಜಕೀಯ ಪರಂಪರೆಯ ನಿರಂತರತೆಯ ಸುತ್ತಲಿನ ವಿಶಾಲ ರಾಜಕೀಯ ಸಂದೇಶವನ್ನು ಎತ್ತಿ ತೋರಿಸಿವೆ.


ತಮಿಳುನಾಡು ಹೊಸ ರಾಜಕೀಯ ಹಂತವನ್ನು ಪ್ರವೇಶಿಸುತ್ತಿದ್ದಂತೆ ಮುಂಬರುವ ತಿಂಗಳುಗಳಲ್ಲಿ ಹೊಸ ಆಡಳಿತದ ಕಾರ್ಯವೈಖರಿ ಮತ್ತು ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸೇರಿದಂತೆ ರಾಷ್ಟ್ರೀಯ ಪಕ್ಷಗಳೊಂದಿಗಿನ ಅದರ ಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುವುದು ಎಂದು ರಾಜಕೀಯ ವೀಕ್ಷಕರು ನಂಬುತ್ತಾರೆ.

# 200 ಯೂನಿಟ್ ಉಚಿತ ವಿದ್ಯುತ್, ಮಹಿಳೆಯರ ರಕ್ಷಣೆಗೆ ವಿಶೇಷ ಪಡೆ

**ಚೆನ್ನೈ, ಮೇ 10:** 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಮಹಿಳೆಯರಿಗೆ ವಿಶೇಷ ಕಾರ್ಯಪಡೆ ರಚಿಸುವುದಾಗಿ ತಮಿಳುನಾಡಿನ ನೂತನ ಸಿಎಂ ವಿಜಯ್ ಗ್ಯಾರಂಟಿ ಘೋಷಣೆ ಮಾಡಿದ್ದಾರೆ. ತಮಿಳುನಾಡು ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ ಟಿವಿಕೆ ಪಕ್ಷದ ಮುಖ್ಯಸ್ಥ ವಿಜಯ್ ಈ ಗ್ಯಾರಂಟಿಗಳನ್ನು ಘೋಷಿಸಿದ್ದಾರೆ. ಗೃಹ ಬಳಕೆದಾರರಿಗೆ 200 ಯೂನಿಟ್ವರೆಗೆ ಉಚಿತ ವಿದ್ಯುತ್ ನೀಡುವ ಕಡತಕ್ಕೆ ವಿಜಯ್ ಸಹಿ ಹಾಕಿದ್ದಾರೆ. ಈ ಸಂದರ್ಭ ಮಹಿಳೆಯರ ರಕ್ಷಣೆಗಾಗಿ ವಿಶೇಷ ಪಡೆ ರಚಿಸುವುದಾಗಿ ಭರವಸೆ ನೀಡಿದ್ದಾರೆ. ಪ್ರಮಾಣವಚನ ಸ್ವೀಕಾರ ಬಳಿಕ ಮಾತನಾಡಿದ ವಿಜಯ್, ನಾನು ಯಾವುದೇ ರಾಜಮನೆತನದಿಂದ ಬಂದಿಲ್ಲ. ನಾನು ಕೂಡ ಕಷ್ಟವನ್ನು ಅನುಭವಿಸಿದ್ದೇನೆ. ಜನರೇ ನನ್ನನ್ನು ಆರಿಸಿದ್ದಾರೆ. ಸುಳ್ಳು ಭರವಸೆಗಳನ್ನು ನೀಡಿ ನಾನು ಮೋಸ ಮಾಡಲ್ಲ ಎಂದರು. ತಮಿಳುನಾಡು ರಾಜ್ಯವನ್ನು ಡ್ರಗ್ಸ್ ಮುಕ್ತ ಮಾಡುತ್ತೇನೆ. ಜನರ ಒಂದು ಪೈಸೆಯನ್ನೂ ಮುಟ್ಟಲ್ಲ. ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸ್ವಲ್ಪ ಸಮಯ ನೀಡಿ ಎಂದು ಜನರಲ್ಲಿ ಮನವಿ ಮಾಡಿದರು.

# ಶನೇಶ್ವರನ ಆಶೀರ್ವಾದ ಪಡೆಯಲು ಇದು ಸೂಕ್ತಸಮಯವೆನ್ನಿಸಿತು: ಡಿಸಿಎಂ

**ಪುದುಚೇರಿ, ಮೇ 10:** ಪುದುಚೆರಿಯ ಕಾರೈಕಲ್ ಜಿಲ್ಲೆಯ ತಿರುನಲ್ಲರ್ ಶನೀಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ರಾಜಕೀಯದಲ್ಲಿ ಧರ್ಮನಿರಪೇಕ್ಷ ಶಕ್ತಿಗಳ ಏಕತೆ ಅತ್ಯಂತ ಅಗತ್ಯವೆಂದು ಹೇಳಿದ್ದಾರೆ.ದೇವರ ದರ್ಶನ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಾನು ಶನೇಶ್ವರನ ಆಶೀರ್ವಾದ ಪಡೆಯಲು ಇಲ್ಲಿ ಬಂದಿದ್ದೇನೆ. ಅನೇಕ ವರ್ಷ ಗಳಿಂದ ದುಷ್ಟ ಶಕ್ತಿಗಳಿಂದ ರಕ್ಷಣೆಗಾಗಿ ನಾನು ಇಲ್ಲಿ ಬರುತ್ತಿದ್ದೇನೆ. ಆದ್ದರಿಂದ ಇದು ಸರಿಯಾದ ಸಮಯವೆಂದು ಭಾವಿಸಿ ಪೂಜೆ ಸಲ್ಲಿಸಿದೆ. ರಾಜ್ಯ, ದೇಶ ಮತ್ತು ಎಲ್ಲೆಡೆ ಸಮೃದ್ಧಿ ಇರಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಹೇಳಿದರು. ತಮಿಳುನಾಡಿನ ರಾಜಕೀಯ ಸ್ಥಿತಿಗತಿ ಕುರಿತು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಈಗಾಗಲೇ ತನ್ನ ಬದ್ಧತೆಯನ್ನು ತಿಳಿಸಿದೆ; ಧರ್ಮ ನಿರಪೇಕ್ಷ ಶಕ್ತಿಗಳು ಒಗ್ಗೂಡಬೇಕು ಎಂಬುದೇ ಅವರ ಉದ್ದೇಶ, ಪ್ರಜಾಪ್ರಭುತ್ವ ಸರಿಯಾಗಿ ಪುನಃ ಸ್ಥಾಪನೆಯಾಗಬೇಕು ಎಂದು ಹೇಳಿದರು. ನಮ್ಮ ಪಕ್ಷ ತೆಗೆದು ಕೊಂಡಿರುವ ಯಾವುದೇ ನಿರ್ಧಾರವೂ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವ ಉದ್ದೇಶದಿಂದಲೇ. ನಮ್ಮ ಅಂತಿಮ ಗುರಿ ಧರ್ಮನಿರಪೇಕ್ಷ ಶಕ್ತಿಗಳನ್ನು ಒಗ್ಗೂಡಿಸುವುದು ಎಂದು ಹೇಳಿದರು. ಟಿವಿಕೆ 108 ಸ್ಥಾನಗಳನ್ನು ಗೆದ್ದ ಬಳಿಕ, 234 ಸದಸ್ಯರ ವಿಧಾನಸಭೆಯಲ್ಲಿ 118ರ ಬಹುಮತ ಗಡಿಯನ್ನು ತಲುಪಲು ಸಣ್ಣ ಪಕ್ಷಗಳ ಬೆಂಬಲವನ್ನು ಕೇಳಿತ್ತು. ಕಾಂಗ್ರೆಸ್ (5 ಸ್ಥಾನ), ಸಿಪಿಐ (2) ಮತ್ತು ಸಿಪಿಎಂ (2) ಪಕ್ಷಗಳು ವಿಜಯ್ ನೇತೃತ್ವದ ಟಿವಿಕೆಗೆ ಬೆಂಬಲ ನೀಡಿದ್ದವು.



# ತೆಲಂಗಾಣದಲ್ಲಿ ಮುಂದಿನ ಸರ್ಕಾರ ಬಿಜೆಪಿ ರಚಿಸಲಿದೆ: ಪ್ರಧಾನಿ ಮೋದಿ ವಿಶ್ವಾಸ

**ಹೈದರಾಬಾದ್, ಮೇ 10 :** ತೆಲಂಗಾಣದಲ್ಲಿ ಬಿಜೆಪಿ ಮುಂದಿನ ಸರ್ಕಾರ ರಚಿಸಲಿದೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ವ್ಯಕ್ತಪಡಿಸಿದ್ದು, ರಾಜ್ಯದ ಜನರು ಬದಲಾವಣೆಯನ್ನು ಬಯಸುತ್ತಿದ್ದಾರೆ ಮತ್ತು ಕಾಂಗ್ರೆಸ್ ಮತ್ತು ಬಿಆರ್‌ಎಸ್ ಎರಡರ ಬಗ್ಗೆಯೂ ನಿರಾಶೆಗೊಂಡಿದ್ದಾರೆ ಎಂದು ಹೇಳಿದ್ದಾರೆ. ಸಿಕಂದರಾಬಾದ್‌ನ ಪರೇಡ್ ಮೈದಾನದಲ್ಲಿ ತೆಲಂಗಾಣ ಬಿಜೆಪಿ ಆಯೋಜಿಸಿದ್ದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಮೋದಿ, ಬಿಜೆಪಿಯ ಇತ್ತೀಚಿನ ಚುನಾವಣಾ ಗೆಲುವುಗಳು ಪಕ್ಷದ ಅಭಿವೃದ್ಧಿ ಮತ್ತು ಆಡಳಿತ ಮಾದರಿಯಲ್ಲಿ ಹೆಚ್ಚುತ್ತಿರುವ ಸಾರ್ವಜನಿಕ ನಂಬಿಕೆಯನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದರು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ವಿಜಯವನ್ನು ಉಲ್ಲೇಖಿಸಿ ಪ್ರಧಾನಿ, ರಾಜ್ಯದ ಜನರು "ಸರ್ವಾಧಿಕಾರಿ ರಾಜಕೀಯ" ವನ್ನು ತಿರಸ್ಕರಿಸಿದ್ದಾರೆ ಮತ್ತು ಬಿಜೆಪಿಯ ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ಸಿದ್ಧಾಂತವನ್ನು ಸ್ವೀಕರಿಸಿದ್ದಾರೆ ಎಂದು ಹೇಳಿದರು. "ಇಂದು, ತೆಲಂಗಾಣದ ಜನರು ಈ ಬಾರಿ ರಾಜ್ಯದಲ್ಲಿ ಬಿಜೆಪಿಯ ಸರದಿ ಎಂದು ಹೇಳುತ್ತಿದ್ದಾರೆ" ಎಂದು ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರ ಜೋರಾದ ಹರ್ಷೋದ್ಗಾರಗಳ ನಡುವೆ ಮೋದಿ ಹೇಳಿದರು. ತೆಲಂಗಾಣವು ಬಿಜೆಪಿಯ ಬೆಳವಣಿಗೆಯಲ್ಲಿ ಐತಿಹಾಸಿಕ ಪಾತ್ರವನ್ನು ವಹಿಸಿದೆ ಎಂದು ಪ್ರಧಾನಿ ಹೇಳಿದರು ಮತ್ತು ಬಿಜೆಪಿ ರಾಷ್ಟ್ರೀಯವಾಗಿ ಕೇವಲ ಇಬ್ಬರು ಸಂಸದರನ್ನು ಹೊಂದಿದ್ದಾಗ ಪಕ್ಷದ ಮೊದಲ ಸಂಸದರಲ್ಲಿ ಒಬ್ಬರು ಈ ಪ್ರದೇಶದಿಂದ ಆಯ್ಕೆಯಾಗಿದ್ದರು ಎಂದು ನೆನಪಿಸಿಕೊಂಡರು. ದೇಶದ ಅಭಿವೃದ್ಧಿಯು ರಾಜ್ಯಗಳ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ ಎಂದು ಬಿಜೆಪಿ ನಂಬಿದೆ ಎಂದು ಹೇಳಿದ ಮೋದಿ, 2047ರ



ವೇಳೆಗೆ ಅಭಿವೃದ್ಧಿ ಹೊಂದಿದ ಭಾರತದ ಗುರಿಯನ್ನು ಸಾಧಿಸುವಲ್ಲಿ ತೆಲಂಗಾಣ ಮತ್ತು ಹೈದರಾಬಾದ್ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಹಿಂದಿನ ದಿನ ಪ್ರಾರಂಭಿಸಲಾದ ಸಾವಿರಾರು ಕೋಟಿ ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಅವರು ಉಲ್ಲೇಖಿಸಿದರು ಮತ್ತು ಅವು ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯನ್ನು ವೇಗಗೊಳಿಸುತ್ತವೆ ಎಂದು ಹೇಳಿದರು. ಜಹೀರಾಬಾದ್ ಕೈಗಾರಿಕಾ ಕಾರಿಡಾರ್ ಮತ್ತು ವಾರಂಗಲ್ನಲ್ಲಿರುವ ಪಿಎಂ ಮಿತ್ರ ಜವಳಿ ಉದ್ಯಾನವನವನ್ನು ಎತ್ತಿತೋರಿಸಿದ ಪ್ರಧಾನಿ, ಈ ಯೋಜನೆಗಳು ದೊಡ್ಡ ಪ್ರಮಾಣದ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ ಮತ್ತು ತೆಲಂಗಾಣದ ರೈತರು, ಎಂಎಸ್‌ಎಂಇಗಳು ಮತ್ತು ಕೈಗಾರಿಕೆಗಳಿಗೆ ಪ್ರಯೋಜನವನ್ನು ನೀಡುತ್ತವೆ ಎಂದು ಹೇಳಿದರು. ಹತ್ತಿ ಉತ್ಪಾದನೆ ಮತ್ತು ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಹೊಸ ಹತ್ತಿ ಮಿಷನ್ ಅನ್ನು ಕೇಂದ್ರವು ಅನುಮೋದಿಸಿದೆ ಎಂದು ಅವರು ಘೋಷಿಸಿದರು, ಇದು ರಾಜ್ಯದ ಹತ್ತಿ ರೈತರಿಗೆ ಸಹಾಯ ಮಾಡುತ್ತದೆ. ಕಾಂಗ್ರೆಸ್ ಪಕ್ಷವನ್ನು ಟೀಕಿಸಿದ ಮೋದಿ, ಕಾಂಗ್ರೆಸ್ ಸರ್ಕಾರಗಳು ಚುನಾವಣೆಗೆ ಮೊದಲು ಅವಾಸ್ತವಿಕ ಭರವಸೆಗಳನ್ನು ನೀಡಿವೆ ಮತ್ತು ಅಧಿಕಾರಕ್ಕೆ ಬಂದ ನಂತರ ಅವುಗಳನ್ನು ಕಾರ್ಯಗತಗೊಳಿಸಲು ವಿಫಲವಾಗಿವೆ ಎಂದು ಆರೋಪಿಸಿದರು. ಕಾಂಗ್ರೆಸ್ ವಿಭಜಕ ರಾಜಕೀಯವನ್ನು ಉತ್ತೇಜಿಸುತ್ತಿದೆ ಎಂದು ಆರೋಪಿಸಿದರು ಮತ್ತು ಕೆಲವು ಪಕ್ಷಗಳು ವರ್ಷಗಳಲ್ಲಿ ಮಾವೋವಾದಿ ಸಿದ್ಧಾಂತವನ್ನು ಪರೋಕ್ಷವಾಗಿ ಬೆಂಬಲಿಸಿವೆ ಎಂದು ಆರೋಪಿಸಿದರು. ತೆಲಂಗಾಣವು ಮಾವೋವಾದಿ ಪ್ರಭಾವದಿಂದ ಸ್ಥಿರವಾಗಿ ದೂರ ಸರಿಯುತ್ತಿದೆ ಎಂದು ಪ್ರಧಾನಿ ಹೇಳಿದರು ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಅಭಿವೃದ್ಧಿ ಹೊಂದಿದ ತೆಲಂಗಾಣಕ್ಕಾಗಿ "ಹೊಸ ದೃಷ್ಟಿಕೋನ ಮತ್ತು ನವೀಕರಿಸಿದ ಬದ್ಧತೆ"ಯೊಂದಿಗೆ ಕಾರ್ಯನಿರ್ವಹಿಸುತ್ತದೆ ಎಂದು ಪ್ರತಿಪಾದಿಸಿದರು. ಕೇಂದ್ರ ಸಚಿವರಾದ ಜಿ. ಕಿಶನ್ ರೆಡ್ಡಿ ಮತ್ತು ಬಂಡಿ ಸಂಜಯ್ ಕುಮಾರ್, ತೆಲಂಗಾಣ ಬಿಜೆಪಿ ಅಧ್ಯಕ್ಷ ಎನ್. ರಾಮಚಂದರ್ ರಾವ್, ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಕೆ. ಲಕ್ಷ್ಮಣ್, ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷೆ ಡಿ.ಕೆ. ಅರುಣಾ ಮತ್ತು ಹೆಚ್ಚಿನ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

## ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನಾಗಿ ಹಿಮಂತ ಬಿಸ್ವಾ ಶರ್ಮಾ: ನಾಳೆ ಪ್ರಮಾಣವಚನ



**ಮೇ 12ರಂದು 2ನೇ ಬಾರಿಗೆ ಅಸ್ಸಾಂ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ**

**ಗುವಾಹಟಿ,ಮೇ 10:** ಬಿಜೆಪಿ ಮತ್ತು ಎನ್ಡಿಎ ಶಾಸಕಾಂಗ ಪಕ್ಷದ ನಾಯಕನಾಗಿ ಹಿಮಂತ ಬಿಸ್ವಾ ಶರ್ಮಾ ಆಯ್ಕೆಯಾಗಿದ್ದಾರೆ. ಭಾನುವಾರ ಹೈಕಮಾಂಡ್ನಿಂದ ನೇಮಿಸಲ್ಪಟ್ಟ ವೀಕ್ಷಕರಾದ ಜೆ.ಪಿ.ನಡ್ಡಾ ಮತ್ತು ಸಹ–ವೀಕ್ಷಕ ನಯಾಬ್ ಸಿಂಗ್ ಸೈನಿ ಅವರ ಮೇಲ್ವಿಚಾರಣೆಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ, ಡಾ. ಹಿಮಂತ ಬಿಸ್ವಾ ಶರ್ಮಾ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ರಂಜಿತ್‌ಕುಮಾರ್ ದಾಸ್, ಬಿಸ್ವಾಜಿತ್ ಡೈಮರಿ, ಅಜಂತಾ ನಿಯೋಗ್, ರಾಜ್ದೀಪ್ ರಾಯ್, ಅಶೋಕ್ ಸಿಂಘಾಲ್, ಪಿಯೂಷ್ ಹಜಾರಿಕಾ ಮತ್ತು ಚಕ್ರಧರ್ ಗೊಗೊಯ್ ಸೇರಿದಂತೆ ಎಂಟು ಬಿಜೆಪಿ ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು. ಇಬ್ಬರು ಶಾಸಕರು ತಕ್ಷಣವೇ ಪ್ರಸ್ತಾವನೆಯನ್ನು ಅನುಮೋದಿಸಿದರು.

ಅಸೋಂ ಗಣ ಪರಿಷತ್ (ಎಜಿಪಿ) ಮತ್ತು ಬಿಪಿಎಫ್‌ಗೆ ಸೇರಿದ 10 ಶಾಸಕರು, ಎಜಿಪಿ ನಾಯಕ ಅತುಲ್ ಬೋರಾ ಮತ್ತು ಬಿಪಿಎಫ್ ನಾಯಕ ರಿಹಾನ್ ಡೈಮರಿ ಅವರ ಸಮ್ಮುಖದಲ್ಲಿ, ಶರ್ಮಾ ಅವರನ್ನು ಎನ್‌ಡಿ ನಾಯಕರನ್ನಾಗಿ ಪ್ರಸ್ತಾಪಿಸಿದರು. ಪ್ರಸ್ತಾವನೆಯ ನಂತರ, ಕೇಂದ್ರ ವೀಕ್ಷಕ ಜಗತ್ ಪ್ರಸಾದ್ ನಡ್ಡಾ ಅವರು ಡಾ.ಹಿಮಂತ ಬಿಸ್ವಾ ಶರ್ಮಾ ಅವರನ್ನು ಬಿಜೆಪಿ ಮತ್ತು ಎನ್‌ಡಿ ಎರಡರ ನಾಯಕರನ್ನಾಗಿ ಔಪಚಾರಿಕವಾಗಿ ಘೋಷಿಸಿದರು. ಎನ್‌ಡಿಎ ನಾಯಕರಾಗಿ ಆಯ್ಕೆಯಾದ ನಂತರ ಹಿಮಂತ ಬಿಸ್ವಾ ಶರ್ಮಾ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಭೇಟಿಯಾಗಿ ಸಾಂವಿಧಾನಿಕ ಕಾರ್ಯವಿಧಾನಗಳ ಪ್ರಕಾರ, ಎನ್‌ಡಿ ನೇತೃತ್ವದ ಸರ್ಕಾರ ರಚಿಸಲು 102 ಶಾಸಕರು ಸಹಿ ಮಾಡಿದ ಪ್ರಸ್ತಾವನೆಯನ್ನು ಸಲ್ಲಿಸಲಿದ್ದಾರೆ. ಎನ್ಡಿಎ ನಾಯಕರು ಲೋಕಭವನದಲ್ಲಿ ಅಸ್ಸಾಂ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಲಿದ್ದಾರೆ. ಈ ಮೂಲಕ ಶರ್ಮಾ ಮೇ 12ರಂದು ಬೆಳಗ್ಗೆ 11 ಗಂಟೆಗೆ ಎರಡನೇ ಬಾರಿಗೆ ಅಸ್ಸಾಂ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿ ಸತತ ಮೂರನೇ ಅವಧಿಗೆ ಸರ್ಕಾರ ರಚಿಸಲಿದೆ. ಇದಕ್ಕಾಗಿ ಸಿದ್ಧತೆ ಈಗಾಗಲೇ ಪೂರ್ಣಗೊಂಡಿದೆ.

## ಡಿಆರ್‌ಡಿಓ 1,200 ಸೆಕೆಂಡುಗಳ ಸ್ಕ್ರ್ಯಾಮ್‌ಜೆಟ್ ಪರೀಕ್ಷೆ

**ನವದೆಹಲಿ, ಮೇ 10:** ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಭಾರತದ ಹೈಪರ್ ಸಾನಿಕ್ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಮುಖ ಪ್ರಗತಿಯನ್ನು ಸಾಧಿಸಿದೆ, ಇದು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಸಕ್ರಿಯವಾಗಿ ತಂಪಾಗುವ ಪೂರ್ಣ ಪ್ರಮಾಣದ ಸ್ಕ್ರ್ಯಾಮ್‌ಜೆಟ್ ದಹನ ಕಾರಿಯ ದೀರ್ಘಾವಧಿಯ ನೆಲದ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ, ಸುಧಾರಿತ ಏರೋಸ್ಪೇಸ್ ಮತ್ತು ಕಾರ್ಯತಂತ್ರದ ದಾಳಿ ಸಾಮರ್ಥ್ಯಗಳಲ್ಲಿ ಗಮನಾರ್ಹ ಅಧಿಕವನ್ನು ಗುರುತಿಸುತ್ತದೆ. ಈ ಪರೀಕ್ಷೆಯನ್ನು ಹೈದರಾಬಾದ್ ಮೂಲದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯ ಮೇ 9 ರಂದು ಅತ್ಯಾಧುನಿಕ ಸ್ಕ್ರ್ಯಾಮ್‌ಜೆಟ್ ಕನೆಕ್ಟ್ ಪೈಪ್ ಟೆಸ್ಟ್‌ಸೌಲಭ್ಯದಲ್ಲಿ ನಡೆಸಿತು, ಈ ಸಮಯದಲ್ಲಿ ದಹನಕಾರಿ 1,200 ಸೆಕೆಂಡುಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿತು. ಈ ಸಾಧನೆಯು ಈ ವರ್ಷದ ಜನವರಿಯಲ್ಲಿ ನಡೆಸಿದ 700 ಸೆಕೆಂಡುಗಳಿಗಿಂತ ಹೆಚ್ಚು ಯಶಸ್ವಿ ಪರೀಕ್ಷೆಯ ಮೇಲೆ ನಿರ್ಮಿಸಲಾಗಿದೆ. ದಹನಕಾರಿಯನ್ನು ಆಖಆಐ ವಿನ್ಯಾಸಗೊಳಿಸಿದೆ ಮತ್ತು ಅಭಿವೃದ್ಧಿಪಡಿಸಿದೆ ಮತ್ತು ಉದ್ಯಮ ಪಾಲುದಾರರ ಬೆಂಬಲದೊಂದಿಗೆ ಅರಿತುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯಶಸ್ವಿ ಪ್ರಯೋಗವು ಸುಧಾರಿತ ಸಕ್ರಿಯವಾಗಿ ತಂಪಾಗುವ ಸ್ಕ್ರ್ಯಾಮ್‌ಜೆಟ್ ದಹನಕಾರಿಯ ವಿನ್ಯಾಸ ಮತ್ತು SCPT ಸೌಲಭ್ಯದ ಸಾಮರ್ಥ್ಯಗಳನ್ನು ಮೌಲ್ಯೀಕರಿಸುತ್ತದೆ. ದೀರ್ಘಾವಧಿಯ ಈ ಯಶಸ್ವಿ ಪರೀಕ್ಷೆಯು ಭಾರತದ ಹೈಪರ್ಸಾನಿಕ್ ಕ್ರೂಸ್ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಬಲವಾದ ತಾಂತ್ರಿಕ ಅಡಿಪಾಯವನ್ನು ಒದಗಿಸುತ್ತದೆ ಮತ್ತು ಮುಂದುವರಿದ ಹೈಪರ್ಸಾನಿಕ್ ಶಸ್ತ್ರಾಸ್ತ್ರ ತಂತ್ರಜ್ಞಾನಗಳನ್ನು ಅನುಸರಿಸುವ ಆಯ್ದ ರಾಷ್ಟ್ರಗಳ ಗುಂಪಿನಲ್ಲಿ ದೇಶವನ್ನು ಇರಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

**ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ಸಾಧನೆಗೆ ಡಿಆರ್‌ಡಿಒ, ಉದ್ಯಮ ಪಾಲುದಾರರು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಅಭಿನಂದಿಸಿದರು, ಇದು ದೇಶದ ಹೈಪರ್ ಸಾನಿಕ್ ಕ್ರೂಸ್ ಕ್ಷಿಪಣಿ ಕಾರ್ಯಕ್ರಮಕ್ಕೆ ಘನ ಅಡಿಪಾಯ" ಎಂದು ಬಣ್ಣಿಸಿದರು. ರಕ್ಷಣಾ ಇಲಾಖೆ ಯ ಕಾರ್ಯದರ್ಶಿ ಮತ್ತು ಡಿಆರ್‌ಡಿಒ ಅಧ್ಯಕ್ಷ ಡಾ. ಸಮೀರ್ ವಿ. ಕಾಮತ್ ಅವರು ಯೋಜನೆಯಲ್ಲಿ ಸಂಬಂಧಿಸಿದ ವಿಜ್ಞಾನಿಗಳು ಮತ್ತು ತಂಡಗಳನ್ನು ಅಭಿನಂದಿಸಿದರು.**

## ಯೋಗಿ ಸಂಪುಟ ವಿಸ್ತರಣೆ: 6 ಹೊಸ ಸಚಿವರ ಪ್ರಮಾಣವಚನ, ಇಬ್ಬರಿಗೆ ಬಡ್ತಿ



**ಲಖನೌ,ಮೇ 10:** ಯೋಗಿ ಆದಿತ್ಯನಾಥ ನೇತೃತ್ವದ ಉತ್ತರ ಪ್ರದೇಶ ಸಚಿವ ಸಂಪುಟವನ್ನು ಭಾನುವಾರ ಎರಡನೇ ಬಾರಿಗೆ ವಿಸ್ತರಿಸಲಾಯಿತು, ಆರು ಹೊಸ ಮಂತ್ರಿಗಳನ್ನು ಸೇರಿಸಲಾಯಿತು ಮತ್ತು ಸರ್ಕಾರದ ಸಾಮಾಜಿಕ ಮತ್ತು ರಾಜಕೀಯ ನೆಲೆಯನ್ನು ವಿಸ್ತರಿಸುವ ಗುರಿಯನ್ನು ಹೊಂದಿರುವ ಪುನರ್ರಚನೆಯಲ್ಲಿ ಇಬ್ಬರು ರಾಜ್ಯ ಸಚಿವರನ್ನು ಬಡ್ತಿ ನೀಡಲಾಯಿತು.

ಜನಭವನದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಅವರ ಸಚಿವ ಸಂಪುಟದ ಸದಸ್ಯರ ಸಮ್ಮುಖದಲ್ಲಿ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಅವರು ಎಂಟು ಸಚಿವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು.

ಸಮಾಜವಾದಿ ಪಕ್ಷದ ಮಾಜಿ ನಾಯಕ ಮನೋಜ್ ಪಾಂಡೆ, ಯುಪಿ ಬಿಜೆಪಿ ರಾಜ್ಯಾಧ್ಯಕ್ಷ ಭೂಪೇಂದ್ರ ಚೌಧರಿ, ಸುರೇಂದ್ರ ದಿಲೇರ್, ಕೃಷ್ಣ ಪಾಸ್ವಾನ್, ಹಂಸರಾಜ್ ವಿಶ್ವಕರ್ಮ ಮತ್ತು ಕೈಲಾಶ್ ರಜಪೂತ್ ಹೊಸದಾಗಿ ಸೇರ್ಪಡೆಗೊಂಡ ಸಚಿವರಲ್ಲಿ ಸೇರಿದ್ದಾರೆ. ಇದಲ್ಲದೆ, ಸಚಿವ ಸಂಪುಟ ವಿಸ್ತರಣೆಯ ಭಾಗವಾಗಿ ರಾಜ್ಯ ಸಚಿವರಾದ ಅಜಿತ್ ಪಾಲ್ ಮತ್ತು ಸೋಮೇಂದ್ರ ತೋಮರ್ ಅವರನ್ನು ಬಡ್ತಿ ನೀಡಲಾಯಿತು. ಪುನರ್ರಚನೆಯ ವಿವರಗಳ ಪ್ರಕಾರ, ಹೊಸ ಸಚಿವರಲ್ಲಿ ಒಬ್ಬರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು, ಮೂವರು ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದವರು, ಮತ್ತು ಇಬ್ಬರು ಪರಿಶಿಷ್ಟ ಜಾತಿ ಸಮುದಾಯಗಳಿಗೆ ಸೇರಿದವರು, ಇದು ಜಾತಿ–ಸಮತೋಲಿತ ಪ್ರಾತಿನಿಧ್ಯವನ್ನು ಪ್ರತಿಬಿಂಬಿಸುತ್ತದೆ. ಈ ವಿಸ್ತರಣೆಯೊಂದಿಗೆ, ಉತ್ತರ ಪ್ರದೇಶ ಸಚಿವ ಸಂಪುಟದ ಒಟ್ಟು ಬಲ 60ಕ್ಕೆ ಏರಿದೆ.

## ಖೇಜುರಿಯಲ್ಲಿ ಬಿಜೆಪಿಯಿಂದ 60 ಅಂಗಡಿಗಳಿಗೆ ಬೆಂಕಿ: ಅಭಿಷೇಕ್ ಆರೋಪ

**ಕೋಲ್ಕತ್ತಾ, ಮೇ 10:** ಪೂರ್ವ ಮೇದಿನಿಪುರ ಜಿಲ್ಲೆಯ ಖೇಜುರಿಯ ನಿಚ್ಕಸ್ಬಾ ಗ್ರಾಮ ಪಂಚಾಯತ್ ಪ್ರದೇಶದ ಹಿಜ್ಲಿ ಶರೀಫ್‌ನಲ್ಲಿ ಬಿಜೆಪಿ ಬೆಂಬಲಿತ ದುಷ್ಕರ್ಮಿಗಳು 60 ಕ್ಕೂ ಹೆಚ್ಚು ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಭಾನುವಾರ ಪಶ್ಚಿಮ ಬಂಗಾಳದಲ್ಲಿ "ಚುನಾವಣಾನಂತರದ ಹಿಂಸಾಚಾರ"ದ ಹೊಸ ಆರೋಪಗಳು ಹೊರಬಿದ್ದಿವೆ. ಹಿಂದೂಗಳು ಮತ್ತು ಮುಸ್ಲಿಮರಿಬ್ಬರಿಗೂ ಸೇರಿದ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದ್ದು, ರಾತ್ರೋರಾತ್ರಿ ಹಲವಾರು ಕುಟುಂಬಗಳು ಧ್ವಂಸಗೊಂಡಿವೆ ಎಂದು ಬ್ಯಾನರ್ಜಿ ಆರೋಪಿಸಿದ್ದಾರೆ. ಈ ಘಟನೆಯನ್ನು ಬಂಗಾಳದ ಸಾಮಾಜಿಕ ಸಾಮರಸ್ಯ ಮತ್ತು ಪ್ರಜಾಪ್ರಭುತ್ವದ ರಚನೆಯ ಮೇಲೆ "ಅನಾಗರಿಕ ದಾಳಿ" ಎಂದು ಅವರು ಬಣ್ಣಿಸಿದ್ದಾರೆ. "ನೀವು 'ಭೋಯ್' ಅನ್ನು ಓಡಿಸಲು ಹೀಗೆಯೇ ಯೋಜಿಸುತ್ತಿದ್ದೀರಾ ಬಂಗಾಳಕ್ಕೆ ಬೆಂಕಿ ಹಚ್ಚುವ ಮೂಲಕ" ಮೇ 4 ರ ವಿಧಾನಸಭಾ ಚುನಾವಣಾ ಫಲಿತಾಂಶಗಳ ನಂತರ "ನಿರಂತರ ಹಿಂಸಾಚಾರ"ದ ಬಗ್ಗೆ ಬಿಜೆಪಿಯನ್ನು ಗುರಿಯಾಗಿಸಿಕೊಂಡು ಬ್ಯಾನರ್ಜಿ ಬರೆದಿದ್ದಾರೆ. ತೃಣಮೂಲ ನಾಯಕನ ಪ್ರಕಾರ, ಈ ದಾಳಿಯು ಯಾವುದೇ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿರಿಸಿಕೊಂಡಿಲ್ಲ ಆದರೆ ಸಾಮಾನ್ಯ ಜನರಲ್ಲಿ ಭಯ ಮತ್ತು ಬೆದರಿಕೆಯನ್ನು ಹರಡುವ ಲೆಕ್ಕಾಚಾರದ ಪ್ರಯತ್ನವಾಗಿದೆ. "ಬಿಜೆಪಿ ಬೆಂಬಲಿತ ದುಷ್ಕರ್ಮಿಗಳು 60 ಕ್ಕೂ ಹೆಚ್ಚು ಅಂಗಡಿಗಳನ್ನು ಸುಟ್ಟುಹಾಕಿದರು, ರಾತ್ರೋರಾತ್ರಿ ಮುಗ್ಧ ಜನರ ಜೀವನೋಪಾಯವನ್ನು ನಾಶಪಡಿಸಿದರು. ಹಿಂದೂ ಒಡೆತನದ ಅಂಗಡಿಗಳು, ಮುಸ್ಲಿಂ ಒಡೆತನದ ಅಂಗಡಿಗಳು – ಇದು ಯಾವುದೇ ವ್ಯತ್ಯಾಸವನ್ನುಂಟುಮಾಡಲಿಲ್ಲ. ಇದು ಯಾವುದೇ ಒಂದು ಸಮುದಾಯದ ಮೇಲೆ ನಡೆದ ದಾಳಿಯಲ್ಲ; ಇದು ಬಂಗಾಳದ ಸಾಮಾಜಿಕ ಸಾಮರಸ್ಯ, ಪ್ರಜಾಪ್ರಭುತ್ವದ ರಚನೆ ಮತ್ತು ಶಾಂತಿಯಿಂದ ಬದುಕಲು ಬಯಸುವ ಸಾಮಾನ್ಯ ನಾಗರಿಕರ ಮೇಲೆ ಉದ್ದೇಶಪೂರ್ವಕ ದಾಳಿಯಾಗಿದೆ" ಎಂದು ಅವರು ಹೇಳಿದರು.

ಈ ಘಟನೆಯು ಬಿಜೆಪಿ ರಾಜಕೀಯದ "ನಿಜವಾದ ಮುಖ"ವನ್ನು ಪ್ರತಿಬಿಂಬಿಸುತ್ತದೆ ಎಂದು ಬ್ಯಾನರ್ಜಿ ಆರೋಪಿಸಿದರು, ಕೇಸರಿ ಪಕ್ಷವು "ದ್ವೇಷ, ಬೆದರಿಕೆ ಮತ್ತು ವಿನಾಶ"ವನ್ನು ಉತ್ತೇಜಿಸುತ್ತಿದೆ ಎಂದು ಆರೋಪಿಸಿದರು. ಬಂಗಾಳವು ಅಂತಹ ಹಿಂಸಾಚಾರಕ್ಕೆ ಎಂದಿಗೂ ತಲೆಬಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು ಮತ್ತು ಘಟನೆಯಲ್ಲಿ ಭಾಗಿಯಾಗಿರುವವರನ್ನು ತಕ್ಷಣ ಗುರುತಿಸಿ ಬಂಧಿಸಬೇಕೆಂದು ಒತ್ತಾಯಿಸಿದರು. ಈ ತಿಂಗಳ ಆರಂಭದಲ್ಲಿ ಚುನಾವಣಾ ಫಲಿತಾಂಶಗಳು ಘೋಷಣೆಯಾದ ನಂತರ ರಾಜ್ಯದ ವಿವಿಧ ಭಾಗಗಳಿಂದ ಹಿಂಸಾಚಾರದ ನಿರಂತರ ವರದಿಗಳ ನಡುವೆ ಈ ಆರೋಪಗಳು ಬಂದಿವೆ. ಹಲವಾರು ಘರ್ಷಣೆಗಳು, ವಿಧ್ವಂಸಕ ಕೃತ್ಯಗಳು ಮತ್ತು ಬೆಂಕಿ ಹಚ್ಚುವಿಕೆಯ ಘಟನೆಗಳು ಈಗಾಗಲೇ ವರದಿಯಾಗಿವೆ, ರಾಜಕೀಯ ಪಕ್ಷಗಳು ದಾಳಿಗಳ ಮೇಲೆ ಆರೋಪ ಹೊರಿಸಿವೆ. ಖೇಜುರಿಯಲ್ಲಿ ನಡೆದ ಇತ್ತೀಚಿನ ಘಟನೆಯು ಮತ್ತೊಮ್ಮೆ ಚುನಾವಣೆಯ ನಂತರದ ಹಿಂಸಾಚಾರದ ವಿಷಯವನ್ನು ಮುನ್ನೆಲೆಗೆ ತಂದಿದೆ, ಆಡಳಿತಾತ್ಮಕ ಹಸ್ತಕ್ಷೇಪದ ಹೊರತಾಗಿಯೂ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಕಳವಳವನ್ನು ಹುಟ್ಟುಹಾಕಿದೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ. ಇದಕ್ಕೂ ಮುನ್ನ ಬಿಜೆಪಿ ರಾಜ್ಯಾಧ್ಯಕ್ಷ ಶಮಿಕ್ ಭಟ್ಟಾಚಾರ್ಯ, ಟಿಎಂಸಿ ಬೆಂಬಲಿತ ದುಷ್ಕರ್ಮಿಗಳು ಬಿಜೆಪಿ ಬೆಂಬಲಿಗರಂತೆ ನಟಿಸಿ ಗದ್ದಲ ಸೃಷ್ಟಿಸುತ್ತಿದ್ದಾರೆ ಎಂದು ಹೇಳಿದ್ದರು.



ಶ್ರೀನಗರದ ಜೆವಾನ್ ಪೊಲೀಸ್ ಲೈನ್ಸ್‌ನಲ್ಲಿ ಇತ್ತೀಚೆಗೆ ಆಯ್ಕೆಯಾದ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಅಧಿಕಾರಿಗಳಿಗೆ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಡಿಜಿಪಿ ನಳಿನ್ ಪ್ರಭಾತ್ ಭಾನುವಾರ ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಿದರು.

## ಕೊಂಕಣಿ ಕಮ್ಯೂನಿಟಿ ಆಫ್ ಮರೋಳ್ ಸಂಸ್ಥೆಯ ಪ್ರಸ್ತುತಿಯಲ್ಲಿ 99ನೇ ಪ್ರದರ್ಶನ ಶತ ಸಂಭ್ರಮಕ್ಕೆ ಸಜ್ಜಾದ ಮ್ವಾತಾರೊ ಚರ್ಬೆಲಾ ಕೊಂಕಣಿ ಹಾಸ್ಯಮಯ ನಾಟಕ



**ಮುಂಬಯಿ, ಮೇ.10:** ಮಾತೃಭಾಷೆಯ ಜೀವಾಳಕ್ಕೆ ನಾಟಕಗಳು ಪೂರಕವಾಗಿದೆ. ಆಧುನಿಕ ಯುವ ಜನತೆಯಲ್ಲಿ ಮಾತೃಭಾಷೆಯ ಉಳಿವಿಗೂ ಆಧಾರವಾಗಿವೆ. ನಾಟಕವು ಶತಪ್ರದರ್ಶನಕ್ಕೆ ಸಜ್ಜಾಗಿರುವುದು ಅಭಿನಂದನೀಯ. ಒಂದು ತಂಡದ ಅವಿರತ ಶ್ರಮದ ಫಲವೇ ಇಂತಹ ಸಾಧನೆಯಾಗಿದೆ. ಈ ನಾಟಕವು ಭಾವೀ ಜನಾಂಗಕ್ಕೆ ಮಾದರಿಯಾಗಿ ಇತಿಹಾಸದ ಪುಟ ಸೇರುವಂತಾಗಲಿ ಎಂದು ವಿನ್ಸೆಂಟ್ ಪಲ್ಲೋಟ್ಟಿ ಇಗರ್ಜಿಯ ಪ್ರಧಾನ ಧರ್ಮಗುರು ರೆ| ಫಾ| ವಿಕ್ಟರ್ ಮಾರ್ಟಿಸ್ (ಪುತ್ತೂರು) ಅಭಿಪ್ರಾಯ ಪಟ್ಟರು.

ಕೊಂಕಣಿ ಕಮ್ಯೂನಿಟಿ ಆಫ್ ಮರೋಳ್ ಸಂಸ್ಥೆಯ ಪ್ರಸ್ತುತಿಯಲ್ಲಿ ಕೊಂಕಣಿ ನಾಟಕ ರಂಗದ ಹಿರಿಯಣ್ಣ ಪ್ರಸಿದ್ಧ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ, ಕೊಮೆಡಿ ಕಿಂಗ್ ನಟ ಫ್ರಾನ್ಸಿಸ್ ಫೆರ್ನಾಂಡಿಸ್ ಕಾಸ್ಸಿಯಾ ಸಾರಥ್ಯದ ನಾಟಕ ತಂಡವು ತನ್ನ ಮ್ವಾತಾರೊ ಚರ್ಬೆಲಾ ಹಾಸ್ಯಮಯ ಸಾಮಾಜಿಕ ಕೊಂಕಣಿ ನಾಟಕದ 99ನೇ ಪ್ರದರ್ಶನವನ್ನು ಇಂದಿಲ್ಲಿ ಆದಿತ್ಯವಾರ ಸಂಜೆ ಅಂಧೇರಿ ಪೂರ್ವದ ಮರೋಳ್ (ವಿಜಯನಗರ) ಇಲ್ಲಿನ ಪಲೋಟ್ಟಿ ಚರ್ಚ್‌ನ ತೆರೆದ ಸಭಾಂಗಣದಲ್ಲಿ ಯಶಸ್ವೀಯಾಗಿ ಪ್ರದರ್ಶಿಸಿದ್ದು, ಮಧ್ಯಾಂತರದಲ್ಲಿ ನಡೆಸಲ್ಪಟ್ಟ ಸರಳ ಸಭಾಕಾರ್ಯಕ್ರಮದಲ್ಲಿ ವಿಕ್ಟರ್ ಮಾರ್ಟಿಸ್ ಮುಖ್ಯ ಅತಿಥಿಯಾಗಿದ್ದು ಮಾತನಾಡಿ ಶುಭಹಾರೈಸಿ ನಾಟಕ ತಂಡದ ನೂರರ ಪ್ರಯೋಗಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದರು.


ಫಾ| ವಿಕ್ಟರ್ ಮಾರ್ಟಿಸ್ ಮತ್ತು ಕಾರ್ಯಕ್ರಮದ ಪ್ರಧಾನ ಸಂಯೋಜಕ ಸ್ಕೈಲಿಂಕ್ ಫ್ರೈಟ್ ಫಾರ್ವರ್ಡರ್ಸ್ ಪ್ರೈವೇಟ್ ಲಿಮಿಟೆಡ್ ಇದರ ಕಾರ್ಯಾಧ್ಯಕ್ಷ ರೋನಿ ಗೋನ್ಸಾಲ್ವಿಸ್ ಕಲಾವಿದರನ್ನು ಸನ್ಮಾನಿಸಿ ಗೌರವಿಸಿದರು. ಜ್ಯೂಲಿ ವಾಜ್ ಮರೋಳ್ ಇವರಿಗೆ ವಿಶೇಷವಾಗಿ ಸನ್ಮಾನಿಸಿ ಅಭಿನಂದಿಸಿ ಶುಭಕೋರಿದರು. ಸಂಘಟಕರು ಅತಿಥಿಗಳಿಗೆ ಪುಷ್ಪಗುಪ್ಛವಿತ್ತು ಗೌರವಿಸಿದರು. ಜೋಯ್ ಪಾಲಡ್ಕ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ರೆ| ಫಾ| ವಾಲ್ಟರ್ ಮೈಕಲ್ ಮೆಂಡೋನ್ಸಾ, ಸಿ| ವಿನಾ ಮಥೇವ್, ಸಿ| ಫೆಲ್ಸಿ ಮೆನೇಜಸ್, ಮೊಡೇಲ್ ಬ್ಯಾಂಕ್‌ನ ನಿರ್ದೇಶಕ ಕ್ಲೇಮೆಂಟ್ ಎ.ಲೋಬೊ ನಕ್ರೆ, ಪ್ರೊ| ಫಿಲೋಮೆನಾ ಸಿ.ಲೋಬೊ, ದಿವೋ ಕೊಂಕಣಿ ಸಾಪ್ತಾಹಿಕದ ಸಂಪಾದಕ ಲಾರೇನ್ಸ್ ಕುವೆಲ್ಲೋ, ಸೆಕ್ಯೂಲಕ್ ಸಿಟಿಝನ್ ಸಾಪ್ತಾಹಿಕದ ಪ್ರಕಾಶಕಿ ಸುಜನ್ನಾ ಎಲ್.ಕುವೆಲ್ಲೋ, ರಿಯಾಲ್ ಎಸ್ಟೇಟ್ ಏಜೆಂಟ್ ಪಾವ್ಲ್ ಮಸ್ಕರೇನ್ಹಾಸ್, ಉದ್ಯಮಿಗಳಾದ ಆನಂದ್ ಐವಾನ್ ಡಿಸೋಜಾ, ವಿಪುಲ್ ರೋಡ್ರಿಗಸ್ ಮರೋಲ್, ಸೈಂಟ್ ಜೋನ್ ಕೊಂಕಣಿ ಸಮುದಾಯ ಮರೋಳ್ ಅಧ್ಯಕ್ಷೆ ಸುನೀತಾ ಎ.ಸುವಾರೆಸ್, ಎವುಜಿನ್ ಡಿಸೋಜಾ, ನೆಲ್ಲಿ ರೇಗೊ, ಆಂಟನಿ ಡಿಸೋಜಾ, ಕ್ಲಾಡಿ ಫ್ರಾನ್ಸಿಸ್ ಮೊಂತೆರೋ, ಜೇಮ್ಸ್ ಪ್ರಕಾಶ್ ಡೆಸಾ, ಎಡ್ವಿನ್ ಆಗಸ್ಟಿನ್ ಸುವಾರೆಸ್, ಹಿಲ್ಡಾ ವಿ.ಮಥಾಯಸ್, ಮೆಲಿಸ್ಸಾ ನಾಯರ್, ಮತ್ತಿತರರು ವಿಶೇಷ ಆಮಂತ್ರಿತರಾಗಿ ಉಪಸ್ಥಿತರಿದ್ದರು.

83ರ ಹರೆಯದ ಹಿರಿಯ ಅಪ್ರತಿಮ ಕಲಾವಿದ ಫ್ರಾನ್ಸಿಸ್ ಫೆರ್ನಾಂಡಿಸ್ ಕಾಸ್ಸಿಯಾ ರಚಿಸಿ ನಟಿಸಿದ, ಜೊಯ್ ಪಾಲಡ್ಕ ನಿರ್ದೇಶಿಸಿದ ಮ್ವಾತಾರೊ ಚರ್ಬೆಲಾ ಹಾಸ್ಯಮಯ ಸಾಮಾಜಿಕ ಕೊಂಕಣಿ ನಾಟಕದ 99ನೇ ಪ್ರದರ್ಶನವನ್ನು ಸುಮಾರು ಮೂರು ದಶಕಗಳ ಹಿಂದಿನ ಕಲಾವಿದರೇ (ಬಹುತೇಕರು) ಅಭಿನಯಿಸಿ ಯಶಸ್ವಿಯಾಗಿ ಪ್ರದರ್ಶಿಸಿದರು. ಜೊಯ್ ಪಾಲಡ್ಕ, ಬೆಟ್ಟಿ ನ್ವಾಜ್ ಬಾಂದ್ರ, ಜ್ಯೂಲಿ ವಾಜ್ ಮರೋಳ್, ಫ್ಲೋರಾ ಡಿ?ಸೋಜಾ ಕಲ್ಮಾಡಿ (ಜೆರಿಮೆರಿ), ಶಾಂತಿ ಬಾರ್ಬೋಜಾ ಬೊಳಿಯೆ, ಗ್ರೇಗರಿ ಸಿಕ್ವೇರಾ ನಿಡ್ಡೋಡಿ, ಪೀಟರ್ ಪಾಯ್ಸ್ ಬಸ್ರೂರು, ಪೀಟರ್ ಕುಟಿನ್ಹೋ ಮುಂಡ್ಕೂರು, ಲವಿನಾ ಡಿಸೋಜಾ ಜೆರಿಮೆರಿ ಮತ್ತು ಪ್ರಮುಖ ಪಾತ್ರದಲ್ಲಿ ಫ್ರಾನ್ಸಿಸ್ ನಟಿಸಿ ನಾಟಕಾಭಿಮಾನಿಗಳ ಪ್ರಶಂಸೆಗೆ ಪಾತ್ರರಾದರು.

**ಶತ ಪ್ರಯೋಗದಲ್ಲಿ ಮ್ವಾತಾರೊ ಚರ್ಬೆಲಾ ನಾಟಕ:**

ಮೇ 23ನೇ ಭಾನುವಾರ ಸಂಜೆ ಕರ್ನಾಟಕದ ಚಿಕ್ಕಮಗಳೂರು ಅಲ್ಲಿನ ಕುವೆಂಪು ಸಭಾಗೃಹದಲ್ಲಿ ಫ್ರಾಂಕ್ ಪ್ರೊಡಕ್ಷನ್ ಮ್ವಾತಾರೊ ಚರ್ಬೆಲಾ ನಾಟಕದ 100ನೇ ಪ್ರಯೋಗ (ಶತ ಸಂಭ್ರಮ) ಪ್ರದರ್ಶಿಸಲಿದೆ. ಕೊಂಕಣಿ ರಂಗಭೂಮಿಯಲ್ಲಿ ದಾಖಲೆ ಸಾಧಿಸಿದ ಈ ಬಳಗಕ್ಕೆ ನೂರಾರು ಕಲಾಭಿಮಾನಿಗಳು, ಗಣ್ಯರನೇಕರು ಅಭಿನಂದಿಸಿ ಶುಭಹಾರೈಸಿದ್ದಾರೆ.



## ತಿರುಚ್ಚಿ ಪೂರ್ವ ಸ್ಥಾನಕ್ಕೆ ರಾಜೀನಾಮೆ: ಪೆರಂಬೂರು ಉಳಿಸಿಕೊಂಡ ತಮಿಳುನಾಡು ಸಿಎಂ ವಿಜಯ್



**ಚೆನ್ನೈ, ಮೇ 10:** ತಮಿಳುನಾಡಿನ 13ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ, ಟಿವಿಕೆ ಸಂಸ್ಥಾಪಕ ಮತ್ತು ನಟ–ರಾಜಕಾರಣಿ ಸಿ ಜೋಸೆಫ್ ವಿಜಯ್ ಅವರು ಏಪ್ರಿಲ್ 23 ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ಎರಡು ಸ್ಥಾನಗಳಲ್ಲಿ ಒಂದಾದ ತಿರುಚ್ಚಿ ಪೂರ್ವದ ತಮ್ಮ ಶಾಸಕ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ. ತಿರುಚ್ಚಿ ಪೂರ್ವ ಸ್ಥಾನಕ್ಕೆ ರಾಜೀನಾಮೆ ನೀಡುವ ವಿಜಯ್ ಅವರ ಪತ್ರವನ್ನು ಸಚಿವರಾದ ಕೆಎ ಸೆಂಗೊಟ್ಟೈಯನ್ ಮತ್ತು ಪಿ ವೆಂಕಟರಮಣನ್ ಅವರು ತಮಿಳುನಾಡು ವಿಧಾನಸಭೆ ಕಾರ್ಯದರ್ಶಿ ಕೆ ಶ್ರೀನಿವಾಸನ್ ಅವರಿಗೆ ತಮ್ಮ ಕಚೇರಿಯಲ್ಲಿ ಸಿಎಂ ಸ್ಥಾನವನ್ನು ಅಲಂಕರಿಸಿದ ಕೂಡಲೇ ರಾಜ್ಯ ಸಚಿವಾಲಯದಲ್ಲಿ ಹಸ್ತಾಂತರಿಸಿದರು. ತಿರುಚ್ಚಿ ಪೂರ್ವದಿಂದ ಆಯ್ಕೆಯಾದ ತಿರುಚ್ಚಿ ಪೂರ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸುವ ಮೂಲಕ, ವಿಜಯ್ ಚೆನ್ನೈ ನಗರದ ಪೆರ್ಮಾಬೂರ್ ಸ್ಥಾನವನ್ನು ಉಳಿಸಿಕೊಳ್ಳಲು ನಿರ್ಧರಿಸಿದರು. ತಿರುಚ್ಚಿ ಪೂರ್ವದಲ್ಲಿ ಖಾಲಿ ಇರುವ ಹುದ್ದೆಯನ್ನು ವಿಧಾನಸಭೆ ಕಾರ್ಯದರ್ಶಿ ಕೆ ಶ್ರೀನಿವಾಸನ್ ಶೀಘ್ರದಲ್ಲೇ ತಿಳಿಸುವ ನಿರೀಕ್ಷೆಯಿತ್ತು. ಏತನ್ಮಧ್ಯೆ, ರಾಜ್ಯ ಸಚಿವಾಲಯದಲ್ಲಿ ಅಧಿಕಾರ ವಹಿಸಿಕೊಂಡ ನಂತರ, ವಿಜಯ್ ಅವರು ಕೆಲವು ಫೈಲ್ಗಳಿಗೆ ಸಹಿ ಹಾಕಿದರು, ಅದರಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರ ಪ್ರಮಾಣವಚನ ಸ್ವೀಕಾರ ಮತ್ತು ಹೊಸ ಶಾಸಕರಿಗೆ ಪ್ರಮಾಣ ವಚನ ಬೋಧಿಸಲು ಟಿವಿಕೆ ಶೋಜವಂದನ್ ಶಾಸಕ ಕರುಪ್ಪಯ್ಯ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸುವ ಫೈಲ್ ಸೇರಿದೆ.

## ಪಕ್ಷ ವಿರೋಧಿ ಹೇಳಿಕೆ ನೀಡಿದ ಆರೋಪ: 6 ವರ್ಷ ಕಾಲ ಟಿಎಂಸಿಯ ಮೂವರು ವಕ್ತಾರರ ಅಮಾನತು

**ಕೋಲ್ಕತ್ತಾ,ಮೇ 10:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡ ಬಳಿಕ ಪಕ್ಷ ವಿರೋಧಿ ಹೇಳಿಕೆ ನೀಡಿದ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ತನ್ನ ಮೂವರು ವಕ್ತಾರರನ್ನು ಆರು ವರ್ಷಗಳ ಕಾಲ ಅಮಾನತುಗೊಳಿಸಿದೆ.

ಟಿಎಂಸಿ ವಕ್ತಾರರಾದ ಕೊಹಿನೂರ್ ಮಜುಂದಾರ್, ರಿಜು ದತ್ತಾ ಹಾಗೂ ಕಾರ್ತಿಕ್ ಘೋಷ್ ಅವರನ್ನು ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಆರೋಪದ ಮೇಲೆ ಅಮಾನತುಗೊಳಿಸಲಾಗಿದೆ ಎಂದು ಪಕ್ಷ ಪ್ರಕಟಣೆಯಲ್ಲಿ ತಿಳಿಸಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಪರಾಭವಗೊಂಡ ಬಳಿಕ ಪಕ್ಷದ ನಾಯಕತ್ವ ಹಾಗೂ ಚುನಾವಣಾ ವ್ಯೂಹತಂತ್ರವನ್ನು ಟೀಕಿಸಿದ ಆರೋಪದ ಮೇಲೆ ಐವರು ವಕ್ತಾರರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಅದರ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದರೆ, ಟಿಎಂಸಿ ಕೇವಲ 80 ಸ್ಥಾನಗಳಿಗೆ ಕುಸಿದಿತ್ತು. ಈ ನೋಟಿಸ್‌ಗಳನ್ನು ಟಿಎಂಸಿಯ ಸಂಸದ ಹಾಗೂ ಪಕ್ಷದ ಶಿಸ್ತು ಸಮಿತಿಯ ಸದಸ್ಯ ಡೆರೆಕ್ ಓಬ್ರಿಯಾನ್ ಜಾರಿಗೊಳಿಸಿದ್ದಾರೆ.

ಮೂವರು ನಾಯಕರ ಅಮಾನತು ಜತೆಗೆ ಕೃಷ್ಣೇಂದು ಚೌಧರಿ ಮತ್ತು ಪಪಿಯಾ ಘೋಷ್ ಅವರಿಗೂ ನೋಟಿಸ್ ಜಾರಿಗೊಳಿಸಲಾಗಿದೆ. 24 ಗಂಟೆಯೊಳಗೆ ವಿವರಣೆ ನೀಡಬೇಕು. ಇಲ್ಲವಾದರೆ ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಆರೋಪದ ಮೇಲೆ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.

# 2028ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ಬಿಜೆಪಿ ಆರ್‌ಎಸ್‌ಎಸ್‌ನಿಂದ ಭಾರಿ ರಾಜಕೀಯ ತಂತ್ರ

**ಬೆಂಗಳೂರು, ಮೇ.10–** 2028ರ ಕರ್ನಾಟಕ ವಿಧಾನಸಭೆ ಚುನಾವಣೆಯನ್ನು ಗುರಿಯಾಗಿಸಿ ಕೊಂಡು ಬಿಜೆಪಿ ಮತ್ತು ಆರ್‌ಎಸ್‌ಎಸ್ ಈಗಿನಿಂದಲೇ ಭಾರೀ ರಾಜಕೀಯ ತಂತ್ರ ರೂಪಿಸುತ್ತಿವೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ತಳಮಟ್ಟದ ಸಂಘಟನಾ ಕಾರ್ಯ, ಸಮುದಾಯ ಆಧಾರಿತ ಸಂಪರ್ಕ ಅಭಿಯಾನ ಮತ್ತು ಬೂತ್‌ಮಟ್ಟದ ಚಟುವಟಿಕೆಗಳ ಮೂಲಕ ಬಿಜೆಪಿ ಸಾಧಿಸಿದ ಯಶಸ್ಸಿನ ಮಾದರಿಯನ್ನು ಇದೀಗ ಕರ್ನಾಟಕ ದಲ್ಲೂ ಅನುಸರಿಸಲು ಸಂಘ ಪರಿವಾರ ಸಿದ್ಧತೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಆಚರಣೆ ಅಂಗವಾಗಿ ರಾಜ್ಯಾದ್ಯಂತ ವ್ಯಾಪಕ ಚಟುವಟಿಕೆಗಳನ್ನು ಆರಂಭಿಸಿದ್ದು, ಗ್ರಾಮೀಣ ಪ್ರದೇಶಗಳಿಂದ ನಗರ ಗಳವರೆಗೆ ತನ್ನ ನೆಲೆಯನ್ನು ಮತ್ತಷ್ಟು ಬಲಪಡಿಸುವ ಕಾರ್ಯಕ್ಕೆ ವೇಗ ನೀಡಿದೆ.ಸಾಮಾಜಿಕ ಸೌಹಾರ್ದ, ಕುಟುಂಬ ಮೌಲ್ಯಗಳು, ಸ್ವದೇಶಿ ಚಿಂತನೆ, ಪರಿಸರ ಜಾಗೃತಿ ಮತ್ತು ನಾಗರಿಕ ಪ್ರಜ್ಞೆ ಮೊದಲಾದ ವಿಷಯಗಳನ್ನು ಮುಂದಿಟ್ಟುಕೊಂಡು ಸಂಘದ ತಳಮಟ್ಟದ ಸಂಪರ್ಕ ಅಭಿಯಾನ ನಡೆಯುತ್ತಿದೆ.

ಇದೇ ವೇಳೆ ಬಿಜೆಪಿ ಕೂಡ ಸಂಘದ ಜಾಲವನ್ನು ರಾಜಕೀಯ ವಾಗಿ ಬಳಸಿಕೊಳ್ಳುವ ಲೆಕ್ಕಾಚಾರದಲ್ಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ವಿಶೇಷವಾಗಿ ದಲಿತ, ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಲ್ಲಿ ಮೂಡಿರುವ ಅಸಮಾಧಾನವನ್ನು ಚುನಾವಣಾ ಅಸ್ತ್ರವನ್ನಾಗಿಸಲು ಬಿಜೆಪಿ ಮುಂದಾಗಿದೆ ಎಂದು ಹೇಳಲಾಗುತ್ತಿದೆ.ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಒಳಮೀಸಲು ಜಾರಿಗೊಳಿಸಿದ್ದರೂ, ಕೆಲವು ಸಮುದಾಯಗಳಲ್ಲಿ ಇನ್ನೂ ಅಸಮಾಧಾನ ಉಳಿದಿದೆ ಎನ್ನಲಾಗುತ್ತಿದೆ.

ಮತ್ತೊಂದೆಡೆ ಸಚಿವ ಸಂಪುಟ ಪುನರ್ರಚನೆ ವೇಳೆ ಬಿ.ನಾಗೇಂದ್ರ ಮತ್ತು ಕೆ.ಎನ್.ರಾಜಣ್ಣ ಅವರನ್ನು ಕೈಬಿಟ್ಟಿರುವುದು ಕೆಲವು ಎಸ್ಟಿ ಸಮುದಾಯಗಳಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಇದನ್ನೇ ಅವಕಾಶ ವನ್ನಾಗಿ ಬಳಸಿಕೊಳ್ಳಲು ಬಿಜೆಪಿ ಈಗಾಗಲೇ ವಿವಿಧ ಸಮುದಾಯಗಳ ಮುಖಂಡರೊಂದಿಗೆ ಸಭೆಗಳನ್ನು ನಡೆಸುತ್ತಿದೆ ಎನ್ನಲಾಗುತ್ತಿದೆ.

ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಕೂಡ ಎಸ್ಸಿ–ಬಲ ಸಮುದಾಯಗಳನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರ ನಿರಂತರ ಕರ್ನಾಟಕ ಭೇಟಿಗಳು ಕೂಡ ರಾಜಕೀಯ ಮಹತ್ವ ಪಡೆದುಕೊಂಡಿವೆ.

ಇತ್ತೀಚೆಗೆ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣದ ಸ್ವಯಂಸೇವಕರ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ಭಾಗವತ್, ಬಳಿಕ ಮೈಸೂರಿನ ಸುತ್ತೂರು ಮಠ ಕಾರ್ಯಕ್ರಮದಲ್ಲೂ ಪಾಲ್ಗೊಂಡಿದ್ದರು. ಆದರೆ, ಸಂಘದ ಮೂಲಗಳು ಇದನ್ನು ರಾಜಕೀಯಕ್ಕೆ ಸಂಬಂಧಿಸಿ ದದ್ದು ಅಲ್ಲ ಎಂದು ಸ್ಪಷ್ಟಪಡಿಸಿವೆ. ಇನ್ನೊಂದೆಡೆ, ಅಸ್ಸಾಂ ಚುನಾವಣಾ ಫಲಿತಾಂಶವನ್ನು ಉಲ್ಲೇಖಿಸುತ್ತಿರುವ ಬಿಜೆಪಿ, ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ಪರ ರಾಜಕೀಯ ಮಾಡುತ್ತಿದೆ ಎಂಬ ಆರೋಪವನ್ನು ಮುಂದುವರಿಸಿದೆ.

ಏಕೆಂದರೆ ಗೆದ್ದ 19 ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ 18 ಮಂದಿ ಮುಸ್ಲಿಮರಾಗಿದ್ದಾರೆ. ಹೀಗಾಗಿ, ಕರ್ನಾಟಕದಲ್ಲಿಯೂ ಕಾಂಗ್ರೆಸ್ ಸರ್ಕಾರವನ್ನು 'ಮುಸ್ಲಿಂ ಪರ'ಎಂದು ಬಿಂಬಿಸಲು ಬಿಜೆಪಿ ಪ್ರಯತ್ನಿಸುತ್ತಿದೆ.ಒಟ್ಟಾರೆ, 2028ರ ಚುನಾವಣೆಗೆ ಇನ್ನೂ ಸಮಯ ಇದ್ದರೂ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಈಗಿನಿಂದಲೇ ತಳಮಟ್ಟದ ಸಂಘಟನಾ ಬಲವರ್ಧನೆಗೆ ಒತ್ತು ನೀಡುತ್ತಿರುವುದು ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆ ಶುರುವಾಗುವಂತೆ ಮಾಡಿದೆ.




ಬೆಂಗಳೂರಿನ ಜಯನಗರ ನಾಗರಿಕ ಒಕ್ಕೂಟದಿಂದ ಭಾನುವಾರ ಬಸವ ಜಯಂತಿ ಆಚರಣೆ ಮತ್ತು ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಬಿಇ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಜಯನಗರದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಸರ್ಪಭೂಷಣ ಮಠದ ಮಲ್ಲಿಕಾರ್ಜುನ ದೇವರು, ಎಸ್‌ವಿಇಟಿಯ ಸ್ಥಾಪಕ ಮತ್ತು ನಿರ್ದೇಶಕ ಡಾ. ಟಿ.ವಿ.ರಾಜು, ಪ್ರಸನ್ನ, ಕದಳಿ ಮಹಿಳಾ ಘಟಕದ ಅಧ್ಯಕ್ಷೆ ಪ್ರಮೀಳಾ ಗರಡಿ ಮತ್ತು ಅಧ್ಯಕ್ಷ ಬಿ.ಉಮೇಶ್, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಂಕ್ರಪ್ಪ, ಆಕಾಶವಾಣಿಯ ಎಸ್.ಪರಶಿವಮೂರ್ತಿ ಅವರು ಜಂಟಿಯಾಗಿ ಉದ್ಘಾಟನೆ ನೆರವೇರಿಸಿದರು.

# ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಟಿಕೆಟ್‌ಗಳಿಗೆ ಯುಪಿಐ ಸೇವೆ

**ಬೆಂಗಳೂರು,ಮೇ.10:** ಎಲ್ಲಾ ಸರ್ಕಾರಿ ಸೇವೆಗಳು, ಜನ ಸಾಮಾನ್ಯರ ನಡುವೆ ಡಿಜಿಟಲ್ ವಹಿವಾಟು ತೀವ್ರಗೊಂಡಿದ್ದರೂ ಸಹ ಜಾರಿಗೊಳ್ಳದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾರಿಗೆ ಬಸ್‌ನಲ್ಲಿ ಟಿಕೆಟ್ ಪಡೆಯಲು ಯುಪಿಐ ಸೇವೆ ಆರಂಭಿಸಿರಲಿಲ್ಲ. ಆದರೆ ಇದೀಗ ಯುಪಿಐ ಸೇವೆ ಆರಂಭಗೊಂಡಿದೆ.

ಇತ್ತೀಚೆಗೆ ಸೋಲಿಡಾರಿಟಿ ಯೂತ್ ಮೂವ್‌ಮೆಂಟ್ ಕರ್ನಾಟಕ ಘಟಕದ ರಾಜ್ಯ ನಿಯೋಗವು ಕೆಎಸ್‌ಆರ್ಟಿಸಿಯ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರಿಗೆ ಮನವಿ ಸಲ್ಲಿಸಿತ್ತು. ಈ ಮನವಿಗೆ ಸ್ಪಂದಿಸಿರುವ ಸಾರಿಗೆ ಇಲಾಖೆಯು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಟಿಕೆಟ್‌ಗೆ ಯುಪಿಐ ಸೇವೆ ಆರಂಭಿಸಿದೆ.

ಮನವಿಯಲ್ಲಿ ಬಸ್ ಸಂಚಾರದ ಪ್ರಮಾಣವನ್ನು ಹೆಚ್ಚಿಸುವುದು, ನಾನ್‌ಸ್ಟಾಪ್ ಬಸ್ ಸೇವೆಗಳನ್ನು ಪ್ರಾರಂಭಿಸುವುದು ಹಾಗೂ QR ಕೋಡ್ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಜಾರಿಗೆ ತರುವುದು ಸೇರಿದಂತೆ ಸಾರ್ವಜನಿಕರಿಗೆ ಅನುಕೂಲಕರವಾಗುವ ಹಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಉಲ್ಲೇಖಿಸಲಾಗಿತ್ತು. ಇದಕ್ಕೆ ಸ್ಪಂದಿಸಿರುವ ಸಾರಿಗೆ ಇಲಾಖೆಯು ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಲ್ಲಿ ಟಿಕೆಟ್‌ಗೆ ಯುಪಿಐ ಸೇವೆ ಆರಂಭಿಸಿದೆ.




ಇದಕ್ಕೆ ಹರ್ಷ ವ್ಯಕ್ತಪಡಿಸಿರುವ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ಘಟಕವು, 'ಕೆಎಸ್‌ಆರ್‌ಟಿಸಿಯು ಮನವಿಗೆ ಸ್ಪಂದಿಸುವ ಮೂಲಕ ಟಿಕೆಟ್ ಖರೀದಿಯ ವೇಳೆ ಆಗುತ್ತಿದ್ದ ಚಿಲ್ಲರೆ ಸಮಸ್ಯೆಗೆ ಅಂತ್ಯ ಹಾಡಿದೆ. ಆ ಮೂಲಕ ಜನಸ್ನೇಹಿಯನ್ನಾಗಿಸಿರುವುದು ಸಂತೋಷ ತಂದಿದೆ' ಎಂದು ಹರ್ಷ ವ್ಯಕ್ತಪಡಿಸಿದೆ.

ಇದೇ ರೀತಿಯಲ್ಲಿ ಬಸ್ ಸಂಚಾರದ ಪ್ರಮಾಣವನ್ನು ಹೆಚ್ಚಿಸುವುದರ ಕಡೆಗೂ ಕೂಡ ಇಲಾಖೆಯ ಅಧಿಕಾರಿಗಳು ಗಮನಹರಿಸಿ ಎಲ್ಲ ಸಮಸ್ಯೆಗಳಿಗೂ ಪರಿಹಾರ ನೀಡಬೇಕು. ಸೋಲಿಡಾರಿಟಿಯ ಮನವಿಯನ್ನು ಆಲಿಸಿ, ವ್ಯವಸ್ಥೆ ಕಲ್ಪಿಸಲು ನೆರವಾದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರಿಗೆ ಧನ್ಯವಾದಗಳನ್ನು ತಿಳಿಸಿದೆ.

# ಗುತ್ತಿಗೆ ಆಧಾರದ ಮೇಲೆ 550 ಮಾಜಿ ಸೈನಿಕರ ನೇಮಕಾತಿಗಾಗಿ ದೈಹಿಕ ಪರೀಕ್ಷೆ



**ಬೆಂಗಳೂರು, ಮೇ.10:** ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ಗುತ್ತಿಗೆ ಆಧಾರದ ಮೇಲೆ 550 ಮಾಜಿ ಸೈನಿಕರ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆ.ಎಸ್.ಆರ್.ಪಿ) ಕೋರಮಂಗಲ 3ನೇ ಮತ್ತು 4ನೇ ಬೆಟಾಲಿಯನ್, ಕವಾಯತು ಮೈದಾನ, ಮಡಿವಾಳ, ಬೆಂಗಳೂರು, ಇಲ್ಲಿ ಮೇ 11 ರಿಂದ 16 ರ ವರೆಗೆ 6 ದಿನಗಳ ಕಾಲ ಬೆಳಿಗ್ಗೆ 6.30 ಕ್ಕೆ ದೈಹಿಕ ಪರೀಕ್ಷೆ ಹಾಗೂ ಶೇಪ್ ಒನ್ ದೇಹದಾಢ್ರ್ಯತೆ ಪರೀಕ್ಷೆಯನ್ನು ನಡೆಸಲಿದೆ.

ಯಾವುದೇ ಕ್ರಿಮಿನಲ್ ದಾಖಲೆಯನ್ನು ಹೊಂದಿಲ್ಲದ, ಶೇಪ್ ಒನ್ ದೈಹಿಕ ಸದೃಢತೆಯನ್ನು ಹೊಂದಿರುವ ಹಾಗೂ 3 ಕಿ.ಮೀ. ದೂರವನ್ನು 20 ನಿಮಿಷಗಳಲ್ಲಿ ಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿರುವ 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಈ ಪರೀಕ್ಷೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ತಿಳಿಸಿದ್ದಾರೆ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಸಹಾಯವಾಣಿ 080–22262263 ಅಥವಾ 7483498052 ಅನ್ನು ಸಂಪರ್ಕಿಸಬಹುದು.

# ಅರಣ್ಯ ಇಲಾಖೆಯಿಂದ ಹುಲಿ ಗಣತಿಗೆ ಅಳವಡಿಸಲಾಗಿದ್ದ ಕ್ಯಾಮರಾ ದುಷ್ಕರ್ಮಿಗಳಿಂದ ಕಳವು

**ಬೆಂಗಳೂರು, ಮೇ.10:** ಕರ್ನಾಟಕದ ಭದ್ರಾಹುಲಿ ಸಂರಕ್ಷಿತ ಪ್ರದೇಶದ ಮುತ್ತೋಡಿ ಅಭಯಾರಣ್ಯದಲ್ಲಿ ಹುಲಿ ಗಣತಿ ಕಾರ್ಯಕ್ಕಾಗಿ ಅರಣ್ಯ ಇಲಾಖೆಅಳವಡಿಸಿದ್ದ ಕ್ಯಾಮೆರಾವನ್ನು ಕಿಡಿಗೇಡಿಗಳು ಕಳ್ಳತನ ಮಾಡಿದ್ದಾರೆ. ಈ ಘಟನೆಯು ಅರಣ್ಯದ ಭದ್ರತೆ ಮತ್ತು ವನ್ಯಜೀವಿಗಳ ಮೇಲ್ವಿಚಾರಣೆಯ ಬಗ್ಗೆ ಗಂಭೀರ ಕಳವಳವನ್ನು ಉಂಟುಮಾಡಿದೆ.

ಹುಲಿಗಳ ಚಲನವಲನವನ್ನು ಪತ್ತೆಹಚ್ಚಲು ಮರಗಳಿಗೆ ಅಳವಡಿಸಲಾಗಿದ್ದ ಅತ್ಯಾಧುನಿಕ ಕ್ಯಾಮೆರಾವನ್ನು ಕಳವು ಮಾಡಲಾಗಿದೆ.ಅರಣ್ಯ ಇಲಾಖೆಯ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಕ್ಯಾಮೆರಾ ನಾಪತ್ತೆಯಾಗಿರುವುದು ಬೆಳಕಿಗೆ ಬಂದಿದೆ. ಅರಣ್ಯ ಅಧಿಕಾರಿಗಳು ಈ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ನಾಪತ್ತೆಯಾದ ಉಪಕರಣ ಮತ್ತು ಕಳ್ಳರನ್ನು ಪತ್ತೆಹಚ್ಚಲು ಪೊಲೀಸರು ಮತ್ತು ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ಹಾಗೂ ತನಿಖೆಯನ್ನು ಆರಂಭಿಸಿದ್ದಾರೆ. ಅಪರೂಪದ ಪ್ರಾಣಿಗಳ ಚಲನವಲನದ ಮೇಲೆ ನಿಗಾ ಇಡಲು ಬಳಸುವ ಇಂತಹ ಕ್ಯಾಮೆರಾಗಳ ಕಳ್ಳತನದಿಂದಾಗಿ ಹುಲಿ ಗಣತಿ ಪ್ರಕ್ರಿಯೆಗೆ ಅಡ್ಡಿಯಾಗುವ ಸಾಧ್ಯತೆಯಿದೆ.

# ಜಿರಲೆ ಮಿಶ್ರಿತ ಆಹಾರ: ವಿದ್ಯಾರ್ಥಿಗಳ ಪ್ರತಿಭಟನೆ

**ಬೆಂಗಳೂರು,ಮೇ.10:** ರಾಜಧಾನಿಯ ಮಲ್ಲತ್ತಹಳ್ಳಿಯಲ್ಲಿರುವ (ಶ್ರೀಗಂಧಕಾವಲು) ಪಿಯುಸಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಮೂಲಸೌಕರ್ಯಗಳ ಕೊರತೆ ಮತ್ತು ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದಾಗಿ ವಿದ್ಯಾರ್ಥಿಗಳು ಪರದಾಡುವಂತಾಗಿದೆ.

ಕಳಪೆ ಆಹಾರ, ಭದ್ರತಾ ಲೋಪ ಹಾಗೂ ವಾರ್ಡನ್ ಬೇಜವಾಬ್ದಾರಿ ಯನ್ನು ಖಂಡಿಸಿ ವಿದ್ಯಾರ್ಥಿಗಳು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗೆ ದೂರು ನೀಡುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

ಹಾಸ್ಟೆಲ್‌ನಲ್ಲಿ ಪ್ರತಿದಿನ ನೀಡುವ ಅನ್ನ–ಸಾಂಬಾರ್‌ನಲ್ಲಿ ಜಿರಳೆ ಮತ್ತು ಹುಳುಗಳು ಪತ್ತೆಯಾಗುತ್ತಿದ್ದು, ಇಂತಹ ಕಳಪೆ ಹಾಗೂ ಪೌಷ್ಠಿಕಾಂಶವಿಲ್ಲದ ಆಹಾರ ಸೇವಿಸಿ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ನಮಗೆ ಮನುಷ್ಯರು ತಿನ್ನುವ ಆಹಾರ ನೀಡುತ್ತಿದ್ದಾರೆಯೇ ಅಥವಾ ಪ್ರಾಣಿಗಳಿಗೋ ಎಂದು ವಿದ್ಯಾರ್ಥಿಗಳು ಆಡಳಿತ ಮಂಡಳಿಯನ್ನು ಪ್ರಶ್ನಿಸಿದ್ದಾರೆ. ಇದರ ಜೊತೆಗೆ, ಶೈಕ್ಷಣಿಕ ವರ್ಷ ಆರಂಭವಾಗಿ ಆರು ತಿಂಗಳು ಕಳೆದರೂ ವಿದ್ಯಾರ್ಥಿಗಳಿಗೆ ಇದುವರೆಗೆ ಪಠ್ಯಪುಸ್ತಕಗಳನ್ನು ವಿತರಿಸಿಲ್ಲ. ಈ ಬಗ್ಗೆ ವಾರ್ಡನ್ ಬಳಿ ಮನವಿ ಮಾಡಿದರೆ ಕೇವಲ ಸುಳ್ಳು ಭರವಸೆಗಳನ್ನು ನೀಡಿ ಕಾಲಹರಣ ಮಾಡುತ್ತಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಹಾಸ್ಟೆಲ್‌ನಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳು ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿವೆ. ಯಾವುದೇ ರೆಕಾರ್ಡಿಂಗ್ ವ್ಯವಸ್ಥೆ ಇಲ್ಲದ ಕಾರಣ ಅಪರಿಚಿತರು ಬೇಕಾಬಿಟ್ಟಿ ಹಾಸ್ಟೆಲ್ ಒಳಗೆ ಪ್ರವೇಶಿಸುತ್ತಿದ್ದಾರೆ.

ಇನ್ನು, ವಾರ್ಡನ್ ಅವರು ವಾರಕ್ಕೆ ಕೇವಲ ಎರಡು ದಿನ ಮಾತ್ರ ಹಾಸ್ಟೆಲ್‌ಗೆ ಭೇಟಿ ನೀಡುತ್ತಿದ್ದಾರೆ. ಹಾಸ್ಟೆಲ್‌ನ ಇತರ ಸಿಬ್ಬಂದಿಗಳು ವಿದ್ಯಾರ್ಥಿಗಳ



ಸಮಸ್ಯೆಗಳಿಗೆ ಸ್ಪಂದಿಸುವ ಬದಲು ಅಸಭ್ಯವಾಗಿ ವರ್ತಿಸಿ, ಬೆದರಿಕೆ ಹಾಕುತ್ತಿದ್ದಾರೆ. ನಿಯಮ ಮೀರಿ ಒಂದೇ ಕೊಠಡಿಯಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ತುಂಬಲಾಗುತ್ತಿದ್ದು, ಓದಲು ಪೂರಕ ವಾತಾವರಣವಿಲ್ಲದೆ ವಿದ್ಯಾರ್ಥಿಗಳು ಶೈಕ್ಷಣಿಕ ಹಿನ್ನಡೆ ಅನುಭವಿಸುವಂತಾಗಿದೆ.

ಈ ಎಲ್ಲಾ ಅವ್ಯವಸ್ಥೆಗಳನ್ನು ಕೂಡಲೇ ಸರಿಪಡಿಸುವಂತೆ ಆಗ್ರಹಿಸಿ ಮಹದೇವಸ್ವಾಮಿ, ಅನಿಲ್ ಮಹಾದೇವ್, ವರುಣ್, ಲಿಖಿತ್, ವಿಶ್ವ, ಪ್ರಜ್ವಲ್, ಶಿವಕುಮಾರ್, ಶಶಿಕುಮಾರ್, ದರ್ಶನ್, ಮಲ್ಲಿಕಾರ್ಜುನ, ನಿಂಗರಾಜ್, ಮಂಚಯ್ಯ ಹಾಗೂ ಹನುಮಂತ ಸೇರಿದಂತೆ ಹಲವು ವಿದ್ಯಾರ್ಥಿಗಳು ಸಹಿ ಮಾಡಿದ ದೂರು ಪತ್ರವನ್ನು ಸಲ್ಲಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು, ತಪ್ಪಿತಸ್ಥ ಸಿಬ್ಬಂದಿ ಹಾಗೂ ವಾರ್ಡನ್ ವಿರುದ್ಧ ಕಠಿಣ ಕ್ರಮ ಜರುಗಿಸಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

### ಬೆಂಗಳೂರು ಆತ್ಮಹತ್ಯೆಗಳ ನಗರ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿ

# ಜನಸಂಖ್ಯೆ ಅಂಕಿ–ಅಂಶಗಳ ಆಧಾರದಲ್ಲಿ ದೆಹಲಿ, ಮುಂಬೈಗಿಂತಲೂ ಅಧಿಕ

**ಬೆಂಗಳೂರು, ಮೇ 9:** ದೇಶದ 53 ನಗರಗಳಲ್ಲಿ ದಾಖಲಾದ ಆತ್ಮಹತ್ಯೆ ಪ್ರಕರಣಗಳ ವಿವರವನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ– ಎನ್‌ಸಿಆರ್‌ಬಿ ಬಿಡುಗಡೆ ಮಾಡಿದೆ.

ಈ ವರದಿ ಪ್ರಕಾರ ದೆಹಲಿ ನಂತರ ಬೆಂಗಳೂರೇ ಆತ್ಮಹತ್ಯೆಗಳ ರಾಜಧಾನಿ ಎನಿಸಿಕೊಂಡಿದೆ. 2024ರಲ್ಲಿ ದೆಹಲಿಯಲ್ಲಿ 2,905 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದರೆ, ಬೆಂಗಳೂರಿನಲ್ಲಿ 2,403 ಆತ್ಮಹತ್ಯೆಗಳು ಸಂಭವಿಸಿವೆ. ಇನ್ನು ಮುಂಬೈನಲ್ಲಿ 1,406 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ.

ಆದರೆ ದೆಹಲಿಯಲ್ಲಿ (ಜನಸಂಖ್ಯೆಯ ಅಂದಾಜು ಅಂಕಿಅಂಶಗಳ ಆಧಾರದ ಮೇಲೆ) ಆತ್ಮಹತ್ಯೆ ಪ್ರಮಾಣವು ಲಕ್ಷ ಜನರಿಗೆ 13.2 ಆಗಿದೆ. ಬೆಂಗಳೂರಿನಲ್ಲಿ ಲಕ್ಷ ಜನರಲ್ಲಿ 16.7 ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮುಂಬೈನಲ್ಲಿ ಈ ಪ್ರಮಾಣ 11 ಆಗಿದೆ. ಅಂದರೆ ಈ ಅಗ್ರ ಮೂರು ನಗರಗಳಲ್ಲಿ ಬೆಂಗಳೂರಿನ ಜನಸಂಖ್ಯೆ ಆಧಾರದಲ್ಲಿ ನೋಡಿದಾಗ, ನಗರದಲ್ಲಿ ಆತ್ಮಹತ್ಯೆ ಪ್ರಮಾಣ ಅಧಿಕವಾಗಿದೆ. ಇನ್ನು ಆತ್ಮಹತ್ಯೆ ಮಾಡಿಕೊಂಡವರಲ್ಲಿ ವಿವಾಹಿತರೇ ಅಧಿಕವಾಗಿದ್ದಾರೆ.

ಇನ್ನು ಕರ್ನಾಟಕದ ಸ್ಥಿತಿ ಚಿಂತಾಜನಕವಾಗಿದೆ ಎಂಬುದನ್ನು ಎನ್‌ಸಿಆರ್‌ಬಿ ವರದಿ ಹೇಳುತ್ತದೆ. 2022 ಮತ್ತು 2024ರ ನಡುವೆ ರಾಜ್ಯದ ಒಟ್ಟಾರೆ ಆತ್ಮಹತ್ಯೆ ಪ್ರಕರಣವು ಹೆಚ್ಚಳವಾಗುತ್ತಲೇ ಸಾಗಿದೆ. ಅದರಲ್ಲೂ ಬೆಂಗಳೂರು ನಗರದಲ್ಲೇ ಅಧಿಕ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ.

ಎನ್‌ಸಿಆರ್‌ಬಿ ಪ್ರಕಾರ ಬೆಂಗಳೂರಿನಲ್ಲಿ 2022ರಲ್ಲಿ 2,313ಕ್ಕೂ ಹೆಚ್ಚು, 2023ರಲ್ಲಿ 2370 ಮತ್ತು 2024ರಲ್ಲಿ 2430 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಮೂರು ವರ್ಷಗಳ ಅವಧಿಯಲ್ಲಿ ನಗರದ ಆತ್ಮಹತ್ಯೆ ಪ್ರಮಾಣವು ಪ್ರತಿ ಲಕ್ಷ ಜನಸಂಖ್ಯೆಗೆ 20ರ ಸಮೀಪದಲ್ಲಿದೆ.

ಕೆಲಸದ ಒತ್ತಡ, ವಲಸೆ ಒತ್ತಡ, ಹೆಚ್ಚುತ್ತಿರುವ ಜೀವನ ವೆಚ್ಚಗಳು ಮತ್ತು ದುರ್ಬಲಗೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಯೇ ಈ ಆತ್ಮಹತ್ಯೆಗಳಿಗೆ ಕಾರಣ ಎಂದು ಮಾನಸಿಕ ಆರೋಗ್ಯ ತಜ್ಞರು ಅಭಿಪ್ರಾಯಿಸಿದ್ದಾರೆ.

2022ರಲ್ಲಿ ದೆಹಲಿಯಲ್ಲಿ ಆತ್ಮಹತ್ಯೆಯಿಂದ 3,417 ಮಂದಿ ಸಾವನ್ನಪ್ಪಿದ್ದಾರೆ. ಆದರೆ 2023ರಲ್ಲಿ ಈ ಸಂಖ್ಯೆ 3,131ರಷ್ಟಿದ್ದು, ಆತ್ಮಹತ್ಯೆ ಪ್ರಕರಣಗಳು ಕೊಂಚ ಕಡಿಮೆಯಾಗಿದೆ. ಇನ್ನು 2024ರಲ್ಲಿ ಒಟ್ಟು 2,905 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಪೈಕಿ ಪುರುಷರು 2,078 (71.5%), ಮಹಿಳೆಯರು 825 (28.4%) ಮತ್ತು ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಆಗಿದ್ದಾರೆ. ಆತ್ಮಹತ್ಯೆಗಳಿಗೆ ಕುಟುಂಬ ಸಂಬಂಧಿತ ಸಮಸ್ಯೆಗಳು ಪ್ರಮುಖ ಕಾರಣವಾಗಿದೆ. ಅದನ್ನು ಬಿಟ್ಟರೆ ವೈವಾಹಿಕ ಸಮಸ್ಯೆ, ನಿರುದ್ಯೋಗ ಸಮಸ್ಯೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

# ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಹವಾಮಾನ ಇಲಾಖೆ ಮುನ್ಸೂಚನೆ

ಬೆಂಗಳೂರು: ರಾಜ್ಯದ ಜನತೆಗೆ ಹವಾಮಾನ ಇಲಾಖೆಯು ಮಳೆಯ ಮುನ್ಸೂಚನೆಯನ್ನು ನೀಡಿದೆ. ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.



ಮುನ್ನೆಚ್ಚರಿಕಾ ಕ್ರಮವಾಗಿ ಕೊಡಗು ಮತ್ತು ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದ್ದು, ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲೂ ಬಿರುಗಾಳಿ ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಬೆಂಗಳೂರಿನಲ್ಲಿ ಮುಂದಿನ ಎರಡು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ದಕ್ಷಿಣ ಒಳನಾಡಿನ ಹಲವೆಡೆ ಮಳೆಯ ಅಬ್ಬರ ಜೋರಾಗಿರಲಿದೆ.

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದ್ದು, ಇದರೊಂದಿಗೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ವರದಿ ಮಾಡಿದೆ.

ಉತ್ತರ ಒಳನಾಡಿನ ಧಾರವಾಡ, ಹಾವೇರಿ, ಗದಗ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಗಾಳಿಯ ವೇಗ ಗಂಟೆಗೆ 40 ರಿಂದ 50 ಕಿಲೋಮೀಟರ್ ತಲುಪುವ ಸಾಧ್ಯತೆಯಿದೆ.

ದಕ್ಷಿಣ ಒಳನಾಡಿನ ಚಿಕ್ಕ ಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಿರುಗಾಳಿ ಯೊಂದಿಗೆ ಭಾರೀ ಮಳೆಯಾಗುವ ನಿರೀಕ್ಷೆ ಇರುವುದರಿಂದ ಈ ಭಾಗಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಉಳಿದಂತೆ ಮೈಸೂರು, ಬಳ್ಳಾರಿ, ಹಾಸನ, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲೆಗಳಲ್ಲೂ ಗುಡುಗು ಸಹಿತ ಮಳೆಯಾಗುವ ಲಕ್ಷಣಗಳಿವೆ. ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷವಾಗಿ ಇಂದು ಮತ್ತು ನಾಳೆ ಭಾರೀ ಮಳೆಯ ಮುನ್ಸೂಚನೆ ಇದ್ದು, ಸುಮಾರು 64.5 ಮಿ.ಮೀ.ನಿಂದ 115.5 ಮಿ.ಮೀ.ವರೆಗೆ ಮಳೆಯಾಗಬಹುದು ಎಂದು ಅಂದಾಜಿಸಲಾಗಿದೆ. ಈ ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ತನ್ನ ಅಧಿಕೃತ ಸಾಮಾಜಿಕ ಜಾಲತಾಣದ ಮೂಲಕ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

ಮಳೆ ಮತ್ತು ಗಾಳಿಯ ಸಂದರ್ಭದಲ್ಲಿ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಪ್ರಾಧಿಕಾರ ಸೂಚಿಸಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಸದ್ಯಕ್ಕೆ ಶುಷ್ಕ ವಾತಾವರಣ ಮುಂದುವರಿಯಲಿದೆ ಎಂದು ಇಲಾಖೆಯ ವರದಿ ತಿಳಿಸಿದೆ.

# ಆನ್‌ಲೈನ್ ರಿಯಲ್–ಮನಿ ಗೇಮಿಂಗ್ ಪ್ಲಾಟ್‌ಫಾರ್ಮ್: ಇ.ಡಿ.ಯಿಂದ ಮೂವರು ಆರೋಪಿಗಳ ಬಂಧನ




**ಬೆಂಗಳೂರು, ಮೇ.10–** ಆನ್‌ಲೈನ್ ರಿಯಲ್–ಮನಿ ಗೇಮಿಂಗ್ ಪ್ಲಾಟ್‌ಫಾರ್ಮ್ ಮೂಲಕ ಅಕ್ರಮ ಹಣ ವರ್ಗಾವಣೆ, ವಂಚನೆ ಹಾಗೂ ಇತರ ಅಪರಾಧ ಗಳಲ್ಲಿ ತೊಡಗಿದ್ದಾರೆ ಎಂಬ ಆರೋಪದ ಮೇಲೆ ಜಾರಿ ನಿರ್ದೇಶನಾಲಯ ಮೂರು ಆರೋಪಿಗಳನ್ನು ಬಂಧನಕ್ಕೊಳ ಪಡಿಸಿದೆ.

ಬಂಧಿತರನ್ನು ದೀಪಕ್ ಸಿಂಗ್, ಪೃಥ್ವಿ ರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಎಂದು ಗುರುತಿಸಲಾಗಿದೆ.

ಅವರು Gamezkraft Technologies Ltd ಮತ್ತು ಅದರ ಸಹ ಸಂಸ್ಥೆಗಳ ಮೂಲಕ ರಮ್ಮಿ ಕಲ್ಚರ್ ಮತ್ತು ರಮ್ಮಿ ಟೈಮ್ ಸೇರಿದಂತೆ ಆನ್‌ಲೈನ್ ಗೇಮಿಂಗ್ ಆಪ್‌ಗಳನ್ನು ನಿರ್ವಹಿಸುತ್ತಾರೆ ಎಂದು ಇಡಿ ತಿಳಿಸಿದೆ.

ಪ್ರಕರಣವು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ) ಅಡಿಯಲ್ಲಿ ದಾಖಲಾಗಿದ್ದು, ಹಲವು ಈಖಖಗಳ ಆಧಾರದ ಮೇಲೆ ತನಿಖೆ ನಡೆಯುತ್ತಿದೆ.ಆನ್ಲೈನ್ ಗೇಮಿಂಗ್ ವಂಚನೆಗಳಿಂದ ಹಲವರು ಆತ್ಮಹತ್ಯೆಗೆ ಶರಣಾದ ಪ್ರಕರಣಗಳಿಗೂ ಈ ಕಂಪನಿಯ ವಿರುದ್ಧದ FIRಗಳು ಸಂಬಂಧ ಹೊಂದಿವೆ ಎಂದು ಆರೋಪಿಸಲಾಗಿದೆ.

ಮೇ 7ರಂದು ಕರ್ನಾಟಕ ಹಾಗೂ ದೆಹಲಿ ಎನ್‌ಸಿಆರ್ ಸೇರಿದಂತೆ 17 ಸ್ಥಳಗಳಲ್ಲಿ ED ದಾಳಿ ನಡೆಸಿದ್ದು, ಕಂಪನಿ ಕಚೇರಿಗಳು, ಸಂಸ್ಥಾಪಕರು ಹಾಗೂ ಉದ್ಯೋಗಿಗಳ ಸ್ಥಳಗಳಲ್ಲಿ ದಾಖಲೆಗಳನ್ನು ವಶಪಡಿಸಿ ಕೊಂಡಿದೆ. ಈ ದಾಖಲೆಗಳಲ್ಲಿ ಅಕ್ರಮ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಸಾಕ್ಷ್ಯಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆಯ ವೇಳೆ ಇವುಗಳ ಸಂಸ್ಥಾಪಕರು ಪ್ರಾಥಮಿಕವಾಗಿ ಹಣ ವರ್ಗಾವಣೆ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಇಡಿ ಗುರುತಿಸಿದ್ದು, ನಂತರ ಕಒಐಂ ಸೆಕ್ಷನ್ 19 ಅಡಿಯಲ್ಲಿ ಮೂವರನ್ನೂ ಬಂಧನಕ್ಕೊಳಪಡಿಸಿದೆ. ಇದರ ಜೊತೆಗೆ, ಬಿಟ್ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಶುಕ್ರವಾರ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಮತ್ತು ಇತರ ಇಬ್ಬರನ್ನು ಬಂಧಿಸಿ 10 ದಿನಗಳ ಕಾಲ ಕಸ್ಟಡಿಗೆ ತೆಗೆದುಕೊಂಡಿದ್ದಾರೆಂದು ತಿಳಿದುಬಂದಿದೆ.

ಏಪ್ರಿಲ್ 20 ರಂದು, ಕೇಂದ್ರ ಸಂಸ್ಥೆಯು ಶ್ರೀಕಿ, ಕಾಂಗ್ರೆಸ್ ಯುವ ನಾಯಕ ಮೊಹಮ್ಮದ್ ನಲಪಾಡ್ ಮತ್ತು ಮಾಜಿ ಕೇಂದ್ರ ಸಚಿವ ರೆಹಮಾನ್ ಖಾನ್ ಅವರ ಸಂಬಂಧಿಗೆ ಸಂಬಂಧಿಸಿದ ಸ್ಥಳಗಳು ಸೇರಿದಂತೆ 12 ಸ್ಥಳಗಳಲ್ಲಿ ದಾಳಿ ನಡೆಸಿತ್ತು. ಅಕ್ರಮ ಕ್ರಿಪ್ಟೋ ಕರೆನ್ಸಿ ವಹಿವಾಟು, ಹ್ಯಾಕಿಂಗ್ ಮತ್ತು ಹಣಕಾಸಿನ ಅಕ್ರಮಗಳ ಆರೋಪದ ಮೇಲೆ ಇಡಿ ಹಲವಾರು ವರ್ಷಗಳಿಂದ ಬಿಟ್‌ಕಾಯಿನ್ ಹಗರಣದ ತನಿಖೆ ನಡೆಸುತ್ತಿದೆ. ಶ್ರೀಕಿಯನ್ನು ಈ ಹಿಂದೆ ಬಿಟ್‌ಕಾಯಿನ್ ಪ್ರಕರಣದಲ್ಲಿ ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಶ್ರೀಕೃಷ್ಣ ರಮೇಶ್, ರಾಬಿನ್ ಖಂಡೇಲ್ವಾಲ್ ಮತ್ತು ಸುನೀಶ್ ಹೆಗ್ಡೆ ಬಂಧಿತರಾಗಿದ್ದಾರೆ. ಬಂಧಿತರನ್ನು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಐಟಿ ಸಿಟಿ ಘನತೆಗೆ ಕಪ್ಪುಚುಕ್ಕೆಯಾದ ವರದಕ್ಷಿಣೆ ಪಿಡುಗು

# ದೇಶದ ಒಟ್ಟು ವರದಕ್ಷಿಣೆ ಪ್ರಕರಣಗಳ ಪೈಕಿ ಬೆಂಗಳೂರಿನ ಪಾಲು ಶೇ.87

**ಬೆಂಗಳೂರು, ಮೇ 9:** ಐಟಿ ಸಿಟಿಯ ಘನತೆಗೆ ಈಗ ವರದಕ್ಷಿಣೆ ಪಿಡುಗು ಕಪ್ಪುಚುಕ್ಕೆಯಾಗಿ ಪರಿಣಮಿಸಿದೆ. ಇತ್ತೀಚಿನ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿಯ ಪ್ರಕಾರ ದೇಶದ ಪ್ರಮುಖ ಮೆಟ್ರೋ ನಗರಗಳಲ್ಲಿ ದಾಖಲಾಗುವ ಒಟ್ಟು ವರದಕ್ಷಿಣೆ ಪ್ರಕರಣಗಳ ಪೈಕಿ ಶೇ.87ರಷ್ಟು ಪಾಲು ಬೆಂಗಳೂರಿನಲ್ಲೇ ವರದಿಯಾಗಿದೆ.

ನಗರದಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯಗಳು ಹೆಚ್ಚುತ್ತಿದ್ದು, ವಿಶೇಷವಾಗಿ ವರದಕ್ಷಿಣೆ ಕಿರುಕುಳ ಪ್ರಕರಣಗಳಲ್ಲಿ ಬೆಂಗಳೂರು ಅಗ್ರಸ್ಥಾನ ದಲ್ಲಿದೆ. ದೆಹಲಿ, ಮುಂಬೈ ಮತ್ತು ಕೋಲ್ಕತ್ತಾದಂತಹ ಮಹಾನಗರ ಗಳನ್ನು ಹಿಂದಿಕ್ಕಿ ಸಿಲಿಕಾನ್ ಸಿಟಿಯು ಈ ಅಪ್ರತಿಷ್ಠೆಗೆ ಪಾತ್ರವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡು ಂದಿರುವುದು ಆತಂಕಕ್ಕೆ ಕಾರಣವಾಗಿದೆ.

ದೇಶದ ಪ್ರಮುಖ ಮೆಟ್ರೋ ನಗರಗಳಲ್ಲಿ ಒಟ್ಟು 1,008 ವರದಕ್ಷಿಣೆ



ನಿಷೇಧ ಕಾಯ್ದೆ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ ಬೆಂಗಳೂರು ಒಂದರಲ್ಲೇ 878 ಪ್ರಕರಣಗಳು ವರದಿಯಾಗಿವೆ. ಅಂದರೆ ಮೆಟ್ರೋ ನಗರಗಳ ಒಟ್ಟು ಪ್ರಕರಣಗಳಲ್ಲಿ ಸುಮಾರು ಶೇ. 87ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ಉತ್ತರ ಪ್ರದೇಶದ ಲಖನೌ 48 ಪ್ರಕರಣ ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ದಕ್ಷಿಣ ಭಾರತದ ಇತರ ನಗರಗಳಾದ ಚೆನ್ನೈ, ಕೊಚ್ಚಿ ಮತ್ತು ಕೊಯಮತ್ತೂರಿಗೆ ಹೋಲಿ ಸಿದರೆ ಬೆಂಗಳೂರಿನ ಸ್ಥಿತಿ ಶೋಚ ನೀಯವಾಗಿದೆ. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬೆಂಗಳೂರಿನಲ್ಲಿ ಇಂದಿಗೂ ಇಂತಹ ಸಾಮಾಜಿಕ ಪಿಡುಗು ಆಳವಾಗಿ ಬೇರೂರಿರುವುದು ವಿಪರ್ಯಾಸ.

ಶಿಕ್ಷಣ ಮತ್ತು ತಾಂತ್ರಿಕತೆಯಲ್ಲಿ ಮುಂಚೂಣಿಯಲ್ಲಿದ್ದರೂ, ವರದಕ್ಷಿಣೆಯಂತಹ ಪಿಡುಗು ನಗರದ ಸುರಕ್ಷತೆಯ ಮೇಲೆ ಪ್ರಶ್ನೆಗಳನ್ನು ಮೂಡಿಸಿದೆ. ಕೇವಲ ಕಾನೂನು ಕ್ರಮಗಳಿಂದ ಈ ಸಮಸ್ಯೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಸಮಾಜದಲ್ಲಿ ಈ ಬಗ್ಗೆ ವ್ಯಾಪಕ ಜಾಗೃತಿ ಮೂಡುವುದು ಅತ್ಯಗತ್ಯ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

## ಸರ್ಕಾರಿ ಕಚೇರಿಯಲ್ಲಿ ಅಧಿಕಾರಿಗಳಿಂದಲೇ ಅಕ್ರಮ

# ತಡರಾತ್ರಿಯ ವರೆಗೆ ಗುಂಡು ಪಾರ್ಟಿ: ಭಾರಿ ಆಕ್ರೋಶ



**ರಾಯಚೂರು, ಮೇ. 10:** ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಸಾರ್ವಜನಿಕ ಕಾಮಗಾರಿಗಳ ಇಲಾಖೆ (ಪಿಡಬ್ಲ್ಯುಡಿ) ಕಚೇರಿಯಲ್ಲಿ ನಡೆದ ತಡರಾತ್ರಿಯ ವರೆಗಿನ ಗುಂಡು–ತುಂಡು ಪಾರ್ಟಿ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದೆ. ಸರ್ಕಾರಿ ಕಚೇರಿಯಲ್ಲೇ ತಡರಾತ್ರಿ ವರೆಗೆ ಪಾರ್ಟಿ ನಡೆಸಿದ ಘಟನೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಲಿಂಗಸುಗೂರಿನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ಈ ಪಾರ್ಟಿ ನಡೆದಿದ್ದು, ಎಇಇ ಹನುಮಪ್ಪ ಅದವಾನಿ ನೇತೃತ್ವದಲ್ಲಿ ಈ ಪಾರ್ಟಿ ನಡೆದಿದೆ ಕಚೇರಿಯಲ್ಲೇ ಪರಿಚಯಸ್ಥರು ಹಾಗೂ ಕೆಲವು ಸಿಬ್ಬಂದಿಯನ್ನು ಸೇರಿಸಿಕೊಂಡು ಈ ಪಾರ್ಟಿ ಮಾಡಲಾಗಿದೆಯಂತೆ. ಯಾವ ಉದ್ದೇಶದಿಂದ ಈ ಪಾರ್ಟಿ ನಡೆದಿದೆ ಎಂಬ ಬಗ್ಗೆ ಮಾಹೊತೊ ತಿಳಿದುಬಂದಿಲ್ಲ.

**ನಿಯಮಗಳನ್ನು ಗಾಳಿಗೆ ತೂರಿದ ಅಧಿಕಾರಿಗಳು:** ಸರ್ಕಾರಿ ಕಚೇರಿಗಳಲ್ಲಿ ಕಚೇರಿ ಸಮಯ ಮುಗಿದ ನಂತರ ಇಂತಹ ಚಟುವಟಿಕೆಗಳಿಗೆ ಅವಕಾಶವಿಲ್ಲದಿದ್ದರೂ, ಇಲಾಖೆಯ ನಿಯಮ ಗಳನ್ನು ಲೆಕ್ಕಿಸದೆ ತಡರಾತ್ರಿ ವರೆಗೆ ಪಾರ್ಟಿ ನಡೆದಿರುವುದು ಈಗ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಸಾರ್ವಜನಿಕ ಸೇವೆಗೆ ಮೀಸಲಾಗಿರುವ ಕಚೇರಿಯನ್ನು ಖಾಸಗಿ ಉದ್ದೇಶಗಳಿಗೆ ಬಳಸಿ ಕೊಂಡಿರುವುದನ್ನು ಜನರು ತೀವ್ರವಾಗಿ ಖಂಡಿಸಿದ್ದಾರೆ.

**ವೈರಲ್ ವಿಡಿಯೋದಿಂದ ಬಯಲಾದ ಪಾರ್ಟಿ ಕಥೆ :** ಈ ಪಾರ್ಟಿಗೆ ಸಂಬಂಧಿಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ನಂತರ ಇದು ಬೆಳಕಿಗೆ ಬಂದಿದೆ. ಈ ಘಟನೆ ಹಿನ್ನೆಲೆಯಲ್ಲಿ ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.


ಸರ್ಕಾರಿ ಕಚೇರಿಗಳ ಗೌರವ ಕಾಪಾಡುವ ಜವಾಬ್ದಾರಿ ಹೊಂದಿರುವ ಅಧಿಕಾರಿಗಳೇ ಇಂತಹ ನಡೆ ತೋರಿರುವುದು ಆತಂಕಕಾರಿ ಎಂದು ಅಭಿಪ್ರಾಯ ವ್ಯಕ್ತವಾಗಿದೆ. ಇದು ರಾಯಚೂರು ಜಿಲ್ಲೆಯಲ್ಲಿ ಆಡಳಿತ ವ್ಯವಸ್ಥೆಯ ಪ್ರಶ್ನಿಸು ವಂತಾಗಿದೆ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಸ್ಪಷ್ಟನೆ ನೀಡಬೇಕೆಂಬ ಒತ್ತಾಯವೂ ಕೇಳಿಬರುತ್ತಿದೆ.

# ಎಂಎಂ ಹಿಲ್ಸ್ ಬಳಿ ಚಿರತೆ ದಾಳಿಗೆ ಬಾಲಕ ಬಲಿ

**ಚಾಮರಾಜನಗರ, ಮೇ 10:** ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟಗಳ ಬಳಿ ಭಾನುವಾರ ಚಾರಣ ಮಾಡುತ್ತಿದ್ದಾಗ ಬೆಂಗಳೂರಿನ ಬಾಲಕನೊಬ್ಬ ಚಿರತೆ ದಾಳಿಗೆ ಬಲಿಯಾಗಿದ್ದು, ಅರಣ್ಯ ಪ್ರದೇಶದಲ್ಲಿ ಯಾತ್ರಾರ್ಥಿಗಳು ಮತ್ತು ಚಾರಣಿಗರ ಸುರಕ್ಷತೆಯ ಬಗ್ಗೆ ಕಳವಳ ವ್ಯಕ್ತವಾಗಿದೆ.

ಮೃತನನ್ನು ಬೆಂಗಳೂರಿನ ಲಗ್ಗೆರೆ ನಿವಾಸಿ ಹರ್ಷಿತ್ ಎಂದು ಗುರುತಿಸಲಾಗಿದೆ. ಅವರು ತಮ್ಮ ಕುಟುಂಬ ಮತ್ತು ಸುಮಾರು 10 ಸದಸ್ಯರ ಗುಂಪಿನೊಂದಿಗೆ ಮುಖ್ಯ ಮಲೆ ಮಹದೇಶ್ವರ ಬೆಟ್ಟ ಪ್ರದೇಶದಿಂದ ನಾಗಮಲೆ ಕಡೆಗೆ ಚಾರಣ ಮಾಡುತ್ತಿದ್ದಾಗ, ಇಂಡಿಗಾನ ಪ್ರದೇಶದ ಬಳಿ ಘಟನೆ ಸಂಭವಿಸಿದೆ.

ಅರಣ್ಯ ಅಧಿಕಾರಿಗಳ ಪ್ರಕಾರ, ಚಿರತೆ ಇದ್ದಕ್ಕಿದ್ದಂತೆ ದಟ್ಟವಾದ ಕಾಡಿನಿಂದ ಹೊರಬಂದು ತನ್ನ ಕುಟುಂಬ ಸದಸ್ಯರ ಮುಂದೆ ಬಾಲಕನ ಮೇಲೆ ದಾಳಿ ಮಾಡಿತು. ನಂತರ ಆ ಪ್ರಾಣಿ ಅವನನ್ನು ಹತ್ತಿರದ ಅರಣ್ಯ ಪ್ರದೇಶಕ್ಕೆ ಎಳೆದೊಯ್ದು ಗುಂಪಿನಲ್ಲಿ ಭಯಭೀತರನ್ನಾಗಿ ಮಾಡಿತು, ಅವರು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕಠಿಣ ಭೂಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಹಲವಾರು ಗಂಟೆಗಳ ಪ್ರಯತ್ನದ ನಂತರ, ಚಾರಣ ಮಾರ್ಗದಲ್ಲಿರುವ ಅರಣ್ಯ ಪ್ರದೇಶದಿಂದ ಬಾಲಕನ ಶವವನ್ನು ವಶಪಡಿಸಿ ಕೊಳ್ಳಲಾಯಿತು. ಮಲೆ ಮಹದೇಶ್ವರ ಬೆಟ್ಟಗಳ ಶ್ರೇಣಿಯ ಭಾಗವಾಗಿರುವ ನಾಗಮಲೆ ಮಾರ್ಗವು ದಟ್ಟವಾದ ಅರಣ್ಯ ಪ್ರದೇಶದಿಂದಾಗಿ ಆಗಾಗ್ಗೆ ವನ್ಯಜೀವಿಗಳ ಸಂಚಾರಕ್ಕೆ ಹೆಸರುವಾಸಿ ಯಾಗಿದೆ. ಈ ಪ್ರದೇಶವು ಈ ಪ್ರದೇಶದ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಒಂದಾಗಿದೆ. ಈ ಮಾರ್ಗದಲ್ಲಿ ಇಂತಹ ಘಟನೆ ಇದೇ ಮೊದಲಲ್ಲ. ಇತ್ತೀಚಿನ ತಿಂಗಳುಗಳಲ್ಲಿ, ಇದೇ



ರೀತಿಯ ಪ್ರಕರಣದಲ್ಲಿ ಚಿರತೆ ದಾಳಿ ನಡೆಸುತ್ತಿರುವ ವರದಿಗಳು ಬಂದಿವೆ, ಸಾವು ಮತ್ತು ಗಾಯಗಳು ಸೇರಿದಂತೆ, ಈ ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷದ ಬಗ್ಗೆ ಪದೇ ಪದೇ ಕಳವಳ ವ್ಯಕ್ತವಾಗಿದೆ.

ಈ ಘಟನೆಯು ಭಕ್ತರು ಮತ್ತು ಸ್ಥಳೀಯ ನಿವಾಸಿಗಳಿಂದ ನಿಯಂತ್ರಿತ ಚಾರಣ ಸಮಯ, ಸುಧಾರಿತ ಮೇಲ್ವಿಚಾರಣೆ ಮತ್ತು ಹೆಚ್ಚಿದ ಅರಣ್ಯ ಗಸ್ತು ಸೇರಿದಂತೆ ಬಲವಾದ ಸುರಕ್ಷತಾ ಕ್ರಮಗಳಿಗಾಗಿ ಹೊಸ ಕರೆಗಳನ್ನು ಹುಟ್ಟುಹಾಕಿದೆ, ವಿಶೇಷವಾಗಿ ಮುಂಜಾನೆ ಮತ್ತು ಸಂಜೆ ವನ್ಯಜೀವಿಗಳ ಸಂಚಾರ ಹೆಚ್ಚಿರುವ ಸಮಯದಲ್ಲಿ. ಹೆಚ್ಚಿನ ತನಿಖೆ ನಡೆಯುತ್ತಿದೆ.

# ಚರಕುಂಟೆ ದೇವಸ್ಥಾನದ ಅಭಿವೃದ್ಧಿಗೆ ಒಂದು ಲಕ್ಷ ರೂಪಾಯಿ ಧನಸಹಾಯ

**ಬಳ್ಳಾರಿ. ಮೇ. 10:** ತಾಲೂಕಿನ ಚರಕುಂಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ಎರಿತಾತ ದೇವಸ್ಥಾನದ ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆ ಯವರು ಒಂದು ಲಕ್ಷ ರೂಪಾಯಿ ಹಣವನ್ನು ಸಹಾಯಧನವನ್ನಾಗಿ ನೀಡಿದ್ದಾರೆ. ಸಂಸ್ಥೆಯಿಂದ ನೀಡಲಾದ ಈ ಡಿ. ಡಿ ಯನ್ನು ಬಳ್ಳಾರಿ ತಾಲೂಕಿನ ನಂಬರ್



2 ಕಚೇರಿಯ ಯೋಜನಾಧಿಕಾರಿ ಸತೀಶ್ ಜಿ ಅವರು ಶ್ರೀ ಎರಿತಾತ ಸೇವಾ ಟ್ರಸ್ಟ್ ನ ಅಧ್ಯಕ್ಷ ಪ್ರಕಾಶ್ ಮತ್ತು ಕಾರ್ಯದರ್ಶಿ ಕೃಷ್ಣ ಅವರಿಗೆ ಊರಿನ ಗಣ್ಯರ ಮತ್ತು ಹಲವು ಜನ ಭಕ್ತರ ಸಮ್ಮುಖದಲ್ಲಿ ವಿತರಿಸಿದರು.

# ಬುದ್ಧ, ಬಸವ, ಅಂಬೇಡ್ಕರ್ ವಿಶ್ವ ಕಂಡ ಮಹಾನ್ ದಾರ್ಶನಿಕರು: ದಿಗಂಬರ್ ಮಡಿವಾಳ್



**ಬೀದರ್, ಮೇ. 10:** ಬುದ್ಧ, ಬಸವ, ಅಂಬೇಡ್ಕರ ಅವರುಗಳು ಈ ವಿಶ್ವ ಕಂಡ ಮಹಾನ್ ದಾರ್ಶನಿಕ ಸಂತರು. ತಮ್ಮ ತತ್ವ ಸಿದ್ಧಾಂತಗಳ ಮೂಲಕ ಅಂಧಕಾರದಲ್ಲಿ ಮುಳುಗಿದ್ದ ಜಗತ್ತಿಗೆ ಬೆಳಕು ನೀಡಿದ ಮಹಾತ್ಮರು ಎಂದು ಮಹಾನಗರ ಪಾಲಿಕೆ ಸದಸ್ಯ ದಿಗಂಬರ್ ಮಡಿವಾಳ್ ಹೇಳಿದರು.

ಜನಜನಿತ ಕಲಾ ಪ್ರದರ್ಶನ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಹಾರೂರಗೇರಿಯ ಧಮ್ಮ ಜಾಗೃತಿ ಬುದ್ಧ ವಿಹಾರದಲ್ಲಿ ಜರುಗಿದ 2025–26ನೇ ಸಾಲಿನ ಪರಿಶಿಷ್ಟ ಜಾತಿ ಸಂಘ–ಸಂಸ್ಥೆಗಳ ಧನಸಹಾಯ ಯೋಜನೆಯಡಿ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಜಯಂತೋತ್ಸವ ಅಂಗವಾಗಿ ಸಾಂಸ್ಕೃತಿಕ ಹಬ್ಬ, ವಿಚಾರ ಸಂಕಿರಣ, ಕಲಾ ಪ್ರದರ್ಶನ, ನಾಟಕ ಹಾಗೂ ಸಾಧಕಯಿರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿ ಹೆಚ್ಚಾಗಿ ಕಲೆಗಳಿಗೆ ಬೆಲೆ ಇಲ್ಲದಂತಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನಷ್ಟು ಸಂಸ್ಥೆಗಳಿಗೆ ಅನುದಾನ ನೀಡಿದರೆ ಇಂತಹ ಸಾಂಸ್ಕೃತಿಕ ಹಬ್ಬಗಳನ್ನು ಆಯೋಜಿಸಲು ಅನುಕೂಲವಾಗುತ್ತದೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರು ವಿಶ್ವ ಕಂಡ ಮಹಾನ್ ಸಂತರು. ಅವರು ತೋರಿಸಿದ ಮಾರ್ಗದಲ್ಲಿ ನಡೆದರೆ ಜೀವನ ಸುಂದರವಾಗುತ್ತದೆ ಎಂದರು.

ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಲುಂಬಿಣಿ ಗೌತಮ್ ಅವರು ಮಾತನಾಡಿ, ಹಿಂದೆ ನಾಟಕಗಳಲ್ಲಿ ಮಹಿಳಾ ಪಾತ್ರಗಳನ್ನೂ ಪುರುಷರೇ ನಿರ್ವಹಿಸುತ್ತಿದ್ದರು. ಆದರೆ ಈಗ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸುತ್ತಿದ್ದಾರೆ.

## ಕಂದಾಯ ಸೇವೆಯಲ್ಲಿ ಕರ್ನಾಟಕ ದೇಶದಲ್ಲೇ ನಂಬರ್-1

# ಐತಿಹಾಸಿಕ 1.14 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ: ಖರ್ಗೆ

**ಕಲಬುರಗಿ, ಮೇ. 10:** ಕಂದಾಯ ಇಲಾಖೆ ಸೇವೆಗಳನ್ನು ಪಡೆಯಲು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲೆಂದೇ ಸರ್ಕಾರ ಅನೇಕ ಸೇವೆಗಳನ್ನು ಡಿಜಿಟಲ್ ಮೂಲಕ ಜನರ ಮನೆಗೆ ಆಡಳಿತ ತೆಗೆದುಕೊಂಡು ಹೋಗಿದೆ. ಕಂದಾಯ ಸೇವೆ ಮತ್ತು ಪಂಚಾಯತ್ ರಾಜ್ ಸೇವೆ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 1 ಸ್ಥಾನ ಪಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಯೋಜನೆ ಫಲಾನುಭವಿಗಳಿಗೆ ಹಕ್ಕುಪತ್ರ. ಪಹಣಿ, ಪಿಂಚಣಿ ಮತ್ತಿತರ ವಿವಿಧ ಸೌಲಭ್ಯ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಸರ್ಕಾರ ಈಗಾಗಲೇ ನುಡಿದಂತೆ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸಿದ್ದೇವೆ. ಜನಸಾಮಾನ್ಯರಿಗೆ ಅವರ ಆಸ್ತಿಯ ಕಾನೂನಾತ್ಮಕ ಹಕ್ಕು ದಾಖಲೆಗಳನ್ನು ಒದಗಿಸುವ ಭೂ ಗ್ಯಾರಂಟಿ ಆರನೇ ಗ್ಯಾರಂಟಿ ಎಂದರು.

ಇಂದಿಲ್ಲಿ ವಿತರಿಸಿದ ಹಕ್ಕುಪತ್ರಗಳು, ದರಖಾಸ್ತು ಪೋಡಿ, ಇ–ಫೌತಿ ಕೇವಲ ಕಾಗದವಲ್ಲ, ಇವು ಬಡವರ ಸ್ವಾಭಿಮಾನದ ಬದುಕು ಮತ್ತು ಆರ್ಥಿಕ ಭದ್ರತೆಯ ಅಡಿಪಾಯವಾಗಿವೆ. ಒಬ್ಬ ವ್ಯಕ್ತಿಗೆ ತನ್ನ ಸ್ವಂತನೆಲದ ಮೇಲೆ ಅಧಿಕೃತ ಹಕ್ಕು ಸಿಕ್ಕಾಗ ಮಾತ್ರ ಅವನಿಗೆ ಸ್ವಾಭಿಮಾನದ ಬದುಕು ಲಭಿಸುತ್ತದೆ. ಈ ದಾಖಲೆಗಳು ಬಡವರ ಆರ್ಥಿಕ ಸಬಲೀಕರಣದ ಭರವಸೆಗಳಾಗಿವೆ. ದಾಖಲೆಗಳ ಮೂಲಕ ರೈತರು ಮತ್ತು ಬಡವರು ಬ್ಯಾಂಕ್ ಸಾಲ, ಬೆಳೆ ವಿಮೆ ಹಾಗೂ ಸರ್ಕಾರಿ ಸಬ್ಸಿಡಿಗಳನ್ನು ಸುಲಭವಾಗಿ ಪಡೆಯಬಹುದು. ಕಳೆದ ಮೂರು ವರ್ಷದಲ್ಲಿ ಕಂದಾಯ ಇಲಾಖೆ ಜಿಲ್ಲೆಯ ಇತಿಹಾಸದಲ್ಲೇ ಗಮನಾರ್ಹ ಸಾಧನೆ ಮಾಡಿದ ಪರಿಣಾಮ ಇಂದಿಲ್ಲಿ 1,14,337 ಫಲಾನುಭವಿಗಳು ಏಕಕಾಲದಲ್ಲಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಇದಕ್ಕೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ನೇತೃತ್ವದ ಕಂದಾಯ ಇಲಾಖೆಯ ಇಡೀ ತಂಡದ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

40 ವರ್ಷದಿಂದ ಬಾಕಿ ಇದ್ದ ದರಖಾಸ್ತು ಪೋಡಿಗಳ ದುರಸ್ತಿಗೆ ಮುಕ್ತಿ ನೀಡಲಾಗಿದೆ. 94ಸಿ, 94 ಸಿ.ಸಿ.ನಲ್ಲಿ ಮನೆ ಹಕ್ಕು ಪತ್ರ ನೀಡಲಾಗಿದೆ. ಆಸ್ತಿ ಕಬಳಿಕೆ ತಡೆಯಲು ಆರ್.ಟಿ.ಸಿ.ಗೆ ಆಧಾರ್ ಸೀಡಿಂಗ್ ಮಾಡಿಸಲಾಗಿದೆ. ಹಿಂದೆಂದೂ ಆಗದ ಕೆಲಸ ಕಳೆದ 3 ವರ್ಷದ ನಮ್ಮ ಸರ್ಕಾರದ ಅವಧಿಯಲ್ಲಿ ಜಿಲ್ಲೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಹಿಂದಿನ ಬಿ.ಜೆ.ಪಿ. ಸರ್ಕಾರದಲ್ಲಿ ಅತಿವೃಷ್ಟಿಗೆ ಜಿಲ್ಲೆಗೆ ಗರಿಷ್ಠ ಪರಿಹಾರ ನೀಡಿದ್ದು 22 ಕೋಟಿ ರೂ. ಮಾತ್ರ. ನಮ್ಮ ಅವಧಿಯಲ್ಲಿ ಕಳೆದ ಮೂರು ವರ್ಷದಲ್ಲಿ 2,590 ಕೋಟಿ ರೂ. ಪರಿಹಾರ ಜನರಿಗೆ ನೀಡಿದ್ದೇವೆ. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಪ್ರಾಮಾಣಿಕ ಪ್ರಯತ್ನದಿಂದ ರೈತರಿಗೆ ನ್ಯಾಯಯುತ ಬೆಳೆವಿಮೆ, ಪರಿಹಾರ ಲಭಿಸಿದೆ. ಬೆಳೆವಿಮೆ ಪರಿಹಾರ ನೀಡುವಲ್ಲಿ ಕಲಬುರಗಿ ಜಿಲ್ಲೆ ರಾಷ್ಟ್ರದಲ್ಲಿಯೆ ನಂಬರ್–2ನೇ ಸ್ಥಾನದಲ್ಲಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ್, ಜಿಲ್ಲೆಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ದಾಖಲೆ ಪ್ರಮಾಣದಲ್ಲಿ 6,060 ಹಕ್ಕು ಪತ್ರಗಳನ್ನು ನೀಡಿಲಾಗಿದೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಸಾಧನೆಯಾಗಿದೆ. ಶೇ.76 ರಷ್ಟು ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಮೂಲಕ ಭೂ ದಾಖಲೆಗಳ ನಿರ್ವಹಣೆಯಲ್ಲಿ ಸುರಕ್ಷತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಮಹಾನಗರ ಪಾಲಿಕೆಯ ಮಹಾಪೌರರಾದ ವರ್ಷಾ ರಾಜೀವ ಜಾನೆ, ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಡಿ.ಸಿ.ಪಿ. ಶಾಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತರಾದ ಸಾಹಿತ್ಯ ಆಲದಕಟ್ಟಿ, ಪ್ರಭುರೆಡ್ಡಿ ಸೇರಿದಂತೆ ನೂರಾರು ಸಂಖ್ಯೆಯಲಿ ಕಂದಾಯ ಇಲಾಖೆಯ ಅಧಿಕಾರಿ–ಸಿಬ್ಬಂದಿಗಳು ಕಂದಾಯ ಪರ್ವದಲ್ಲಿ ಭಾಗಿಯಾಗಿದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು.

# ಶಾಲೆ ವಿಲೀನಕ್ಕೆ ಗ್ರಾಮಸ್ಥರಿಂದ ತೀವ್ರ ವಿರೋಧ




**ಬಳ್ಳಾರಿ,ಮೇ.10:** ಬಳ್ಳಾರಿ ಜಿಲ್ಲೆಯ ಹೊಸ ಯರಗುಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಶಾಲೆಗೆ ವಿಲೀನ ಮಾಡುವುದನ್ನು ವಿರೋಧಿಸಿ ಇಂದು ಎಐಡಿಎಸ್‌ಓ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದ ಅಡಿಯಲ್ಲಿ ಗ್ರಾಮಸ್ಥರು ಇಡೀ ಊರೆಲ್ಲಾ ಪ್ರತಿಭಟನಾ ಮೆರವಣಿಗೆ ಮಾಡಿ, ಶಾಲೆ ಮುಂದೆ ಬ್ಯಾನರ್ ಕಟ್ಟಿ, ಶಾಲೆಯ ಮುಖ್ಯ ಶಿಕ್ಷಕರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಶಾಲೆ ಮುಚ್ಚಿದಲ್ಲಿ ನೂರಾರು ತಳ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿರಾಗುತ್ತಾರೆ, ಕೆ ಪಿ ಎಸ್ ಯೋಜನೆ ಶಾಲೆ ಮುಚ್ಚುವ ಹುನ್ನಾರ ಹೊಂದಿರುವ ಯೋಜನೆ ಇದರ ವಿರುದ್ಧ ನಮ್ಮ ಹೋರಾಟವಾಗಿದೆ. ಸರ್ಕಾರ ಜನರ ವಿರೋಧದ ನಡುವೆಯೂ ನಮ್ಮ ಶಾಲೆಯನ್ನು ಮುಚ್ಚಲು ಮುಂದಾದಲ್ಲಿ ನಮ್ಮ ತೀವ್ರ ವಿರೋಧವನ್ನು ಎದುರಿಸಬೇಕಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ಗುರಳ್ಳಿ ರಾಜ, ಊರಿನ ಮುಖಂಡರಾದ ಘನ ಮಲ್ಲಿ, ಸುಂಕಣ್ಣ, ವೀರೇಶ್, ಶಿವಶಂಕರ್, ಎಂ ವೀರೇಶ್ ಸೇರಿದಂತೆ ಹಲವಾರು ಗ್ರಾಮಸ್ಥರು ಇದ್ದರು.

# ನಾಪತ್ತೆಯಾಗಿದ್ದ ಮಹಿಳೆ ಶವವಾಗಿ ಪತ್ತೆ

**ತುಮಕೂರು, ಮೇ 10:** ನಾಪತ್ತೆಯಾಗಿದ್ದ ಮಹಿಳೆ ಮೂರು ದಿನಗಳ ಬಳಿಕ ಶವವಾಗಿ ಪತ್ತೆಯಾಗಿರುವ ಘಟನೆ ನಡೆದಿದೆ. ತಿಪಟೂರು ತಾಲ್ಲೂಕಿನ ಮಾರ ಗೊಂಡನಹಳ್ಳಿ ನಿವಾಸಿ ಚೆನ್ನಮ್ಮ ಮೃತ ದುರ್ದೈವಿಯಾಗಿದ್ದು, ಗ್ರಾಮದ ವ್ಯಕ್ತಿಯೋರ್ವರ ತೆಂಗಿನ ತೋಟದಲ್ಲಿ ಸಂಪೂರ್ಣ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ.

ಚೆನ್ನಮ್ಮರದ್ದು ಅಸಹಜ ಸಾವೋ ಅಥವಾ ಕೊಲೆಯೋ ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದ್ದು, ಆ ಬಳಿಕವೇ ಸಾವಿನ ಹಿಂದಿನ ಸತ್ಯ ಬಯಲಾಗಬೇಕಿದೆ. ಪತಿ ಹಾಗೂ ಮಕ್ಕಳೊಂದಿಗೆ ಗ್ರಾಮದಲ್ಲಿ ವಾಸವಿದ್ದ ಚೆನ್ನಮ್ಮ ಮೇ 7ರ ಸಂಜೆ 5.30ರ ವೇಳೆಗೆ ಮನೆಯಿಂದ ಹೊರ ಹೋಗಿದ್ದವಳು ಮರಳಿ ಬಂದಿರಲಿಲ್ಲ. ಆಕೆಗಾಗಿ ಮೂರು ದಿನಗಳ ಕಾಲ ಕುಟುಂಬಸ್ಥರು ಹುಡುಕಾಟ ನಡೆಸಿದ್ದರೂ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಈ ನಡುವೆ ಯಾರ ಸಹವಾಸಕ್ಕೂ ಹೋಗದ ಚೆನ್ನಮ್ಮ ಶವ ಪತ್ತೆಯಾಗಿರೋದು ಕುಟುಂಬಸ ರಿಗೆ ಬರ ಸಿಡಿಲು ಬಡಿದಂತಾಗಿದೆ.

ಕೂಡಲೇ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ದೇಹದ ಮೇಲಿದ್ದ ಆಭರಣ ಕೂಡ ಹಾಗೆಯೇ ಇರೋದು ಕಂಡುಬಂದಿದೆ. ಹೀಗಿದ್ದರೂ ಈಕೆಯ ಸಾವಿನ ಬಗ್ಗೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದು, ಇದೊಂದು ಉದ್ದೇಶ ಪೂರ್ವಕ ಕೊಲೆ ಎಂದು ದೂರಿದ್ದಾರೆ. ಅಸಲಿಗೆ ಕೆಲ ವರ್ಷಗಳಿಂದ ಊರಿನಲ್ಲಿ ದಲಿತರು ಹಾಗೂ ಸವರ್ಣೀಯರ ನಡುವೆ ಭಿನ್ನಾಭಿಪ್ರಾಯ ಮೂಡಿತ್ತು. ಇದಕ್ಕೆ ಕಾರಣ ನಾಲ್ಕು ವರ್ಷದ ಹಿಂದೆ ಇದೇ ಊರಿನ ದೇವಸ್ಥಾನದೊಳಗೆ ದಲಿತರ ಪ್ರವೇಶ. ಇದಾದ ಬಳಿಕ ದಲಿತರ ಉದ್ದೇಶ ಪೂರ್ವಕವಾಗಿ ತುಳಿಯುವ ಪ್ರಯತ್ನ ಗ್ರಾಮದಲ್ಲಿ ಕೆಲವರಿಂದ ಆಗುತ್ತಿದೆ ಎಂದು ಆರೋಪ ಸಹ ಕೇಳಿ ಬಂದಿದೆ.

# ಕಲಾ ಪ್ರಕಾರ ಯಾವುದೇ ಇರಲಿ ಸಂಪೂರ್ಣ ತೊಡಗಿಸಿಕೊಂಡು ಪ್ರಬುದ್ಧತೆ ಪಡೆಯಿರಿ: ಅಮರೇಶ್ ನುಗಡೋಣಿ ಕರೆ

**ಬಳ್ಳಾರಿ, ಮೇ.10:** ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಇಂದು ರಾಯಚೂರಿನ ಬೆಳಕು ಸಾಹಿತ್ಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿಂದ ಗಡಿನಾಡು ಸಮ್ಮೇಳನ ನಡೆಯಿತು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಅಮರೇಶ ನುಗಡೋಣಿ ಅವರು ಸಮ್ಮೇಳನ ಉದ್ಘಾಟನೆ ಮಾಡಿ, ರಾಜ್ಯದ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಈ ಕಾರ್ಯಕ್ರಮದ ಮೂಲಕ ಆಗುತ್ತಿರುವುದು ಸಂತಸದ ಸಂಗತಿ.

ಯಾವುದೇ ಕಲಾ ಪ್ರಕಾರ ಇರಲಿ. ಅದರಲ್ಲಿ ಸಂಪೂರ್ಣ ಮನಸ್ಸು ತೊಡಗಿಸಿಕೊಂಡು ಪ್ರಬುದ್ಧತೆ ಪಡೆಯಬೇಕು ಎಂದರು.

ಯಾಕೆ, ಯಾರಿಗಾಗಿ ಈ ಕಲೆ ಸಾಹಿತ್ಯ ಎಂಬ ಅರಿವು ಸಹ ಇರಬೇಕು. ಕೇವಲ ಫ್ಯಾಶನ್ ಆಗದೆ, ಕಲಾತ್ಮಕತೆಯನ್ನು ಮೈಗೂಡಿಸಿ ಕೊಳ್ಳಬೇಕು. ಎಷ್ಟು ಬರೆದೆ ಎಂಬುದು ಮುಖ್ಯ ಅಲ್ಲ. ಅವು ಎಷ್ಟು ಕಾಲ ಸಮಾಜಕ್ಕೆ ಪ್ರಸ್ತುತ ಎಂಬುದನ್ನು ಅರಿತು. ಲೋಕದ ಅನಿಷ್ಟತೆಯನ್ನು ಪ್ರಶ್ನಿಸುವಂತಿರಬೇಕು. ಅಂತಹುದನ್ನು ನಾವು ಶಿವ ಶರಣ ವಚನಗಳಲ್ಲಿ ಕಾಣುತ್ತೇವೆ ಎಂದರು.

ಸಮಾರಂಭಗಳಲ್ಲಿ ಸನ್ಮಾನ ಮಾಡುವುದು, ಮಾಡಿಸಿಕೊಳ್ಳುವುದೇ ಮುಖ್ಯ ಆಗದೆ. ಸಮಾಜದಲ್ಲಿ ಸನ್ಮಾನ ಮಾಡಿಸಿಕೊಂಡವರು ಹತ್ತು ವರ್ಷಗಳ ನಂತರ ಹೇಗೆಗುರುತಿಸಿಕೊಳ್ಳುವಂತೆ ಆಗಿದ್ದಾರೆ ಎನ್ನುವಂತಾಗಬೇಕು.

ಕಲ್ಯಾಣ ಕರ್ನಾಟಕದಲ್ಲಿ ಪ್ರತಿಭೆಗಳು ಇಂತಹ ಸಂಸ್ಥೆ ಮೂಲಕ ಬೆಳಕಿಗೆ ಬರಲಿ ಎಂದು ಆಶಿಸಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸರ್ಕಾರ, ಜನಪ್ರತಿನಿಧಿಗಳು, ಶಿಕ್ಷಕರಿಂದ ಮಾತ್ರ ಸಾಧ್ಯ ಇಲ್ಲ. ಎಲ್ಲರೂ ನಾವು ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ದುಡಿಯಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಚೋರನೂರು ಕೊಟ್ರಪ್ಪ ಮಾತನಾಡಿ, ಬಳ್ಳಾರಿಯಲ್ಲಿ ಬೆಳಕು ಸಂಸ್ಥೆಯಿಂದ ಇಂತಹ ಗಡಿ ಸಮ್ಮೇಳನ ನಡೆಸಿದ್ದು ಸ್ವಾಗತಾರ್ಹ, ಗಡಿ ಎಂಬುದು ಭೌಗೋಲಿಕವಾಗಿ ಇರುತ್ತೆ, ಆದರೆ



ಕಲೆ, ಸಾಹಿತ್ಯ ಸಂಸ್ಕೃತಿಗೆ ಗಡಿ ಇರಲ್ಲ ಸರ್ವತ್ರ ಮಾನ್ಯವಾದುದು ಎಂದರು.

ಸಮ್ಮೇಳನದ ಅಧ್ಯಕ್ಷರಾಗಿ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ ಇದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಟ್ರಸ್ಟ್ ನ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ, ಸರ್ಕಾರದ ಅನುದಾನ ಪಡೆಯದೇ ಈ ಬೆಳಕು ಸಂಸ್ಥೆ ಕಲಾವಿದರ ಪ್ರೋತ್ಸಾಹಿಕವಾಗಿ ದಾನಿಗಳ ನೆರವಿನಿಂದಲೇ ನಡೆಸುತ್ತ ಬಂದಿರುವುದು ಹೆಮ್ಮೆಯ ಸಂಗತಿ. ನಮ್ಮಕಾರ್ಯಕ್ರಮಗಳ ಮೂಲಕ ಅನೇಕ ಕಲಾವಿದರನ್ನು ಬೆಳಕಿಗೆ ತಂದಿದೆ,ಆನಂತರ ಅಂತಹವರನ್ನು ಸಾಹಿತ್ಯ ಪರಿಷತ್, ಸರ್ಕಾರ ಗುರುತಿಸಿದೆಂದರು.

ಈ ವೇಳೆ ಬೆಳಕು ಸಂಸ್ಥೆಯ ಗೌರವ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಹಿರೇಮಠ ಅವರು ಗೀತಾ ವಿ.ಆರ್. ಅವರ "ಗೀತಾಮೃತ" ಕೃತಿಯನ್ನು ಲೋಕಾರ್ಪಣೆ ಮಾಡಿದರು.

ನಾಡಿನ ಅನೇಕ ಗಣ್ಯರಿಗೆ ಸನ್ಮಾನ, ಪ್ರಶಸ್ತ ಪ್ರದಾನ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು.

ಸಮಾರಂಭದಲ್ಲಿ , ಜೋಳದರಾಶಿ ತಿಮ್ಮಪ್ಪ, ಡಾ.ಮಯನಿಯಪ್ಪ, ಸಿದ್ಧರಾಮ ಕಲ್ಮಠ, ಬಸವರಾಜ್ ಬಿಸಲಹಳ್ಳಿ, ಶಿವಮೂರ್ತಿ ಹಿರೇಮಠ, ಎನ್.ಬಸವರಾಜ್, ಎನ್.ವೀರಭದ್ರ ಗೌಡ, ಡಾ.ವಿಷ್ಣು ಎಂ.ಶಿಂದೆ, ಉಮ್ಮತ್ತೂರು ಇಂದು ಶೇಖರ್, ಡಾ.ಎಸ್.ಎಸ್.ಪಾಟೀಲ್ ಹುಬ್ಬಳ್ಳಿ ಮೊದಲಾದವರು ಇದ್ದರು.

# ವೇತನ ಬಾಕಿ: ಉಪಹಾರ ನೀಡದ ಬಳ್ಳಾರಿ ಇಂದಿರಾ ಕ್ಯಾಂಟೀನ್ ಸಿಬ್ಬಂದಿ

**ಬಳ್ಳಾರಿ, ಮೇ.10:** ನಗರದಲ್ಲಿನ ಏಳು ಇಂದಿರಾ ಕ್ಯಾಂಟೀನ್ ಗಳಲ್ಲಿ ಬೆಳಗಿನ ಉಪಹಾರ ವಿತರಣೆಯಾಗಲಿಲ್ಲ. ಕಾರಣ ಇಲ್ಲಿನ ಉದ್ಯೋಗಿಗಳಿಗೆ ವೇತನ ನೀಡದೇ ಇದ್ದುದಕ್ಕೆಂದು ತಿಳಿದು ಬಂದಿದೆ.

ನಗರದ ಮೋತಿ ಸರ್ಕಲ್, ಓಪಿಡಿ, ಟ್ರಾಮಾಕೇರ್ ಸೆಂಟರ್, ಬಾಪೂಜಿನಗರ, ಜಿಲ್ಲಾ ಆಸ್ಪತ್ರೆ, ಬೆಳಗಲ್ಲು ಕ್ರಾಸ್‌ನಲ್ಲಿ ಇಂದಿರಾ ಕ್ಯಾಂಟೀನ್ ಗಳಿವೆ. ಇಲ್ಲಿ ಬೆಳಿಗ್ಗೆ 5 ರೂ ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ವೇಳೆ 10 ರೂ ಗೆ ಊಟ ವನ್ನು ನೀಡಲಾಗುತ್ತಿದೆ. ಇದರ ವ್ಯತ್ಯಾಸದ ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದ ನೀಡುತ್ತಿದೆ.

ಬಳ್ಳಾರಿ ನಗರದ ಏಳು ಕ್ಯಾಂಟೀನ್ ಗಳಲ್ಲಿ ದಿನ ನಿತ್ಯ 3 ರಿಂದ ಸಾವಿರ ಜನ ಊಟ ಉಪಹಾರ ನೀಡಲಾಗುತ್ತದೆ. ಮಾಸಿಕ 13 ರಿಂದ 15 ಲಕ್ಷ ರೂಗಳನ್ನು ಪಾಲಿಕೆ ನೀಡುತ್ತದೆ. ಆದರೆ ಇವಗಳನ್ನು ನಿರ್ವಹಣೆ ಮಾಡಲು ಗುತ್ತಿಗೆದಸರ ಕಂಪನಿಗೆ ಕಳೆದ 9 ತಿಂಗಳಿಂದ ಪಾಲಿಕೆಯವರು ಹಣ ನೀಡದ ಕಾರಣ. ಕಂಪನಿಯವರು ಇಲ್ಲಿ ಕೆಲಸ ಮಾಡುತ್ತಿದ್ದ 50 ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿಂದ ವೇತನ ನೀಡದ ಕಾರಣ ಅವರು ಭಾನುವಾರದಿಂದ ಉಪಹಾರ ಊಟ ತಯಾರಿಸಿ ಸರಬರಾಜು ಮಾಡದಿರಲು ನಿರ್ಧರಿಸಿದ್ದರು.

ಈ ವಿಷಯ ತಿಳಿದು ಕ್ಯಾಂಟೀನ್ ನಿರ್ವಹಣೆ ಮಾಡುವವರಿಗೆ ಕೇಳಿದ್ದರಿಂದ ಅವರು ತಕ್ಷಣ ಎಚ್ಚೆತ್ತು ಸಿಬ್ಬಂದಿಗೆ ಬಾಕಿ ವೇತನ ಕೊಡುವುದಾಗಿ ಹೇಳಿ. ಮಧ್ಯಾಹ್ನ ವೇಳೆಗೆ ಅಡುಗೆ ಸಿದ್ದಪಡಿಸಿ, ಮಧ್ಯಾಹ್ನಕ್ಕೆ ಊಟ ಸರಬರಾಜು ಮಾಡಲಾಯ್ತು. ಇನ್ನೂ ಪಾಲಿಕೆ ಐದು ತಿಂಗಳ ಬಾಕಿ ಹಣ ಬಿಡುಗಡೆ ಮಾಡಬೇಕಿದೆಯಂತೆ.

# ಜೆಡಿಎಸ್ ತಾಲೂಕು ಘಟಕಗಳಿಗೆ ಅಧ್ಯಕ್ಷರ ನೇಮಕ–ಮೀನಳ್ಳಿ ತಾಯಣ್ಣ

**ಬಳ್ಳಾರಿ ಮೇ,08** ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ನೇತೃತ್ವದಲ್ಲಿ ತಾಲ್ಲೂಕು ಅಧ್ಯಕ್ಷರನ್ನು ನೂತನವಾಗಿ ಆಯ್ಕೆ ಮಾಡಿ ಮತ್ತು ನೇಮಕಾತಿ ಆದೇಶ ಪತ್ರವನ್ನು ವಿತರಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.




ಕಂಪ್ಲಿ ವಿಧಾನಸಭಾ ಕ್ಷೇತ್ರಕ್ಕೆ ಮರು ಆಯ್ಕೆಯಾಗಿರುವ ಏಳ್ಕೆ ಮೇಘರಾಜ ರವರು, ಮತ್ತು ಸಂಡೂರು ವಿಧಾನ ಸಭಾ ಕ್ಷೇತ್ರಕ್ಕೆ ನೂತನ ತಾಲ್ಲೂಕು ಅಧ್ಯಕ್ಷರನ್ನಾಗಿ ಹೊಸಿಗೇರಪ್ಪರವರು, ಸಿರುಗುಪ್ಪ ತಾಲ್ಲೂಕು ಅಧ್ಯಕ್ಷರನ್ನಾಗಿ ಶಿವನಾರಾಯಣರವರು, ಜಿಲ್ಲಾ ಉಪಾಧ್ಯಕ್ಷರನ್ನಾಗಿ ರಾಮಾಂಜೀನಿಯವರನ್ನು, ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರದ ಯುವ ಘಟಕದ ಅಧ್ಯಕ್ಷರನ್ನಾಗಿ ಭರತ್ ಕುಮಾರ್‌ರನ್ನು ಆಯ್ಕೆ ಮಾಡಿ ಎಲ್ಲಾರಿಗೂ ಆದೇಶ ಪತ್ರವನ್ನು ವಿತರಿಸಲಾಯಿತು.

ಮತ್ತು ಮುಂದೆ ಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಸೋಮಪ್ಪ ಕುರೆಕುಪ್ಪ, ಯಲ್ಲನಗೌಡ, ವಿಜಯ್ ಕುಮಾರ್ ಮಧುರೈ ಜಿಲ್ಲಾ ಕಾಯ9ಧ್ಯಕ್ಷರು, ರಾಮಾಂಜೀನಿ ಉಪಾಧ್ಯಕ್ಷರು, ಬಾಷಾ, ಮಲ್ಲಿಕಾರ್ಜುನ ಪುಷ್ಪಾ.ಜೆ, ಶಿವಗಂಗಾ, ವಿಜಯ, ಶಮೀಮ್ ಬಾನು, ರಮಾದೇವಿ ಮತ್ತು ಪಕ್ಷದ ಇತರರು ಭಾಗವಹಿಸಿದ್ದರು.

# ಬೆಳಗಿನಜಾವ ಐಪಿ ಸೆಟ್‌ಗಳಿಗೆ, ತ್ರಿಫೇಸ್ ವಿದ್ಯುತ್ ಪೂರೈಕೆಗೆ ಅಗ್ರಹಿಸಿ ಹೋರಾಟ



**ಕಲಬುರಗಿ, ಮೇ. 10:** ವಿದ್ಯುತ್ ಖಾಸಗೀಕರಣ ವಿರೋಧಿಸಿ, ಅತಿಹೆಚ್ಚು ಬಿಸಿಲಿನ ತಾಪಮಾನ ಹೆಚ್ಚಾಗಿದ್ದು ಮಧ್ಯಾನದಲ್ಲಿ ಐಪಿ ಸೆಟ್‌ಗಳಿಗೆ ರೈತರ ಹಿತದೃಷ್ಟಿಯಿಂದ 3 ಫೇಸ್ ವಿದ್ಯುತ್ ಕೊಡುವುದು ಕೈ ಬಿಟ್ಟು ಬೆಳಗಿನ ಜಾವ 3 ಪ್ರೇಸ ವಿದ್ಯುತ್ ಕೊಡಬೇಕು ಎಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ವಿದ್ಯುತ್ ಪೂರೈಕೆ ಕಂಪೆನಿಯ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ಮಾಡಿದರು.

ಸಂಘದ ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಚಂದಪ್ಪ ಪೂಜಾರಿ, ದಿಲೀಪ್ ನಾಗೂರೆ, ದೇವು ಬಿರಾದಾರ್, ಸಾಯಬಣ್ಣ ಕೊರಬಾ, ಬಾಬು ಮೇಳಕುಂದಿ, ಶಿವಕುಮಾರ್ ಹೇರೂರ್ ಮುಂ ತಾದವರು ಪಾಲ್ಗೊಂಡಿದ್ದರು.

ಪ್ರತಿಭಟನೆಕಾರರು ನಂತರ ಜೆಸ್ಕಾಂ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಪತ್ರ ಸಲ್ಲಿಸಿ, ತೊಗರಿ ನಾಡು ಜಿಲ್ಲೆಯ ಬಿಸಿಲು ನಾಡು ಎಂದೆ ಖ್ಯಾತಿ ಪಡೆದಿದೆ ಬಿಸಿಲು ನಾಡಿನಲ್ಲಿ ನೀರಾವರಿ ಬೆಳೆಗಳ ಮೇಲೆ ನಂಬಿಕೊಂಡು ಜೀವನ ನಡೆಸುತ್ತಿರುವ ಪಂಪ್ ಸೆಟ್ ರೈತರು ಅಳಿವು ಉಳಿವಿನ ಪ್ರಶ್ನೆ ಬಹಳ ಗಂಭಿರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಧ್ಯಾಹ್ನದ ಉರಿ ಬೆಂಕಿಯಂತಹ ಬಿಸಿಲಿನಲ್ಲಿ ರೈತರು ತಮ್ಮ ಜೀವದ ಹಂಗನ್ನು ತೊರೆದು ಬೆಳೆಗಳಿಗೆ ಖಡಿ ಬಿಸಿಲಿನಲ್ಲಿ ನೀರು ಉಣಿಸುತ್ತಾರೆ. ಬಿಸಿಲಿನ ತಾಪಮಾನಕ್ಕೆ ನೀರು ಬಿಡುವುದು ಆಗುತ್ತಿಲ್ಲ. ಬಿಸಿಲಿನ ಝಳ ಬಡಿದು ನೀರು ಸಹ ಕಾಲುವೆ ಮೂಲಕ ಮುಂದಕ್ಕೆ ಹೋಗುವುದಿಲ್ಲ. ಒಂದು ಕಾಲುವೆ ಸಹ ತೊಯ್ಯುವುದಿಲ್ಲ ಮತ್ತು ಬಿಸಿಲಿನ ತಾಪವನ್ನು ಹೆಚ್ಚಾಗಿ ರೈತರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ತಮ್ಮ ಪ್ರಾಣ ಕಳೆದುಕೊಳ್ಳುವ ಭೀತಿಗೆ ಒಳಗಾಗಿದ್ದಾರೆ. ಮಾಡಿದ ಸಾಲ ತೀರಿಸಲು ಸಾಧ್ಯವಾಗುತ್ತಿಲ್ಲ. ಸಾಲದ ಬಾಧೆ ತಾಳಲಾರದೆ ಸರಣಿ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗಿವೆ. ರೈತವಿರೋಧಿ ಧೋರಣೆ ಇದಾಗಿದೆ. ವಿದ್ಯುತ್ ಪೂರೈಕೆ ಸಮಯ ಬದಲಾವಣೆ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ನೀರಾವರಿ ಪಂಪ್ ಸೆಟ್‌ಗಳಿಗೆ ಬೆಳಗಿನ ಜಾವದಲ್ಲಿ ಸಮಯ 5 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಮತ್ತು ಸಾಯಂಕಾಲ 5 ಗಂಟೆಯಿಂದ ಸಾಯಂಕಾಲ 8 ಗಂಟೆಯವರೆಗೆ ಮೂರು ಫೇಸ್ ವಿದ್ಯುತ್ ಪೂರೈಸುವಂತೆ, ಬೇಸಿಗೆ ಸಮಯದಲ್ಲಿ ಸರಿಯಾದ ಸಮಯಕ್ಕೆ ನೀರು ಉಣಿಸದಿದ್ದರೆ ಬೆಳೆಗಳು ಒಣಗಿ ಹೋಗುತ್ತವೆ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗುತ್ತದೆ. ಪಂಪ್‌ಸೆಟ್ ಟಿಸಿ ಸುಟ್ಟರೆ ಒಂದು ವಾರವಾದರೂ ಟಿಸಿ ಕೂಡಿಸುವುದಿಲ್ಲ. ಬೆಳೆ ಒಣಗುತ್ತದೆ. ತಕ್ಷಣವೇ ಪಂಪ್ ಸೆಟ್ ಸುಟ್ಟ ತಕ್ಷಣವೇ ಟಿಸಿ ಕೂಡಿಸಬೇಕು ಎಂದು ಅವರು ಆಗ್ರಹಿಸಿದರು.

ಕಾಳಗಿ ತಾಲ್ಲೂಕಿನ ರಟಕಲ್‌ನ ದ್ರೌಪದಿ ಗಂಡ ಬಂಡಪ್ಪ ಒಳಕಿಂಡಿ ಪಂಪ್‌ಸೆಟ್ ಮುಖ್ಯ ತಂತಿ ಜೋತುಬಿದ್ದಿದ್ದು, ಕಂಬ ಬಹಳ ದೂರವಾಗಿದೆ ಮತ್ತು ಮೂರು ಕಂಬಗಳನ್ನು ಹಾಕಿಸುವಂತೆ, ನೀರಾವರಿ ಪಂಪ್‌ಸೆಟ್‌ಗಳಿಗೆ ಪಂಪ್‌ಸೆಟ್ಟುಗಳಿಗೆ ಅನುಗುಣವಾಗಿ ಹೆಚ್ಚುವರಿ ಟ್ರಾನ್ಸ್ ಫಾರ್ಮರ್ ಮಂಜೂರು ಮಾಡುವಂತೆ, ರಟಕಲ್ ಗ್ರಾಮದ ಕಾರ್ಮಿಕ ಸಂಗು ಬಿರಾದಾರ್ ಅವರು ಮುಖ್ಯ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದು, ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಮಂಜೂರು ಮಾಡುವಂತೆ ಅವರು ಒತ್ತಾಯಿಸಿದರು.

# ಹವಾ ಮಲ್ಲಿನಾಥ ಮಹಾರಾಜರಿಂದ ಸರ್ವ ಧರ್ಮಗಳ ಗ್ರಂಥಗಳಿಗೆ ಅಭಿನಂದನೆ, ಗೌರವ



**ಕಲಬುರಗಿ, ಮೇ. 10:** ಜೈ ಭಾರತ ಮಾತಾ ಸೇವಾ ಸಮಿತಿ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜ ನೀರಗುಡಿ ಅವರ ಸಾನ್ನಿಧ್ಯದಲ್ಲಿ ಸರ್ವಧರ್ಮಗಳ ಗ್ರಂಥಗಳಿಗೆ ಅಭಿವಂದನಾ ಸಮಾರಂಭವು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಜರುಗಿತು.

ಕಾರ್ಯಕ್ರಮದಲ್ಲಿ ವಿವಿಧ ಧರ್ಮಗುರುಗಳು ಮತ್ತು ಮುಖಂಡರು ಮಾತನಾಡಿ, ಸಂವಿಧಾನ ಹಾಗೂ ಎಲ್ಲಾ ಧರ್ಮಗಳ ಗ್ರಂಥಗಳಿಗೆ ಅಭಿವಂದನೆ ಸಲ್ಲಿಸಿರುವುದು ರಾಷ್ಟ್ರೀಯ ಏಕತೆಯ ಸಂದೇಶ ಸಾರಿದಂತಾಗಿದೆ. ಹವಾ ಮಲ್ಲಿನಾಥ ಮಹಾರಾಜರು ದೇಶಬಾಂಧವರಲ್ಲಿ ಸಹೋದರತ್ವ ಮತ್ತು ಸೌಹಾರ್ದ ಮೂಡಿಸುತ್ತಿದ್ದು, ಈ ಕಾರ್ಯ ಸರ್ವರಿಗೂ ಮಾದರಿಯಾಗಿದೆ ಎಂದರು.

ಜೈ ಭಾರತ ಮಾತಾ ಸೇವಾ ಸಮಿತಿ ರಾಷ್ಟ್ರೀಯ ವಕ್ತಾರ ವೈಜನಾಥ ಎಸ್.ಝಳಕಿ ಮಾತನಾಡಿ, ಹವಾ ಮಲ್ಲಿನಾಥ ಮಹಾರಾಜರು ದೇಶದ ಏಕತೆ ಹಾಗೂ ಅಖಂಡತೆಗಾಗಿ ವಿವಿಧ ರಾಜ್ಯಗಳಲ್ಲಿ ಸರ್ವಧರ್ಮ ಸಮಭಾವ, ದೇಶಭಕ್ತಿ ಹಾಗೂ ಮಾನವೀಯ ಮೌಲ್ಯಗಳ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ ಎಂದರು.

ಸೆಂಟ್ ಮೇರಿ ಚರ್ಚ್‌ನ ಫಾದರ್ ಫ್ರಾನ್ಸಿಸ್, ಬಹಮನಿ ದರ್ಗಾ ಮುತಾವಲ್ಲಿ ಖಾಜಿ ರಿಜ್ವಾನ್, ಸರಡಗಿ ಮಹಾಲಕ್ಷ್ಮಿ ಶಕ್ತಿಪೀಠದ ಅಪ್ಪಾರಾವ ದೇವಿ ಮುತ್ಯಾ, ಗುರುದ್ವಾರದ ಭಾಯಿ ದೀಪ್‌ಸಿಂಗ್, ಭಂತೇಜಿ ಸುಧಾಮ ಹಾಗೂ ಅಖಿಲ ಭಾರತ ಉರ್ದು ಮಂಚ್‌ನ ಸೈಯದ್ ರವೂಫ್ ಖಾದ್ರಿ ಸೇರಿದಂತೆ ಅನೇಕ ಧರ್ಮಗುರುಗಳು ಪಾಲ್ಗೊಂಡಿದ್ದರು.

# ಸೇವಾ ಮನೋಭಾವ ಬೆಳಿಸಿಕೊಳ್ಳಿ: ಚಂದ್ರಯ್ಯ ಬಾಡಿಯಾಲ ಕರೆ



**ರಾಯಚೂರು, ಮೇ. 10:** ನಾ.ಸು. ಹರ್ಡೀಕರ್ ಅವರ ಸೇವಾ ಮನೋಭಾವ ಇಂದಿನ ಯುವಜನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಾಸು ಅವರದು ದೇಶಭಕ್ತಿ ಪ್ರೇರೇಪಿಸುವ ಸೇವೆಯಗಿತ್ತು. ಇಂದಿನ ಯುವಜನಾಂಗಕ್ಕೆ ದೇಶಭಕ್ತಿಯ ಪರಿಕಲ್ಪನೆಯನ್ನು ಮೂಡಿಸುವುದು ಇಂದಿನ ಅಗತ್ಯವಾಗಿದೆ ಎಂದು ನಳಂದ ಡಿ.ಇಡಿ ಕಾಲೇಜಿನ ಪ್ರಾಚಾರ್ಯ ಚಂದ್ರಯ್ಯ ಬಾಡಿಯಾಲ ಹೇಳಿದರು.

ತಾಲ್ಲೂಕಿನ ಯರಮರಸ್‌ನ ನಳಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾರತ ಸೇವಾದಳ ಜಿಲ್ಲಾ ಸಮಿತಿ ಹಾಗೂ ನಳಂದ ಶಿಕ್ಷಣ ಮಹಾವಿದ್ಯಾಲಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ನಾಸು ಹರ್ಡೀಕರ್ ಅವರ 137ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಯುವಕರು ಶಿಕ್ಷಣದ ಜತೆ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಹಾಗೂ ಸೇವಾ ಮನೋಭಾವ ಅಳವಡಿಸಿ ಕೊಂಡಾಗ ಇಂಥ ಸ್ವತಂತ್ರ ಸೇನಾನಿಗಳ ಜಯಂತಿ ಆಚರಣೆ ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ. ಭಾರತ ಸೇವಾದಳದ ಜಿಲ್ಲಾ ಘಟಕದ ಉಪಾಧ್ಯಕ್ಷ ಜಿ.ಎಸ್.ಹಿರೇಮಠ ಮಾತನಾಡಿ, ಪ್ರತಿಯೊಬ್ಬರೂ ರಾಷ್ಟ್ರ ಧ್ವಜ, ರಾಷ್ಟ್ರ ಲಾಂಛನ, ರಾಷ್ಟ್ರಗೀತೆ, ಸಂವಿಧಾನದ ಬಗ್ಗೆ ತಿಳಿದುಕೊಂಡು ರಾಷ್ಟ್ರದ ಏಕತೆಗಾಗಿ ಒಗ್ಗಟ್ಟಾಗಿ ದುಡಿಯಬೇಕು.ಈ ನಿಟ್ಟಿನಲ್ಲಿ ನಾಸು ಹರ್ಡೀಕರ್ ಅವರ ಜೀವನ ನಮಗೆಲ್ಲರಿಗೂ ಮಾದರಿಯಾಗಲಿ ಎಂದು ಹೇಳಿದರು.

ನಳಂದ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಚಾರ್ಯ ಸಿದ್ದಪ್ಪ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಮಹನೀಯರ ಆದರ್ಶಗಳನ್ನು ಪಾಲಿಸಿಕೊಂಡು ಮುಂದಿನ ದಿನಗಳಲ್ಲಿ ನಿಸ್ವಾರ್ಥವಾಗಿ ದೇಶಸೇವೆ ಮಾಡಬೇಕು ಎಂದರು.

# ಯುವಕರು ಉದ್ಯೋಗದಿಂದ ಉದ್ಯಮದತ್ತ ಸಾಗಲಿ: ರಾಜೇಶ್ ಚೆಲ್ವಾರ್ ಕರೆ



**ಬೀದರ್, ಮೇ. 10:** ಇಂದಿನ ಯುವಕರು ಕೇವಲ ಉದ್ಯೋಗಕ್ಕಾಗಿ ಕಚೇರಿಗಳಗೆ ಅಲೆಯುವುದು ಮತ್ತು ಕಾಯುವ ಮನೋಭಾವವನ್ನು ಬಿಟ್ಟು, ಸ್ವಂತ ಉದ್ಯಮ ಆರಂಭಿಸುವ ದಿಸೆಯಲ್ಲಿ ಮುಂದಾಗಬೇಕು ಎಂದು ರಿಲಯನ್ಸ್ ಜಿಯೋ ಸಹಾಯಕ ಉಪಾಧ್ಯಕ್ಷ ರಾಜೇಶ್ ಚೆಲ್ವಾ ಕರೆ ನೀಡಿದರು.

ನಗರದ ಪ್ರತಾಪ ನಗರದಲ್ಲಿರುವ ಶಾರದಾ ರೂಡ್‌ಸೇಡ್ ಸಭಾಂಗಣದಲ್ಲಿ ಏರ್ಪಡಿದ ಕಾರ್ಯಕ್ರಮದಲ್ಲಿ ಲಘು ಉದ್ಯೋಗ 32ನೇ ಭಾರತೀಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮವು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಮಾತನ್ನು ಉಲ್ಲೇಖಿಸಿ, ತಮ್ಮ ಊರಿಗೆ ಸೇವೆ ಸಲ್ಲಿಸುವ ಆಸೆಯನ್ನು ವ್ಯಕ್ತಪಡಿಸಿದರು. ಉದ್ಯಮಶೀಲತೆ ದೇಶದ ಆರ್ಥಿಕಾಭಿವೃದ್ಧಿಗೆ ಬೆನ್ನೆಲುಬಾಗಿದ್ದು, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಶಕ್ತಿಯನ್ನು ಹೊಂದಿದೆ ಎಂದು ಹೇಳಿದರು.

ಮುಖ್ಯ ಅತಿಥಿ ಮಂಜುನಾಥ ಹೂಗಾರ ಅವರು ಮಾತನಾಡಿ, ದೇಶದಲ್ಲಿ ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಉತ್ತೇಜಿಸುವ ಉದ್ದೇಶದಿಂದ ಲಘು ಉದ್ಯೋಗ ಭಾರತಿಯು ವಿವಿಧ ಯೋಜನೆಗಳನ್ನು ರೂಪಿಸಿ ಕೊಂಡು ಕಾರ್ಯನಿರ್ವಹಿಸುತ್ತಿದೆ ಯುವಜನರಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು, ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು ಹಾಗೂ ಉದ್ಯಮಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವುದು ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿ ಹಾಗೂ ಪ್ರಮುಖ ಭಾಷಣಕಾರ ಡಾ. ವೀರೇಂದ್ರ ಶಾಸ್ತ್ರಿ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿಯೂ ಉದ್ಯಮ ಶೀಲತೆಯನ್ನು ಬೆಳೆಸಲು ಸಂಘಟನೆ ವಿಶೇಷ ಗಮನ ಹರಿಸುತ್ತಿದ್ದು, ಆರ್ಥಿಕ ಸ್ವಾವಲಂಬನೆ ಸಾಧಿಸಲು ಪ್ರೋತ್ಸಾಹ ನೀಡುತ್ತಿದೆ. ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕೆಲಸವನ್ನು ಕೂಡ ಲಘು ಉದ್ಯೋಗ ಭಾರತಿಯು ನಿರಂತರವಾಗಿ ಮಾಡುತ್ತಿದೆ ಎಂದು ಹೇಳಿದರು.

# ಶಾಂತಿನೆಮ್ಮದಿಯ ಬದುಕಿಗೆ ಧರ್ಮವೇ ಮೂಲ: ಶ್ರೀ ರಂಭಾಪುರಿ ಜಗದ್ಗುರುಗಳು



**ಗಜೇಂದ್ರಗಡ/ರೋಣ–ಮೇ–10.** ಅರಿವುಳ್ಳ ಮಾನವ ಜನ್ಮದಲ್ಲಿ ಅರಿತು ಬಾಳಿದರೆ ಬದುಕು ಬಂಗಾರ. ಮರೆತು ಮಲಗಿದರೆ ಬದುಕು ಬಂಧನಕಾರಿ. ಮಹಾತ್ಮರ ಸಂದೇಶಗಳು ಎಲ್ಲರಿಗೂ ದಾರಿದೀಪ. ಶಾಂತಿ ನೆಮ್ಮದಿಯ ಬದುಕಿಗೆ ಧರ್ಮವೇ ಮೂಲವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಭೌತಿಕ ಬದುಕಿಗೆ ಸಂಪತ್ತು ಅಷ್ಟೇ ಮುಖ್ಯವಲ್ಲ. ಅದರೊಂದಿಗೆ ಧರ್ಮಪ್ರಜ್ಞೆ ಮತ್ತು ರಾಷ್ಟ್ರಪ್ರಜ್ಞೆ ಅಗತ್ಯ. ಮಾನವನಿಗೆ ಯೋಗ್ಯ ಸಂಸ್ಕಾರ ದೊರೆತರೆ ಬೆಲೆಯುಳ್ಳ ಬದುಕು ಸಾರ್ಥಕಗೊಳ್ಳುತ್ತದೆ. ಜ್ಞಾನ ಕ್ರಿಯಾತ್ಮಕವಾದ ಶಿವಾದ್ವೈತ ಸಿದ್ಧಾಂತವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿ ಸಕಲರನ್ನು ಉದ್ಧರಿಸಿದ್ದಾರೆ. ಅವರು ಸಾಮಾಜಿಕ ಸಂವೇದನಾಶೀಲ ಮೌಲ್ಯಗಳನ್ನು ಬೆಳೆಸಿದ್ದನ್ನು ಮರೆಯಲಾಗದು. ಇತಿಹಾಸ ನಿನ್ನೆ ಸುಖ ಇತ್ತೆಂದು ಹೇಳುತ್ತದೆ. ವಿಜ್ಞಾನ ನಾಳೆ ಸುಖ ಇದೆಯೆಂದು ಹೇಳುತ್ತದೆ. ಆದರೆ ಧರ್ಮ ಸತ್ಯ ಮತ್ತು ಪ್ರಾಮಾಣಿಕವಾಗಿ ಬದುಕಿದರೆ ಇದೇ ಜನ್ಮದಲ್ಲಿ ಸುಖ ಇದೆಯೆಂದು ಹೇಳುತ್ತದೆ. ಸೂಡಿ ಜುಕ್ತಿ ಹಿರೇಮಠದ ಡಾ॥ ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ನಿರಂತರ ಶ್ರಮ ಸಾಧನೆಯಿಂದ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ನೂತನ ರಥ ನಿರ್ಮಾಣ ಮಾಡುವ ಸಂದರ್ಭದಲ್ಲಿ ಬಹಳ ಶ್ರಮಪಟ್ಟಿದ್ದನ್ನು ಕಾಣುತ್ತೇವೆ. ಶ್ರೀಗಳವರ ನಿರಂತರ ಧರ್ಮ ಕಾರ್ಯ ಕಂಡು ಅತ್ಯಂತ ಸಂತೋಷವಾಗಿದೆ ಎಂದು ಹರುಷ ವ್ಯಕ್ತಪಡಿಸಿ ಶ್ರೀ ಪೀಠದಿಂದ ರೇಶ್ಮೆ ಮಡಿ ಸ್ಮರಣಿಕೆ ಫಲ ಪುಷ್ಪವಿತ್ತು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಠ ಮಂದಿರಗಳು ನಮ್ಮ ಸಂಸ್ಕೃತಿಯ ಸಂರಕ್ಷಣೆಯ ಕೇಂದ್ರಗಳಾಗಿವೆ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಯಾವಾಗಲೂ ಶಾಶ್ವತವಾಗಿರುತ್ತವೆ. ಅಧರ್ಮದ ಕವಚ ಹೊತ್ತ ಮನುಷ್ಯನ ವಿಚಾರಗಳು ಬಹಳ ಕಾಲ ಬಾಳಲಾರವು. ಸೂಡಿ ಶ್ರೀಗಳ ಶ್ರಮ ಭಕ್ತರ ಸಹಕಾರ ಇಂದಿನ ಎಲ್ಲ ಸಂಭ್ರಮಕ್ಕೆ ಕಾರಣವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ ಶ್ರೀಶೈಲ ಡಾ॥ಚನ್ನಸಿದ್ಧರಾಮ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಅತಿ ಶತ್ರುಗಳನ್ನು ನಿಯಂತ್ರಿಸಬಹುದು. ಆದರೆ ಮತಿ ಶತ್ರುಗಳನ್ನು ನಿಯಂತ್ರಿಸುವುದು ಕಷ್ಟ. ನದಿಯ ನೀರು ಎಷ್ಟು ತುಂಬಿದರೂ ಅದು ಹೇಗೆ ಖಾಲಿಯಾಗುವುದಿಲ್ಲವೋ ಹಾಗೆಯೇ ಧರ್ಮದ ಅರಿವನ್ನು ಎಷ್ಟು ಅರಿತರೂ ಅದು ಖಾಲಿಯಾಗುವುದಿಲ್ಲ. ವೀರಶೈವ ಧರ್ಮ ವಿಶ್ವ ಬಂಧುತ್ವದ ಮೂಲಕ ಸಮಾಜದಲ್ಲಿ ಸಾಮರಸ್ಯ ಸೌಹಾರ್ದತೆ ಬೆಳೆಸುತ್ತ ಬಂದಿದೆ. ಸೂಡಿಯಲ್ಲಿ ಜರುಗಿದ ಈ ಸಮಾರಂಭ ತಮಗೆ ಅತ್ಯಂತ ಸಂತೋಷ ತಂದಿದೆ ಎಂದರು.

# ಕೋಟೆಯಲ್ಲಿ ಸಂಗೀತ ನೃತ್ಯಗಳ ಸ್ವರ–ನಾದದ ಅನುರಣನ

**ಕಲಬುರಗಿ, ಮೇ. 10:** ನಗರದ ಐತಿಹಾಸಿಕ ಕಲಬುರಗಿಯ ಬಹಮನಿ ಕೋಟೆ ಆವರಣದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲಾಡಳಿತ ಆಯೋಜಿಸಿದ್ದ 'ಅನಂತರ' ಸಂಗೀತ ಸಂಜೆ ರಸಮಂಜರಿ ಕಾರ್ಯಕ್ರಮವು ಪ್ರೇಕ್ಷಕರಿಗೆ ಸಂಗೀತ–ನಾಟ್ಯದ ರಸದೌತಣ ಉಣಬಡಿಸಿತು. ಕನ್ನಡ, ಹಿಂದಿ ಗೀತೆಗಳು, ಸೂಫಿ ಸ್ಪರ್ಶದ ಕವ್ವಾಲಿಗಳು, ಭಜನಗಳ 'ಸ್ವರ'–'ನಾದ'ವು 14ನೇ ಶತಮಾನದ ಕೋಟೆ ಆವರಣದ ನಿಶ್ಚಲ ಕಲ್ಲು–ಕಲ್ಲಿನಲ್ಲೂ ಅನುರಣಿಸಿತು.



ಸಂಜೆ ಮೋಡಗಳು ದಟ್ಟೈಸಿ ತಂಗಾಳಿ ಬೀಸಿತ್ತು. ಬಿರುಬಿಸಿಲಿನಿಂದ ಕಾದಿದ್ದ ಕೋಟೆ ಕಲ್ಲುಗಳನ್ನು ತಣಿಸಿತ್ತು. ಮುಸ್ಸಂಜೆ ಸರಿದು ಕತ್ತಲು ಆವರಿಸಿದ ಹೊತ್ತಲ್ಲಿ ಗಾಯನದ ಇಂಪು ಶುರುವಾಯಿತು. ಸ್ವರ ಸಂಗೀತ ಮ್ಯೂಸಿಕ್ ಬ್ಯಾಂಡ್‌ನ ಕ ' ಲ ಾ ವಿ ದ ' ರ ' ು 'ಇನ್‌ಸ್ಟ್ರುಮೆಂಟ್'ನೊಂದಿಗೆ ಸಂಗೀತದ ಅಲೆ ಸೃಷ್ಟಿಸಿದರು. ಪುಟ್ಟರಾಜ ಕೊಳಲನೂದಿ ಸಂಗೀತ ಸೃಷ್ಟಿಸಿದರು. ಮನೋಹರ ಅದಕ್ಕೆ ತಬಲಾ 'ತಾಳ' ಜೊತೆಗೂಡಿಸಿದರು. ಪ್ರಸಾದ್ ಡ್ರಮ್ ನಾದ ಮೇಳೈಸಿದರೆ, ಶಿವಾನಂದ ಕೀಬೋರ್ಡ್ ನುಡಿಸಿ ಲಯ ತುಂಬಿದರು.

ಬಳಿಕ ಗಾಯಕರಾದ ಪಾವನಾ ಮತ್ತು ಸೃಜನ್, 'ಲಗಜಾ ಗಲೇ ಫಿರ್ ಏ ಹಸೀನ್ ರಾತ್ ಹೋ ನಾ ಹೋ...' ಹಾಗೂ 'ಏಕ್ ಪ್ಯಾರ್ ಕಾ ನಗಮಾ ಹೈ... ಮೌಂಜೋ ಕೀ ರವಾನಿ ಹೈ... ಜಿಂದಗಿ ಔರ್ ಕುಚ್ ಭೀ ನಹಿಂ ತೇರಿ ಮೇರಿ ಕಹಾನಿ ಹೈ...' ಗೀತೆಗಳು ಕತ್ತಲಿನಲ್ಲಿ ಬೀಸುತ್ತಿದ್ದ ತಂಗಾಳಿಯಂತೆ ಪ್ರೇಕ್ಷಕರ ಮನವನ್ನು ಆವರಿಸಿದವು.

'ನಿನ್ನದೇ ನೆನಪು ದಿನವೂ ಮನದಲ್ಲಿ...ನೋಡುವ ಆಸೆಯೂ ತುಂಬಿದೆ ನನ್ನಲ್ಲಿ, ನನ್ನಲ್ಲಿ...' ಜನರಲ್ಲಿ ಉತ್ಸಾಹ ತುಂಬಿತು. ಬಳಿಕ ಅವರು 'ಉಸಿರೇ.. ಉಸಿರೇ..ಈ ಉಸಿರ ಕೊಲ್ಲಬೇಡ.. ಪ್ರೀತಿ ಹೆಸರಲಿ..ಈ ಹೃದಯ ಗೆಲ್ಲಬೇಡ.. ಉಸಿರಲೆ... ಪ್ರೀತಿಸು... ಈ ಉಸಿರಲೇ..ಪ್ರೀತಿಸು...' ಎಂದು ಕೋರಿದರು. ಪ್ರೇಕ್ಷಕರೂ ಕೆಲವು ಸಾಲು ಧ್ವನಿಗೂಡಿಸಿದರು.

ಬಳಿಕ ಮತ್ತೆ 'ಎ ರಾತೇಂ ಎ ಮೌಸಮ್ ನದಿಕಾ ಕಿನಾರಾ ಎ ಚಂಚಲ ಹವಾ...' ಹಾಗೂ ಅದೇ ಬಗೆಯ ಕನ್ನಡ ಗೀತೆ 'ಮುಂಜಾನೆ ಮಂಜಲ್ಲಿ.. ಮುಸ್ಸಂಜೆ ತಿಳಿ ತಂಪಲ್ಲಿ ಓ.. ಒಲವೇ ನೀನೆಲ್ಲಿ...' ಹಾಡಿ ಚಪ್ಪಾಳೆ ಗಿಟ್ಟಿಸಿದರು.

ಸೂಫಿಗೀತೆ 'ಕಾಲೇ ಕಾಲೇ ಜುಲ್ಫೋಂ ಸೇ ಬಂದೇ ಲಗಾಲೋ...ಹಮೇ ಜಿಂದಾ ರಹನೇ ದೋ ಏ ಹುಸ್ನೇವಾಲೋಂ...' ಹಾಗೂ 'ತೇರೆ ನಾಮಸೇ ಜೀಲೂ ತೆರೆ ನಾಮಸೇ ಮರಜಾಂವೂ ತೇರೆ ದೀವಾನಿ ದೀವಾನಿ' ಗೀತೆಗೆ ಪ್ರೇಕ್ಷರು ಕರತಾಡನದ ಮೆಚ್ಚುಗೆ ವ್ಯಕ್ತಪಡಿಸಿದರು.

ಅಂತಿಮವಾಗಿ 'ಗುಲಾಬಿ ಆಂಖೆ... ಜೋ ತೇರಿ ದೇಖಿ ಶರಾಬಿ ಯೇ ದಿಲ್ ಹೋಗಯಾ', 'ಓ ಮೇರೆ ದಿಲ್ ಕೇ ಚೈನ್ ಚೈನ್ ಆಯೆ ಮೇರೆ ದಿಲ್ ಕೋ ದುವಾ ಕೀಜಿಯೇ, 'ಮೇರೆ ಮೆಹಬೂಬ್ ಕಯಾಮತ್ ಹೋಗಿ...' ಇತ್ಯಾದಿ ಗೀತೆಗಳ ಪಲ್ಲವಿಗಳ 'ಫ್ಯುಜನ್' ಗಾಯನ ಮೋಡಿಯೊಂದಿಗೆ ಭರ್ತಿ 1 ಗಂಟೆಯ ಸಂಗೀತದ ರಸದೌತಣಕ್ಕೆ ವಿರಾಮ ನೀಡಿದರು.

ಈ ನಡುವೆ ಕಲಬುರಗಿ ಪಾಲಿಕೆ ಆಯುಕ್ತ ಅವಿನಾಶ ಶಿಂದೆ 'ಗುಲಾಬಿ ಆಂಖೆ, ಜೋ ತೇರಿ ದೇಖಿ ಶರಾಬಿ ಯೇ ದಿಲ್ ಹೋಗಯಾ...' ಗೀತೆಗೆ ಧ್ವನಿ ನೀಡಿದ್ದು ವಿಶೇಷವಾಗಿತ್ತು.

ಬಳಿಕ 'ಅಂಬಾ ಕ್ರಿಪಾ ನೃತ್ಯ ನಿಕೇತನ' ತಂಡದಿಂದ ಕಲಾವಿದರು ಹಲವು ನೃತ್ಯಗಳನ್ನು ಪ್ರಸ್ತುಪಡಿಸಿದರು. 'ನೈನಾ ಮಿಲಾಯಿಕೆ ನೈನಾ ಮಿಲಾಯಿಕೆ...' ಹಾಗೂ' ಮೋಹೆ ರಂಗದೋ ಲಾಲ್... ನಂದಕೀ ಲಾಲ್... ನಂದಕಿ ಲಾಲ್... ಛೇಡೋ ನಾ' ಹಾಗೂ 'ಸುನ್ ಸಾಯಾ ಸುನ್‌ಸಾಯಾ ಸುನ್...' ಸೇರಿದಂತೆ ಹಲವು ಗೀತೆಗಳಿಗೆ ನೃತ್ಯಗೈದು ನೆರೆದಿದ್ದವರ ಮನಗೆದ್ದರು.

ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಪಾಲಿಕೆ ಮೇಯರ್ ವರ್ಷಾ ಜಾನೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಪೊಲೀಸ್ ಆಯುಕ್ತ ಶರಣಪ್ಪ ಎಸ್.ಡಿ., ಎಸ್ಪಿ ಅಡ್ಡೂರು ಶ್ರೀನಿವಾಸುಲು, ಯಾದಗಿರಿ ಜಿಲ್ಲಾ ಪಂಚಾಯಿತಿ ಸಿಇಒ ಲವೀಶ್ ಒರಡಿಯಾ, ಉಪವಿಭಾಗಾಧಿಕಾರಿ ಸಾಹಿತ್ಯಾ ಆಲದಕಟ್ಟಿ, ತಹಶೀಲ್ದಾರ್ ಕೆ.ಆನಂದಶೀಲ ಸೇರಿದಂತೆ ಅನೇಕ ಅಧಿಕಾರಿಗಳು, ಸಾರ್ವಜನಿಕರು ಸಂಗೀತದ ಸಂಜೆಯಲ್ಲಿ ಮಿಂದೆದ್ದರು.

# ಜಿಲ್ಲಾಡಳಿತದಿಂದ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ವಿಜಯಪುರ,ಮೇ.10:ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಿಸಲಾಯಿತು. ಜಯಂತಿ ಕಾರ್ಯಕ್ರಮದ ಅಂಗವಾಗಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ರಾಜಶೇಖರ್ ಡಂಬಳ್, ನಿರ್ಮಿತಿ ಕೇಂದ್ರದ ಯೋಜನೆ ನಿರ್ದೇಶಕರಾದ ಆಕಾಶ್ ತಿಮಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ್ ಭೋವಿ, ಸುರೇಶ್ ದೇಸಾಯಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಎಲ್ ಎಚ್ ಬಿದರಿ, ವಿದ್ಯಾವತಿ ಅಂಕಲಗಿ ಸೇರಿದಂತೆ ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.



# ಬೀದರ್ ಸಾಂಸ್ಕೃತಿಕ ನಗರವಾಗಿ, ಮಾರ್ಪಟ್ಟಿರುವುದು ಸಂತಸ: ಡಾ.ಶೈಲೇಂದ್ರ ಬೆಲ್ದಾಳೆ

**ಬೀದರ್, ಮೇ. 10:** ನಿರಂತರ ಕನ್ನಡ ಚಟುವಟಿಯಿಕೆಗಳು, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಂದ ಜನರ ನೆಮ್ಮದಿ ಹೆಚ್ಚಿಸಿದೆ. ಕನ್ನಡ ಭಾಷೆ, ಬಾಂಧವ್ಯ, ಏಳ್ಗೆಗಾಗಿ ಮಿಡಿಯುವ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥೆ ಕನ್ನಡಿಗರ ಮನ ಮಿಡಿಯುವ ಸಂಸ್ಥೆ ಎಂದು ದಕ್ಷಿಣ ಕ್ಷೇತ್ರದ ಶಾಸಕ ಡಾ ಶೈಲೇಂದ್ರ ಕೆ. ಬೆಲ್ದಾಳೆ ಅವರು ಹೇಳಿದರು.



ಇತ್ತೀಚಿಗೆ 112ನೇ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾನ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಅವರು, ಹತ್ತಾರು ಕನ್ನಡ ಪರ ಸಂಘಟನೆಗಳ ತಾಯಿ ಕ.ಸಾ.ಪ. ಕನ್ನಡ ಬೆಳೆದರೆ ನಾವು ಬೆಳೆದಂತೆ, ಇಂದು ಇಂಗ್ಲಿಷ್ ಮಯ ವಾತಾವರಣದಲ್ಲೂ ಕನ್ನಡಕ್ಕೆ ತೊಂದರೆ ಆಗದಂತೆ ನಿರಂತರವಾಗಿ ಸುರೇಶ ಚೆನ್ನಶೆಟ್ಟಿ ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪ ವೃಕ್ಷ ಎನ್ನುವ ಕವಿ ವಾಣಿಯಂತೆ ದುಡಿಯುತ್ತಿದ್ದಾರೆ. ಅನೇಕ ಜಿಲ್ಲೆಯ ಮಕ್ಕಳು 125 ಕ್ಕೆ 125 ಅಂಕ ಪಡೆದು ಗಡಿ ಭಾಗದ ಬೀದರನಲ್ಲಿ ಕನ್ನಡಕ್ಕೆ ತೊಂದರೆ ಇಲ್ಲ ಎಂಬ ಮಾತು ಸಾಬೀತು ಮಾಡಿದ ಮಕ್ಕಳಿಗೆ ಶುಭ ಕೋರಿದರು.

ಜ್ಞಾನ ಸುಧಾ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ. ಪೂರ್ಣಿಮಾ ಜಿ, ಅವರು ಅನುಭಾವ ನೀಡಿ, ನಾವೆಲ್ಲ ಎಲ್ಲೆ ಇರಲಿ ದಿನ ನಿತ್ಯ ಕನ್ನಡ ಬಳಸುವುದು ಮರೆಯಬಾರದು. ಭಾಷೆ ಯಾವುದೇ ಇರಲಿ ಅದರ ಆಳ ಇತಿಹಾಸ ಅರ್ಥೈಸಿ ಕೊಳ್ಳಬೇಕು. ಅನೇಕ ವರ್ಷಗಳ ಇತಿಹಾಸ ನಮ್ಮ ಕನ್ನಡಕ್ಕಿದ್ದು ಅದರ ಬಳಕೆ ನಮ್ಮಿಂದಲೇ ಆಗಬೇಕು. ಅನೇಕ ಹಿರಿಯರು, ಮೇಧಾವಿಗಳು, ಹೋರಾಟಗಾರರು ಕನ್ನಡ ಬೆಳೆಸಲು ತಮ್ಮ ಜೀವನದಲ್ಲಿ ಅನೇಕ ಹೋರಾಟ ಮಾಡಿದ್ದಾರೆ. ಕನ್ನಡ ಇದು ನಮ್ಮ ತಾಯಿ ಭಾಷೆ. ಇದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸಂಘ ಸಂಸ್ಥೆಗಳಿಗಿಂತ ನಮ್ಮ ಮೇಲೂ ಇದೆ ಎಂದರು.

ಸನ್ಮಾನ ಸ್ವೀಕರಿಸಿದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಎಚ್.ಜಿ., ಅವರು ಮಾತನಾಡಿ, ನಮ್ಮದು ಸುಂದರ ನಾಡು, ಸೌಂದರ್ಯ ಬೀಡು, ಪರಂಪರೆ ಇತಿಹಾಸ ಮೆರೆದ ನಾಡು, ಇದರ ಕಲ್ಪನೆ ಅಂದಿಗಿಂತ ಇಂದಿನ ಮಕ್ಕಳಿಗೆ ತಲುಪಿಸ ಬೇಕಾದ ಕರ್ತವ್ಯ ಪಾಲಕ, ಪೋಷಕ, ಸಮಾಜದ ಮೇಲಿದೆ. ನಮಗೆ ನಾವೇ ಬೆಲೆ ಕೊಡದಿದ್ದರೆ ಮುಂದೆ ಗತಿಯೇನು ಎಂಬುದು ಒಂದ್ಸಲ್ ಅರ್ಥೈಸಿಕೊಳ್ಳಲೇ ಬೇಕು. ಮಕ್ಕಳ ಕೈಗೆ ಮೊಬೈಲ ಕೊಡಬೇಡಿ, ಇದರ ಹೊರತು ಪಡಿಸಿ ಪುಸ್ತಕ ಕೊಡಿ. ಪುಸ್ತಕವನ್ನು ತಲೆ ಕೆಳಗೆ ಮಾಡಿ ಓದಿದರೆ ಅದು ವ್ಯಕ್ತಿಗಳನ್ನು ತಲೆ ಎತ್ತಿ ಮೆರೆಯುವಂತೆ ಮಾಡುತ್ತದೆ ಎಂದರು.

ಶಾಹೀನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ ಅಬ್ದುಲ್ ಖದೀರ್ ಅವರು ಮಾತನಾಡಿ, ಮಕ್ಕಳ ಇಂದಿನ ಸಾಧನೆ ನೋಡಿ ಸಂತಸವಾಗುತ್ತಿದೆ. ಈ ವರ್ಷ 112ನೇ ವರ್ಷದ ಪರಿಷತ್ ಸಂಭ್ರಮಾಚರಣೆ ಸುಸಂದರ್ಭದಲ್ಲಿ 112 ಮಕ್ಕಳಿಗೆ ಉಚಿತ ಪಿ ಯು ಸಿ ಶಿಕ್ಷಣ ಕೊಡಲು ನಾವು ಬದ್ಧರಾಗಿದ್ದೇವೆ. ಮಕ್ಕಳು ಶೇಕಡಾ 95 ಅಂಕ ಪಡೆದು ಕನ್ನಡ ಮಾಧ್ಯಮದಲ್ಲಿ ಓದಿ ಗ್ರಾಮೀಣ ಭಾಗದವರಾಗಿರಬೇಕು. ಅಂಥವರು ನಮ್ಮ ವೆಬ್ ಸೈಟ್ ಗೆ ಅರ್ಜಿಸಲ್ಲಿಸಿ ಲಿಖಿತ ಪರೀಕ್ಷೆಗೆ ಕುಳಿತು ಕೊಂಡು ಹೆಚ್ಚಿನ ಅಂಕ ಪಡೆದವರಿಗೆ ಸೀಟ್ ಕೊಡಲಾಗುವುದು ಎಂದರು.

ವೇದಿಕೆ ಮೇಲೆ ಎನ್‌ಎಸ್‌ಎಸ್‌ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಡಾ ರಜನೀಶ ವಾಲಿ, ರೇವಣಸಿದ್ದಪ್ಪ ಜಲಾದೆ, ಸೋಮಶೇಖರ ಬಿರಾದಾರ ಚಿದ್ರಿ, ಬಸವರಾಜ ಧನ್ನೂರ, ಡಾ ರಘು ಕೃಷ್ಣಮೂರ್ತಿ, ಡಾ ಶಿವಶಂಕರ ಟೋಕರೆ, ನಿತಿನ ಕರಗಪೂರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಡಾ ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳು ಹುಲಸೂರ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪರಿಷತ್ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ ಅವರು ಮಾತನಾಡಿ, ನಮ್ಮ ಮಕ್ಕಳಲ್ಲಿ ಪ್ರತಿಭೆ ಇದೆ. ಅದಕ್ಕೆ ಪುರಸ್ಕಾರ ಮಾಡಿದರೆ ಮಕ್ಕಳ ಆತ್ಮ ಸ್ಥೈರ್ಯ ಇಮ್ಮಡಿಗೊಳ್ಳುತ್ತದೆ. ಇಂದು 132 ಪ್ರೌಢ ಶಾಲಾ ಮುಖ್ಯ ಗುರುಗಳು 100% ಫಲಿತಾಂಶಕ್ಕೆ ಕಾರಣರಾದ ಪ್ರಯುಕ್ತ ಅವರಿಗೆ ಗೌರವ ಜೊತೆಗೆ 125 ಅಂಕಗಳಿಗೆ 125 ಅಂಕ ಪಡೆದ 81 ಮಕ್ಕಳಿಗೆ ಹಾಗೂ ಸಂಭಂಧಪಟ್ಟ ಕನ್ನಡ ಭಾಷಾ ಶಿಕ್ಷಕರಿಗೆ ಹಾಗೂ 72 ಮಕ್ಕಳು ಶೇ.95 ಅಂಕ ಪಡೆದು ಅಗ್ರಶ್ರೇಯಾಂಕ ಪಡೆದವಯಿರಿಗೆ ಸನ್ಮಾನಿಸಲಾ ಗುತ್ತಿದೆ. ಪರಿಷತ್ ಸಂಸ್ಥಾಪನ ದಿನದಂದು ನಮಗೆ ರೋಟರಿ ಕ್ಲಬ್ ಕೈ ಜೋಡಿಸಿದ್ದು ಅಭಿಮಾನದ ಸಂಗತಿ ಎಂದರು.

# ಪಾಕ್ ಮೂಲಕ ಅಮೆರಿಕದ ಶಾಂತಿ ಪ್ರಸ್ತಾವನೆಗೆ ಉತ್ತರ ಸಲ್ಲಿಸಿದ ಇರಾನ್



**ಟೆಹ್ರಾನ್, ಮೇ 10:** ಪಶ್ಚಿಮ ಏಷ್ಯಾದಲ್ಲಿ ರಾಜತಾಂತ್ರಿಕತೆ ಹೊಸ ವೇಗವನ್ನು ಪಡೆದುಕೊಂಡಿದೆ, ಇರಾನ್ ಇಂದು ಪಾಕಿಸ್ತಾನಕ್ಕೆ ಅಮೆರಿಕದ ಇತ್ತೀಚಿನ ಪ್ರಸ್ತಾವನೆಗೆ ತನ್ನ ಪ್ರತಿಕ್ರಿಯೆಯನ್ನು ಔಪಚಾರಿಕವಾಗಿ ಹಸ್ತಾಂತರಿಸಿದೆ, ಇದು ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ವಾಷಿಂಗ್ಟನ್–ಟೆಹ್ರಾನ್ ಮಾತುಕತೆಗಳಲ್ಲಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಐಆರ್‌ಎನ್‌ಎ ಈ ವಿಷಯದ ಬಗ್ಗೆ ಪರಿಚಿತವಾಗಿರುವ ಮೂಲವನ್ನು ಉಲ್ಲೇಖಿಸಿ ವರದಿ ಮಾಡಿದೆ. ಪಾಕಿಸ್ತಾನವು ಇರಾನ್ನ ಉತ್ತರವನ್ನು ಯಾವಾಗ ವಾಷಿಂಗ್ಟನ್‌ಗೆ ರವಾನಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಪ್ರಸ್ತಾವಿತ ಯೋಜನೆಯ ಪ್ರಕಾರ, ಮಾತುಕತೆಗಳ ಆರಂಭಿಕ ಹಂತವು ಈ ಪ್ರದೇಶದಲ್ಲಿ ಯುದ್ಧವನ್ನು ನಿಲ್ಲಿಸುವತ್ತ ಗಮನಹರಿಸುತ್ತದೆ. ಇತ್ತೀಚಿನ ಪ್ರಸ್ತಾವನೆಯು ಯುದ್ಧವನ್ನು ಕೊನೆಗೊಳಿಸುವುದು, ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವುದು ಮತ್ತು ಇರಾನ್ನ ಪರಮಾಣು ಕಾರ್ಯಕ್ರಮ ಮತ್ತು ಪ್ರಾದೇಶಿಕ ಭದ್ರತಾ ಕಾಳಜಿಗಳ ಕುರಿತು ವಿಶಾಲ ಮಾತುಕತೆಗಳಿಗೆ ಚೌಕಟ್ಟನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ ಎಂದು ವರದಿಯಾಗಿದೆ. ಕೆಲವು ವರದಿಗಳು ಈ ಪ್ರಸ್ತಾವನೆಯು ಇರಾನ್ 12 ವರ್ಷಗಳವರೆಗೆ ಯುರೇನಿಯಂ ಪುಷ್ಟೀಕರಣವನ್ನು ಸ್ಥಗಿತಗೊಳಿಸುವುದು, ಹಾರ್ಮುಜ್ ಜಲಸಂಧಿಯನ್ನು 30 ದಿನಗಳಲ್ಲಿ ಪುನಃ ತೆರೆಯುವುದು ಮತ್ತು 60 ಪ್ರತಿಶತ ಶುದ್ಧತೆಗೆ ಪುಷ್ಟೀಕರಿಸಿದ ಅಂದಾಜು 440 ಕಿಲೋಗ್ರಾಂಗಳಷ್ಟು ಯುರೇನಿಯಂ ಹಸ್ತಾಂತರಿಸುವ ಅಗತ್ಯವಿರುತ್ತದೆ ಎಂದು ಸೂಚಿಸುತ್ತದೆ, ಇದು ಶಸ್ತ್ರಾಸ್ತ್ರ–ದರ್ಜೆಯ ವಸ್ತುವಿನ ಮಟ್ಟಕ್ಕಿಂತ ಕಡಿಮೆಯಾಗಿದೆ, ಇದು 90 ಪ್ರತಿಶತ ಪುಷ್ಟೀಕರಣದ ಅಗತ್ಯವಿದೆ. ಯುದ್ಧ ವಿರಾಮದ ಹೊರತಾಗಿಯೂ, ಇರಾನ್ ಮತ್ತು ಅಮೆರಿಕಗಳು ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ವಿಧ್ವಂಸಕ ನೌಕೆಗಳು ಮತ್ತು ಇರಾನಿನ ಪಡೆಗಳು ಒಳಗೊಂಡ ನೌಕಾ ಘರ್ಷಣೆಗೆ ಪರಸ್ಪರ ಆರೋಪ ಹೊರಿಸಿವೆ, ಎರಡೂ ಕಡೆಯವರು ಈ ಉಲ್ಬಣಕ್ಕೆ ಕಾರಣರಾಗಿದ್ದಾರೆ. ಅಮೆರಿಕದ ಅಧಿಕಾರಿಗಳ ಪ್ರಕಾರ, ಇರಾನ್ ಮೂರು ಅಮೇರಿಕನ್ ಯುದ್ಧನೌಕೆಗಳನ್ನು ಗುರಿಯಾಗಿಸಿಕೊಂಡು ಕ್ಷುಲ್ಲಕ ಕ್ಷಿಪಣಿ, ಡ್ರೋನ್ ಮತ್ತು ಸಣ್ಣ ದೋಣಿಗಳನ್ನು ಹಾರಿಸಿತು, ಇದನ್ನು ವಾಷಿಂಗ್ಟನ್ "ಅಪ್ರಚೋದಿತ ದಾಳಿ" ಎಂದು ಬಣ್ಣಿಸಿದೆ. ತನ್ನ ಪಡೆಗಳು ಒಳಬರುವ ಬೆದರಿಕೆಗಳನ್ನು ತಡೆದು ಆತ್ಮರಕ್ಷಣೆಗಾಗಿ ಪ್ರತಿಕ್ರಿಯಿಸಿದವು ಎಂದು ಅಮೆರಿಕ ಹೇಳಿದೆ. ಈ ಮುಖಾಮುಖಿಯು ಅಸ್ತಿತ್ವದಲ್ಲಿರುವ ಕದನ ವಿರಾಮವನ್ನು ಮುರಿಯಲಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು, ಇರಾನ್ನೊಂದಿಗಿನ ಒಪ್ಪಂದವು ಜಾರಿಯಲ್ಲಿದೆ ಎಂದು ಒತ್ತಾಯಿಸಿದರು. ಈ ಘಟನೆಯ ಸಮಯದಲ್ಲಿ ಇರಾನ್ "ನಮ್ಮೊಂದಿಗೆ ಕ್ಷುಲ್ಲಕವಾಗಿದೆ" ಎಂದು ಅವರು ಹೇಳಿದರು. ಇರಾನ್ನ ವಿದೇಶಾಂಗ ಸಚಿವಾಲಯದ ವಕ್ತಾರರು ಈ ಹಿಂದೆ ಅಮೆರಿಕದ ಪ್ರಸ್ತಾಪಗಳ ಕುರಿತು ಟೆಹ್ರಾನ್‌ನ ನಿಲುವನ್ನು ಆಂತರಿಕ ವಿಮರ್ಶೆಗಳು ಪೂರ್ಣಗೊಂಡ ನಂತರ ಮತ್ತು ಅಂತಿಮ ನಿರ್ಧಾರಗಳನ್ನು ತಲುಪಿದ ನಂತರ ತಿಳಿಸಲಾಗುವುದು ಎಂದು ಹೇಳಿದ್ದರು, ಇದು ಪರಿಶೀಲನಾ ಪ್ರಕ್ರಿಯೆಯು ಈಗ ಪೂರ್ಣಗೊಂಡಿದೆ ಎಂದು ಸೂಚಿಸುತ್ತದೆ.

# ಜಲಸಂಧಿ ನಿಯಂತ್ರಣ: ವಿಶ್ವಸಂಸ್ಥೆಯಲ್ಲಿ ಇರಾನ್ ವಿರುದ್ಧ ನಿರ್ಣಯ ಮಂಡಿಸಲು ಅಮೆರಿಕ ಸಜ್ಜು

**ಟೆಹ್ರಾನ್ / ವಾಷಿಂಗ್ಟನ್, ಮೇ 10:** ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಿಸಲು ಇರಾನ್ ಮಾಡುತ್ತಿರುವ ಪ್ರಯತ್ನಗಳ ವಿರುದ್ಧ ಅಮೆರಿಕ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ನಿರ್ಣಯವನ್ನು ಮಂಡಿಸಲು ಸಜ್ಜಾಗಿರುವುದರಿಂದ, ಟೆಹ್ರಾನ್ ಮೇಲಿನ ಒತ್ತಡ ಮುಂದುವರಿದರೆ ಹಾರ್ಮುಜ್ ಜಲಸಂಧಿಗೆ ಪ್ರವೇಶವನ್ನು ನಿರ್ಬಂಧಿಸಬಹುದು ಅಥವಾ ಅನಿರ್ದಿಷ್ಟವಾಗಿ ಮುಚ್ಚಬಹುದು ಎಂದು ಐಆರ್‌ಜಿಸಿ ಸೇರಿದಂತೆ ಇರಾನಿನ ಮಿಲಿಟರಿ ಅಧಿಕಾರಿಗಳು ಎಚ್ಚರಿಸಿದ ನಂತರ ಕೊಲ್ಲಿಯಲ್ಲಿ ಉದ್ವಿಗ್ನತೆ ತೀವ್ರಗೊಂಡಿದೆ. "ಇಸ್ಲಾಮಿಕ್ ಗಣರಾಜ್ಯವು ದಾಳಿಗೆ ಒಳಗಾದರೆ ಹಾರ್ಮುಜ್ ಜಲಸಂಧಿಯ ಮೂಲಕ ಯಾವುದೇ ತೈಲ ಸಾಗಣೆಯನ್ನು ಇರಾನ್ ಅನುಮತಿಸುವುದಿಲ್ಲ" ಎಂದು ಐಆರ್‌ಜಿಸಿ ನೌಕಾ ಕಮಾಂಡರ್ ಸಯೀದ್ ಸಿಯಾ–ಸರನಿ ಹೇಳಿದ್ದಾರೆ. ದೇಶೀಯವಾಗಿ ನಿರ್ಮಿಸಲಾದ ಹಗುರವಾದ ಜಲಾಂತರ್ಗಾಮಿ ನೌಕೆಗಳನ್ನು ಹಾರ್ಮುಜ್ ಜಲಸಂಧಿಯೊಳಗೆ ಈಗಾಗಲೇ "ಪ್ರಚೋದಕ–ಸಿದ್ಧ" ಕಾರ್ಯಾಚರಣೆಯ



ಭಂಗಿಯಲ್ಲಿ ನಿಯೋಜಿಸಲಾಗಿದೆ ಎಂದು ಇರಾನ್ ನೌಕಾ ಕಮಾಂಡರ್ ಶಹರಾಮ್ ಇರಾನಿ ಬಹಿರಂಗಪಡಿಸಿದ್ದಾರೆ. ಜಲಾಂತರ್ಗಾಮಿ ನೌಕೆಗಳು ದೀರ್ಘಕಾಲದವರೆಗೆ ಸಮುದ್ರತಳದಲ್ಲಿ ಸ್ಥಿರವಾಗಿ ಉಳಿಯುವ ಸಾಮರ್ಥ್ಯವನ್ನು ಹೊಂದಿವೆ ಮತ್ತು ಆಜ್ಞೆಯ ಮೇರೆಗೆ ಪ್ರತಿಕೂಲ ಹಡಗುಗಳನ್ನು ಪತ್ತೆಹಚ್ಚಬಹುದು ಮತ್ತು ನಾಶಪಡಿಸಬಹುದು ಎಂದು ಅವರು ಹೇಳಿದರು. ಇರಾನ್ ವಿರುದ್ಧ ಮಿಲಿಟರಿ ಕ್ರಮ ಕೈಗೊಳ್ಳುವ ಯಾವುದೇ ದೇಶವು "ನಿರ್ಣಾಯಕ ಪ್ರತಿಕ್ರಿಯೆಯನ್ನು" ಎದುರಿಸಬೇಕಾಗುತ್ತದೆ ಎಂದು ಇರಾನ್ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್ಫಜ್ಲ್ ಶೇಕಾರ್ಚಿ ಎಚ್ಚರಿಕೆ ನೀಡಿದ್ದಾರೆ. ಟೆಹ್ರಾನ್ ಮೇಲೆ ಅಮೆರಿಕದ ನಿರ್ಬಂಧಗಳನ್ನು ಜಾರಿಗೊಳಿಸುವ ದೇಶಗಳು "ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವಲ್ಲಿ ಖಂಡಿತವಾಗಿಯೂ ತೊಂದರೆಗಳನ್ನು ಎದುರಿಸಬೇಕಾಗುತ್ತದೆ" ಎಂದು ಇರಾನ್ ಸೇನಾ ವಕ್ತಾರರು ಹೇಳಿದ್ದಾರೆ.

ಅಮೆರಿಕ ನೇತೃತ್ವದ ವಿಶ್ವಸಂಸ್ಥೆಯ ನಿರ್ಣಯವನ್ನು ಬೆಂಬಲಿಸುವ ಬಹ್ರೇನ್ ಮತ್ತು ಇತರ ದೇಶಗಳು ಜಲಸಂಧಿಯನ್ನು "ಶಾಶ್ವತವಾಗಿ" ಮುಚ್ಚುವ ಸಾಧ್ಯತೆ ಇದೆ ಎಂಬ ಹಿರಿಯ ಇರಾನಿನ ಅಧಿಕಾರಿಯ ಎಚ್ಚರಿಕೆಗೆ ನೇರ ಪ್ರತಿಕ್ರಿಯೆಯಾಗಿ ಇರಾನ್ನ ಶಾಶ್ವತ ಹಾರ್ಮುಜ್ ಮುಚ್ಚುವಿಕೆಯ ಬೆದರಿಕೆಗಳು ಬಂದವು. ವಿಶ್ವದ ಸಮುದ್ರದ ಮೂಲಕ ತೈಲ ಪೂರೈಕೆಯ ಗಮನಾರ್ಹ ಪಾಲು ಪ್ರತಿದಿನ ಹಾದುಹೋಗುವ ಜಲಮಾರ್ಗದ ಕುರಿತು ಈಗಾಗಲೇ ಉಂಟಾಗಿರುವ ರಾಜತಾಂತ್ರಿಕ ಘರ್ಷಣೆಯನ್ನು ಈ ಹೇಳಿಕೆಯು ಹೆಚ್ಚಿಸಿದೆ.

# ಅಮೆರಿಕ ಮತ್ತೊಮ್ಮೆ ದಾಳಿ ಮಾಡಿದರೆ ಹೊಸ ಯುದ್ಧಭೂಮಿ ತೆರೆಯುತ್ತೇವೆ: ಇರಾನ್ ಸೇನೆ



**ಟೆಹ್ರಾನ್, ಮೇ 10:** ಅಮೆರಿಕ ಮತ್ತು ಇಸ್ರೇಲ್ ಮತ್ತಷ್ಟು ಮಿಲಿಟರಿ ದಾಳಿಗಳನ್ನು ನಡೆಸಿದರೆ ತನ್ನ ಗಡಿಯ ಆಚೆಗೆ "ಹೊಸ ಯುದ್ಧಭೂಮಿಗಳನ್ನು" ತೆರೆಯಬಹುದು ಎಂದು ಇರಾನ್ ಸೇನಾ ವಕ್ತಾರ ಮೊಹಮ್ಮದ್ ಅಕ್ರಮಿನಿಯಾ ಎಚ್ಚರಿಸಿದ್ದಾರೆ. "ಶತ್ರು ಮತ್ತೊಮ್ಮೆ ತಪ್ಪು ಲೆಕ್ಕಾಚಾರ ಮಾಡಿ ಇರಾನ್ ವಿರುದ್ಧ ಆಕ್ರಮಣವನ್ನು ಪ್ರಾರಂಭಿಸಿದರೆ, ಅದು ಖಂಡಿತವಾಗಿಯೂ ಹೊಸ ಅನಿರೀಕ್ಷಿತ ಯುದ್ಧ ವಿಧಾನಗಳನ್ನು ಎದುರಿಸಬೇಕಾಗುತ್ತದೆ" ಎಂದು ಅಕ್ರಮಿನಿಯಾ ಅವರನ್ನು ತಸ್ನಿಮ್ ಸುದ್ದಿ ಸಂಸ್ಥೆ ಉಲ್ಲೇಖಿಸಿದೆ. "ಇವುಗಳಲ್ಲಿ ಹೆಚ್ಚು ಸುಧಾರಿತ ಉಪಕರಣಗಳು, ಹೊಸ ತಂತ್ರಗಳು ಮತ್ತು, ಮುಖ್ಯವಾಗಿ, ಹೊಸ ಯುದ್ಧಭೂಮಿಗಳು ಸೇರಿವೆ. ಯುದ್ಧವು ಶತ್ರು ನಿರೀಕ್ಷಿಸದ ಪ್ರದೇಶಗಳಿಗೆ ವಿಸ್ತರಿಸುತ್ತದೆ." ಅಮೆರಿಕ ಜೊತೆಗಿನ ಇತ್ತೀಚಿನ ಕದನ ವಿರಾಮದ ಸಮಯದಲ್ಲಿ, ಇರಾನ್ ತನ್ನ ಮಿಲಿಟರಿ ಸಾಮರ್ಥ್ಯಗಳನ್ನು ಬಲಪಡಿಸುವುದು, ಗುರಿ ಪಟ್ಟಿಗಳನ್ನು ನವೀಕರಿಸುವುದು, ತರಬೇತಿಯನ್ನು ಸುಧಾರಿಸುವುದು, ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ದುರಸ್ತಿ ಮಾಡುವುದು ಮತ್ತು ಪಡೆಗಳನ್ನು ಮರುಸ್ಥಾಪಿಸುವತ್ತ ಗಮನಹರಿಸಿದೆ ಎಂದು ಅವರು ಹೇಳಿದರು.

ಭಾನುವಾರ ಪ್ರತ್ಯೇಕ ಹೇಳಿಕೆಯಲ್ಲಿ, ಇರಾನ್ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಖಖಉಅ) ನೌಕಾಪಡೆಯು ಇರಾನಿನ ಹಡಗುಗಳನ್ನು ಗುರಿಯಾಗಿಸಿಕೊಂಡರೆ ಈ ಪ್ರದೇಶದಲ್ಲಿನ ಅಮೆರಿಕದ ಹಿತಾಸಕ್ತಿಗಳ ವಿರುದ್ಧ ಪ್ರತೀಕಾರದ ಎಚ್ಚರಿಕೆ ನೀಡಿದೆ. "ಇರಾನಿನ ತೈಲ ಟ್ಯಾಂಕರ್‌ಗಳು ಮತ್ತು ವ್ಯಾಪಾರಿ ಹಡಗುಗಳ ವಿರುದ್ಧದ ಯಾವುದೇ ಆಕ್ರಮಣದ ನಂತರ ಅಮೆರಿಕದ ಪ್ರಾದೇಶಿಕ ಕೇಂದ್ರಗಳು ಮತ್ತು ಶತ್ರು ಹಡಗುಗಳ ಮೇಲೆ ಪ್ರಬಲ ದಾಳಿ ನಡೆಸಲಾಗುವುದು" ಎಂದು ಐಆರ್‌ಜಿಸಿ ನೌಕಾಪಡೆ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ತಿಳಿಸಿದೆ. ಇರಾನ್, ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ನಡುವಿನ ಹಿಂದಿನ ದಾಳಿಗಳ ವಿನಿಮಯದ ನಂತರ ಪ್ರಾದೇಶಿಕ ಉದ್ವಿಗ್ನತೆ ಮುಂದುವರಿದಿರುವ ನಡುವೆ ಈ ಎಚ್ಚರಿಕೆಗಳು ಬಂದಿವೆ. ಏಪ್ರಿಲ್ 7 ರಂದು ಕದನ ವಿರಾಮ ಘೋಷಿಸಲಾಗಿದ್ದರೂ, ಎರಡೂ ಕಡೆಯವರು ಬೆದರಿಕೆಗಳನ್ನು ನೀಡುತ್ತಲೇ ಇದ್ದಾರೆ, ಆದರೆ ಮುಂದಿನ ಮಾತುಕತೆಗೆ ಅನುಕೂಲವಾಗುವಂತೆ ಪ್ರಯತ್ನಗಳು ನಡೆಯುತ್ತಿವೆ ಎಂದು ವರದಿಯಾಗಿದೆ.

# ರಷ್ಯಾ–ಚೀನಾ ಇಂಧನ ಮೈತ್ರಿಯಿಂದ ತೀವ್ರಗೊಂಡ ಇಂಧನ ಬಿಕ್ಕಟ್ಟು



**ಮಾಸ್ಕೋ, ಮೇ 10:** ತೈಲ ಮತ್ತು ಅನಿಲ ವಲಯದಲ್ಲಿ ರಷ್ಯಾ ಮತ್ತು ಚೀನಾ ನಡುವಿನ ನಿರೀಕ್ಷಿತ ಆಳವಾದ ಸಹಕಾರದ ನಡುವೆ ಯುರೋಪಿಯನ್ ಒಕ್ಕೂಟ ಮತ್ತು ಯುನೈಟೆಡ್ ಕಿಂಗ್ಡಮ್ನ ಇಂಧನ ದೃಷ್ಟಿಕೋನವು ಮತ್ತಷ್ಟು ಹದಗೆಟ್ಟಿದೆ ಎಂದು ರಷ್ಯಾದ ನೇರ ಹೂಡಿಕೆ ನಿಧಿಯ ಮುಖ್ಯಸ್ಥ ಮತ್ತು ವಿದೇಶಗಳೊಂದಿಗೆ ಆರ್ಥಿಕ ಸಹಕಾರಕ್ಕಾಗಿ ವಿಶೇಷ ಅಧ್ಯಕ್ಷೀಯ ರಾಯಭಾರಿ ಕಿರಿಲ್ ಡಿಮಿಟ್ರಿವ್ ಹೇಳಿದ್ದಾರೆ. ಇಂಧನ ವಲಯದಲ್ಲಿ, ವಿಶೇಷವಾಗಿ ಅನಿಲ ಮತ್ತು ತೈಲದಲ್ಲಿ ಸಹಕಾರವನ್ನು ವಿಸ್ತರಿಸುವಲ್ಲಿ ಮಾಸ್ಕೋ ಮತ್ತು ಬೀಜಿಂಗ್ "ಉನ್ನತ ಮಟ್ಟದ ಒಪ್ಪಂದ"ವನ್ನು ತಲುಪಿವೆ ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶನಿವಾರ ಹೇಳಿದ ನಂತರ ಅವರ ಹೇಳಿಕೆಗಳು ಬಂದವು.

ಸಾಮಾಜಿಕ ಮಾಧ್ಯಮ ವೇದಿಕೆ ಫ ನಲ್ಲಿ ಪುಟಿನ್ ಅವರ ಹೇಳಿಕೆಯ ಕುರಿತು ಪ್ರತಿಕ್ರಿಯಿಸಿದ ಡಿಮಿಟ್ರಿವ್, "ಇತಿಹಾಸದಲ್ಲಿ ಅತ್ಯಂತ ಕೆಟ್ಟ ಇಂಧನ ಬಿಕ್ಕಟ್ಟಿನ ಸಮಯದಲ್ಲಿ ಇಗ/ಗಏ ಇಂಧನ ಆಯ್ಕೆಗಳು ಇದೀಗ ಹದಗೆಟ್ಟಿವೆ" ಎಂದು ಹೇಳಿದರು. ಜಾಗತಿಕ ಇಂಧನ ಮಾರುಕಟ್ಟೆಗಳಲ್ಲಿ ನಿರಂತರ ಏರಿಳಿತದ ಹಿನ್ನೆಲೆಯಲ್ಲಿ ಈ ಕಾಮೆಂಟ್ಗಳು ಬಂದಿವೆ, ಬಹು ಪ್ರದೇಶಗಳಲ್ಲಿ ಇಂಧನ ಮತ್ತು ಕೈಗಾರಿಕಾ ಬೆಲೆಗಳು ಏರುತ್ತಿವೆ ಎಂದು ವರದಿಯಾಗಿದೆ. ಪಶ್ಚಿಮ ಏಷ್ಯಾ ಯುದ್ಧವು ಜಾಗತಿಕ ಪೂರೈಕೆ ಸರಪಳಿಗಳನ್ನು ಮತ್ತಷ್ಟು ಅಡ್ಡಿಪಡಿಸಿದೆ. ಗುರುವಾರ ತೈಲ ಬೆಲೆ ಬ್ಯಾರೆಲ್ಗೆ $126 ದಾಟಿದೆ, ಇದು ನಾಲ್ಕು ವರ್ಷಗಳಲ್ಲಿಯೇ ಗರಿಷ್ಠ ಮಟ್ಟವಾಗಿದೆ, ಕೆಲವು ವ್ಯಾಪಾರಿಗಳು ಯುಎಸ್–ಇರಾನ್ ಯುದ್ಧದಲ್ಲಿ ಏರಿಕೆಯಾಗುವ ಬಗ್ಗೆ ಚಿಂತಿತರಾಗಿದ್ದರು, ಇದು ಹಾರ್ಮುಜ್ ಜಲಸಂಧಿಯನ್ನು ಪರಿಣಾಮಕಾರಿಯಾಗಿ ಮುಚ್ಚುವಂತೆ ಮಾಡುತ್ತದೆ. ಜಾಗತಿಕ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲವು ರಾತ್ರೋರಾತ್ರಿ ಬ್ಯಾರಲ್‌ಗೆ 126.41 ಡಾಲರ್‌ಗೆ ಏರಿತು, ನಂತರ ವ್ಯಾಪಾರದ ಪ್ರಮಾಣ ಕಡಿಮೆಯಾದಂತೆ ಬ್ಯಾರೆಲ್ಗೆ $115.8 ಕ್ಕೆ ಇಳಿಯಿತು. ಯುಎಸ್ ಮಾನದಂಡವಾದ ಡಬ್ಲ್ಯೂಟಿಐ ಕಚ್ಚಾ ತೈಲವು ಬ್ಯಾರಲ್‌ಗೆ 106 ಡಾಲರ್‌ಗೆ 0.7% ರಷ್ಟು ಕುಸಿದಿದೆ.


ಅಮೆರಿಕದ ನೌಕಾ ಹಡಗುಗಳು ಇರಾನ್‌ನ ದಕ್ಷಿಣದಲ್ಲಿರುವ ಜಲಸಂಧಿಯ ಮೂಲಕ ಕೊಲ್ಲಿಯಿಂದ ಹೊರಗೆ ಸಾಗುತ್ತಿರುವಾಗ "ಅಪ್ರಚೋದಿತ" ಇರಾನಿನ ದಾಳಿಗಳು ಎಂದು ವಿವರಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಸ್ವರಕ್ಷಣಾ ದಾಳಿಗಳನ್ನು ನಡೆಸಿದೆ ಎಂದು ಯುಎಸ್ ಹೇಳಿದೆ. ಇದಕ್ಕೆ ವ್ಯತಿರಿಕ್ತವಾಗಿ, ಏಪ್ರಿಲ್‌ನಲ್ಲಿ ತಲುಪಿದ ಕದನ ವಿರಾಮ ಒಪ್ಪಂದವನ್ನು ಯುಎಸ್ ಉಲ್ಲಂಘಿಸಿದೆ ಎಂದು ಇರಾನಿನ ರಾಜ್ಯ ಮಾಧ್ಯಮ ವರದಿ ಮಾಡಿದೆ.

ಏರಿಕೆಯ ಹೊರತಾಗಿಯೂ, ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಇರಾನ್ನೊಂದಿಗಿನ ಕದನ ವಿರಾಮ "ಇನ್ನೂ ಜಾರಿಯಲ್ಲಿದೆ" ಎಂದು ಹೇಳಿದರು. ಇರಾನಿನ ರಾಜ್ಯ ಮಾಧ್ಯಮವು ಪರಿಸ್ಥಿತಿ "ಈಗ ಸಾಮಾನ್ಯ ಸ್ಥಿತಿಗೆ ಮರಳಿದೆ" ಎಂದು ಹೇಳಿಕೊಂಡಿದೆ.

ಇತ್ತೀಚಿನ ಉದ್ವಿಗ್ನತೆಗಳು ಪ್ರಾರಂಭವಾಗುವ ಮೊದಲು, ತೈಲ ಬೆಲೆಗಳು ಬ್ಯಾರಲ್‌ಗೆ ಸುಮಾರು 70 ಡಾಲರ್‌ನಂತೆ ವಹಿವಾಟು ನಡೆಸುತ್ತಿದ್ದವು. ಈ ಜಲಸಂಧಿಯು ಒಂದು ನಿರ್ಣಾಯಕ ಜಾಗತಿಕ ಇಂಧನ ಕಾರಿಡಾರ್ ಆಗಿದ್ದು, ವಿಶ್ವದ ತೈಲ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಸುಮಾರು ಶೇ.20 ಅನ್ನು ಗಲ್ಫ್ ಉತ್ಪಾದಕರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಸಾಗಿಸುವ ಜವಾಬ್ದಾರಿಯನ್ನು ಹೊಂದಿದೆ.

ಈ ಮಾರ್ಗದಲ್ಲಿನ ಅಡೆತಡೆಗಳು ಜಾಗತಿಕ ಇಂಧನ ಬೆಲೆಗಳ ಮೇಲೆ ಹೆಚ್ಚಿದ ಒತ್ತಡಕ್ಕೆ ಕಾರಣವಾಗಿವೆ. ಆದಾಗ್ಯೂ, ಪ್ರಮುಖ ಆರ್ಥಿಕತೆಗಳು ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆ ಸ್ಥಿರ ಮತ್ತು ವೈವಿಧ್ಯಮಯ ಇಂಧನ ಮೂಲಗಳನ್ನು ಹುಡುಕುತ್ತಲೇ ಇರುವುದರಿಂದ, ರಷ್ಯಾ ಮತ್ತು ಚೀನಾದ ಬೆಳೆಯುತ್ತಿರುವ ಇಂಧನ ಜೋಡಣೆಯನ್ನು ಜಾಗತಿಕ ಮಾರುಕಟ್ಟೆಗಳು ಸೂಕ್ಷ್ಮವಾಗಿ ಗಮನಿಸುತ್ತಿವೆ.

# ಇರಾನ್‌ಗೆ ಅಮೆರಿಕದ ಪರಮಾಣು ದಾಳಿ ಬೆದರಿಕೆ: ಟೆಹ್ರಾನ್‌ಗೆ ಪುಟಿನ್ ಬೆಂಬಲ



**ಟೆಹ್ರಾನ್, ಮೇ 10:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂಭಾವ್ಯ ಪರಮಾಣು ದಾಳಿಯ ಬೆದರಿಕೆ ಹಾಕಿದ್ದಾರೆ ಎಂಬ ಆರೋಪದ ನಂತರ ಇರಾನ್ ಭಾನುವಾರ ಅಮೆರಿಕವನ್ನು ತೀವ್ರವಾಗಿ ಖಂಡಿಸಿದೆ, ಟೆಹ್ರಾನ್‌ನ ವಿದೇಶಾಂಗ ಸಚಿವಾಲಯವು ಈ ಹೇಳಿಕೆಗಳನ್ನು ವಾಷಿಂಗ್ಟನ್‌ನ ಶಾಂತಿಯ ಬಯಕೆಗೆ ವಿರುದ್ಧವಾಗಿದೆ ಎಂದು ಕರೆದಿದೆ.

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಕ್ಕೈ, ಅಮೆರಿಕವು ಶಾಂತಿಯನ್ನು ಬಯಸುತ್ತದೆ ಮತ್ತು ಪರಮಾಣು ಬಿಕ್ಕಟ್ಟನ್ನು ತಡೆಯುವ ಗುರಿಯನ್ನು ಹೊಂದಿದೆ ಎಂದು ಹೇಳಿಕೊಳ್ಳುವುದು "ವಿಚಿತ್ರ ಅಸಂಬದ್ಧ" ಎಂದು ಹೇಳಿದರು ಮತ್ತು ಅದೇ ಸಮಯದಲ್ಲಿ "ಒಂದು ದೊಡ್ಡ ಹೊಳಪು" ಎಂದು ವಿವರಿಸುವ ಮೂಲಕ ಅಗಾಧ ಶಕ್ತಿಯ ಬಗ್ಗೆ ಎಚ್ಚರಿಕೆ ನೀಡಿದೆ. ತಮ್ಮ ಪೋಸ್ಟ್‌ನಲ್ಲಿ, ಬಕ್ಕೈ ಹೀಗೆ ಹೇಳಿದರು: "ಹೇಗಾದರೂ... (ಸ್ಟಾನ್ಲಿ ಕುಬ್ರಿಕ್ ಅವರ ಡಾ. ಸ್ಟ್ರೇಂಜ್ಲವ್ ಆರ್: ಹೌ ಐ ಲರ್ನ್ಡ್ ಟು ಸ್ಟಾಪ್ ವರಿಯಿಂಗ್ ಅಂಡ್ ಲವ್ ದಿ ಬಾಂಬ್, 1964 ನೋಡಿ)," ವಾಷಿಂಗ್ಟನ್‌ನಲ್ಲಿ ಪರಮಾಣು ವಾಕ್ಚಾತುರ್ಯವನ್ನು ಅಣಕಿಸಲು ಉಲ್ಲೇಖವನ್ನು ಬಳಸಿದ್ದಾರೆ.

ಗಲ್ಫ್ ಪ್ರದೇಶದಲ್ಲಿ ನಡೆಯುತ್ತಿರುವ ಅಸ್ಥಿರತೆಯ ಹೊರತಾಗಿಯೂ ಇರಾನ್ನೊಂದಿಗಿನ ಕದನ ವಿರಾಮ ಜಾರಿಯಲ್ಲಿದೆ ಎಂದು ಒತ್ತಾಯಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳ ನಂತರ ಹೆಚ್ಚಿದ ಉದ್ವಿಗ್ನತೆಯ ನಡುವೆ ಈ ಹೇಳಿಕೆಗಳು ಬಂದಿವೆ. ವರದಿಗಾರರನ್ನುದ್ದೇಶಿಸಿ ಮಾತನಾಡಿದ ಟ್ರಂಪ್, ಕದನ ವಿರಾಮ ಮುರಿದರೆ, ಪರಿಣಾಮಗಳು ಸ್ಪಷ್ಟವಾಗಿರುತ್ತವೆ ಎಂದು ಎಚ್ಚರಿಸಿದರು. "ಕದನ ವಿರಾಮವಿಲ್ಲದಿದ್ದರೆ, ನೀವು ತಿಳಿದುಕೊಳ್ಳಬೇಕಾಗಿಲ್ಲ. ಇರಾನ್ನಿಂದ ಹೊರಬರುವ ಒಂದು ದೊಡ್ಡ ಹೊಳಪನ್ನು ನೀವು ನೋಡಬೇಕಾಗುತ್ತದೆ" ಎಂದು ಅವರು ಹೇಳಿದರು. "ಅವರು ಒಪ್ಪಂದಕ್ಕೆ ಬೇಗನೆ ಸಹಿ ಹಾಕುವುದು ಉತ್ತಮ ... ಅವರು ಸಹಿ ಮಾಡದಿದ್ದರೆ, ಅವರು ಬಹಳಷ್ಟು ನೋವನ್ನು ಅನುಭವಿಸಬೇಕಾಗುತ್ತದೆ" ಎಂದು ಹೇಳುವ ಮೂಲಕ ಅವರು ತಮ್ಮ ಎಚ್ಚರಿಕೆಯನ್ನು ಮತ್ತಷ್ಟು ಹೆಚ್ಚಿಸಿದರು.

ಏತನ್ಮಧ್ಯೆ, ವಿಜಯ ದಿನದ ಮೆರವಣಿಗೆಯ ನಂತರ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಮಾಸ್ಕೋ ಟೆಹ್ರಾನ್ ಮತ್ತು ಗಲ್ಫ್ ರಾಷ್ಟ್ರಗಳೆರಡರೊಂದಿಗೂ ಬಲವಾದ ರಾಜತಾಂತ್ರಿಕ ಸಂಬಂಧಗಳನ್ನು ಕಾಯ್ದುಕೊಂಡಿರುವುದರಿಂದ ಮತ್ತು ರಾಜತಾಂತ್ರಿಕ ಪರಿಹಾರವನ್ನು ಪ್ರೋತ್ಸಾಹಿಸುತ್ತಿರುವುದರಿಂದ ಯುಎಸ್–ಇರಾನ್ ಸಂಘರ್ಷವನ್ನು "ತುಂಬಾ ಕಷ್ಟಕರ" ಎಂದು ಬಣ್ಣಿಸಿದರು. "ಈ ಸಂಘರ್ಷವನ್ನು ಸಾಧ್ಯವಾದಷ್ಟು ಬೇಗ ಕೊನೆಗೊಳಿಸಲಾಗುವುದು ಎಂದು ನಾನು ಭಾವಿಸುತ್ತೇನೆ" ಎಂದು ಅವರು ಹೇಳಿದರು, ಮಾತುಕತೆಯ ಮೂಲಕ ರಾಜಿ ಮಾಡಿಕೊಳ್ಳುವುದು ತಲುಪಬಹುದಾದ ದೂರದಲ್ಲಿದೆ ಎಂದು ಹೇಳಿದರು. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅನುಸರಿಸುತ್ತಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಅವರು ಪ್ರತಿಪಾದಿಸಿದರು, ಆದರೆ ಅಂತರರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಇರಾನ್ನ ಯುರೇನಿಯಂ ಪುಷ್ಟೀಕರಣ ಕಾರ್ಯಕ್ರಮವನ್ನು ನಿರ್ವಹಿಸಲು ಸಹಾಯ ಮಾಡಲು ಮಾಸ್ಕೋದ ಸಿದ್ಧತೆಯನ್ನು ಪುನರುಚ್ಚರಿಸಿದರು, ಯಾವುದೇ ವ್ಯವಸ್ಥೆಯು ಶಾಂತಿಯುತ ಪರಮಾಣು ಬಳಕೆ ಮತ್ತು ಅಂತರರಾಷ್ಟ್ರೀಯ ಮೇಲ್ವಿಚಾರಣೆಯ ಮೇಲೆ ಕೇಂದ್ರೀಕರಿಸಲ್ಪಡುತ್ತದೆ ಎಂದು ಒತ್ತಿ ಹೇಳಿದರು. ರಷ್ಯಾವು ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುವ ಇರಾನಿನ ಪ್ರಯತ್ನದ ಯಾವುದೇ ಸೂಚನೆಯನ್ನು ನಿರಂತರವಾಗಿ ನೋಡುತ್ತಿಲ್ಲ ಎಂದು ಪುಟಿನ್ ಹೇಳಿದರು, ಮತ್ತು ಪುಷ್ಟೀಕರಣ ಚಟುವಟಿಕೆಗಳ ಜಂಟಿ ಮೇಲ್ವಿಚಾರಣೆಗಾಗಿ ಮಾಸ್ಕೋದ ಪ್ರಸ್ತಾಪಗಳು ಪರಿಗಣನೆಗೆ ಲಭ್ಯವಿದೆ ಎಂದು ಹೇಳಿದರು.

ಅಮೆರಿಕ ಇಲ್ಲಿಯವರೆಗೆ ರಷ್ಯಾದ ಪ್ರಸ್ತಾಪವನ್ನು ತಿರಸ್ಕರಿಸಿದೆ. ವಾಷಿಂಗ್ಟನ್ನ ಕಳವಳವು ಇರಾನ್‌ನ ಅತ್ಯಂತ ಸೂಕ್ಷ್ಮ ದಾಸ್ತಾನು ಸುಮಾರು 450 ಕಿಲೋಗ್ರಾಂಗಳಷ್ಟು ಯುರೇನಿಯಂ ಅನ್ನು 60 ಪ್ರತಿಶತ ಶುದ್ಧತೆಗೆ ಪುಷ್ಟೀಕರಿಸಿದೆ, ಇದು ಶಸ್ತ್ರಾಸ್ತ್ರಕ್ಕೆ ಅಗತ್ಯವಿರುವ 90 ಪ್ರತಿಶತ ಮಿತಿಯಿಂದ ಕೇವಲ ಒಂದು ಸಣ್ಣ ತಾಂತ್ರಿಕ ಹೆಜ್ಜೆಯಾಗಿದೆ ಎಂದು ಪರಿಗಣಿಸಲಾಗಿದೆ. ಇರಾನ್ ಸರಿಸುಮಾರು 1,000 ಕಿಲೋಗ್ರಾಂಗಳಷ್ಟು ಪುಷ್ಟೀಕರಿಸಿದ 20 ಪ್ರತಿಶತ ಮತ್ತು ಸುಮಾರು 8,500 ಕಿಲೋಗ್ರಾಂಗಳಷ್ಟು 3.6 ಪ್ರತಿಶತವನ್ನು ಹೊಂದಿದೆ. ನಾಗರಿಕ ರಿಯಾಕ್ಟರ್‌ಗಳಿಗೆ ಇಂಧನ ರಾಡ್‌ಗಳಾಗಿ ವಸ್ತುವನ್ನು ಪರಿವರ್ತಿಸಲು ರಷ್ಯಾ ಪ್ರಸ್ತಾಪಿಸಿದೆ.

# ಇರಾನ್‌ಗೆ ಪುಷ್ಟೀಕರಿಸಿದ ಯುರೇನಿಯಂ ತಲುಪಲು

## ಅಮೆರಿಕ ಬಿಡುವುದಿಲ್ಲ: ಡೊನಾಲ್ಡ್ ಟ್ರಂಪ್ ಬೆದರಿಕೆ




ವಾಷಿಂಗ್ಟನ್, ಮೇ 10: ಅಮೆರಿಕದ ಅತ್ಯುನ್ನತ ಯುರೇನಿಯಂ ಅನ್ನು ತಲುಪಲು ಪ್ರಯತ್ನಿಸುತ್ತಿರುವ ಯಾವುದೇ ಇರಾನಿಯನ್ನರನ್ನು ಅಮೆರಿಕ ಗುರಿಯಾಗಿಸುತ್ತದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ, ಪರಮಾಣು ಸಾಮಗ್ರಿಯು ಅಮೆರಿಕದ ಮಿಲಿಟರಿಯ ನಿರಂತರ ಕಣ್ಗಾವಲಿನಲ್ಲಿದೆ ಎಂದು ಹೇಳಿದ್ದಾರೆ. ಪರಮಾಣು ಸೌಲಭ್ಯಗಳ ಅವಶೇಷಗಳ ಅಡಿಯಲ್ಲಿ ಹೂತುಹೋಗಿದೆ ಎಂದು ನಂಬಲಾದ ಯುರೇನಿಯಂನ ಮಹತ್ವವನ್ನು ಟ್ರಂಪ್ ಕಡಿಮೆ ಮಾಡಿದಂತೆ ಕಂಡುಬಂದಿದೆ, ಇದು ಸದ್ಯಕ್ಕೆ ಇರಾನ್ನಲ್ಲಿ ಉಳಿದಿದೆ. ನಾವು ಬಯಸಿದಾಗಲೆಲ್ಲಾ ನಾವು ಅದನ್ನು ಒಂದು ಹಂತದಲ್ಲಿ ಪಡೆಯುತ್ತೇವೆ. "ನಾವು ಅದನ್ನು ಕಣ್ಗಾವಲು ಹಾಕಿದ್ದೇವೆ," ಎಂದು ಟ್ರಂಪ್ ಹೇಳಿದರು. ಇರಾನ್ ವಿರುದ್ಧದ 10 ವಾರಗಳ ಯುಎಸ್–ಇಸ್ರೇಲ್ ಯುದ್ಧವನ್ನು ಕೊನೆಗೊಳಿಸಲು ಕದನ ವಿರಾಮ ಮಾತುಕತೆಗಳಲ್ಲಿ ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವಿನ ಪ್ರಮುಖ ಅಂಟಿಕೊಳ್ಳುವ ಅಂಶಗಳಲ್ಲಿ ಇರಾನ್ನ ಹೆಚ್ಚು ಪುಷ್ಟೀಕರಿಸಿದ ಯುರೇನಿಯಂ ಒಂದಾಗಿದೆ. ಇರಾನ್ ಯುರೇನಿಯಂ ಅನ್ನು ದೇಶದ ಹೊರಗೆ ವರ್ಗಾಯಿಸಬೇಕು ಮತ್ತು ಅದರ ಪರಮಾಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು ಎಂದು ಅಮೆರಿಕ ಬಯಸುತ್ತದೆ, ಆದರೆ ದೇಶೀಯ ಪುಷ್ಟೀಕರಣ ಕಾರ್ಯಕ್ರಮದ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಟೆಹ್ರಾನ್ ಒತ್ತಿ ಹೇಳಿದೆ. ಜೂನ್ 2025 ರಲ್ಲಿ ಯುಎಸ್ ಬಾಂಬ್ ದಾಳಿ ಮಾಡಿದ ಪರಮಾಣು ತಾಣಗಳ ಅಡಿಯಲ್ಲಿ ಯುರೇನಿಯಂ ಉಳಿದಿದೆ ಎಂದು ಹಲವಾರು ಅಂತರರಾಷ್ಟ್ರೀಯ ಮಾಧ್ಯಮ ವರದಿಗಳು ಹೇಳಿವೆ, ಆದರೆ ಟೆಹ್ರಾನ್ ಪರಮಾಣು ವಸ್ತುವಿನ ಸ್ಥಳವನ್ನು ದೃಢಪಡಿಸಿಲ್ಲ. ಕಳೆದ ತಿಂಗಳು, ವಾಷಿಂಗ್ಟನ್ ಯುರೇನಿಯಂ ಅನ್ನು ಹಿಂಪಡೆಯಲು ಮತ್ತು ಅದನ್ನು ಅಮೆರಿಕಕ್ಕೆ ತರಲು ಇರಾನ್ ಅವಕಾಶ ನೀಡಲು ಒಪ್ಪಿಕೊಂಡಿದೆ ಎಂದು ಟ್ರಂಪ್ ಘೋಷಿಸಿದರು – ಟೆಹ್ರಾನ್ ತ್ವರಿತವಾಗಿ ತಳ್ಳಿಹಾಕಿದ ಹೇಳಿಕೆಗಳು.




ಭಾನುವಾರ ಹೈದರಾಬಾದ್‌ನ ನೆಕ್ಲೇಸ್ ರಸ್ತೆಯ ಜಲವಿಹಾರ್‌ನಲ್ಲಿ ನಡೆದ ಎನ್‌ಟಿಆರ್ ಟ್ರಸ್ಟ್ ಥಲಸ್ಸೆಮಿಯಾ ಓಟದಲ್ಲಿ ಉತ್ಸಾಹಿ ಜನರು ಭಾಗವಹಿಸಿದ್ದರು.

# ಮುಂಬೈ ವಿರುದ್ಧ ಕೃನಾಲ್, ಭುವಿ ಆಟಕ್ಕೆ ಆರ್‌ಸಿಬಿಗೆ ಒಲಿದ ಜಯ

ಐಪಿಎಲ್ 54ನೇ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು 20ನೇ ಓವರ್‌ನ ಕೊನೆಯ ಎಸೆತದಲ್ಲಿ ಮಣಿಸುವ ಮೂಲಕ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ರಣರೋಚಕ ಗೆಲುವು ದಾಖಲಿಸಿತು. ಆರ್‌ಸಿಬಿಯ ಈ ಗೆಲುವಿನ ರೂವಾರಿಗಳೆಂದರೆ ಅದು ಭುವನೇಶ್ವರ್ ಕುಮಾರ್ ಹಾಗೂ ಕೃನಾಲ್ ಪಾಂಡ್ಯ. ಕೃನಾಲ್ ಬ್ಯಾಟಿಂಗ್‌ನಲ್ಲಿ ಸ್ಮರಣೀಯ ಇನ್ನಿಂಗ್ಸ್ ಆಡಿದರೆ, ಇತ್ತ ಭುವನೇಶ್ವರ್ ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆಯುವುದರ ಜೊತೆಗೆ ಬ್ಯಾಟಿಂಗ್‌ನಲ್ಲಿ ಗೆಲುವಿನ ಸಿಕ್ಸರ್ ಬಾರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 166 ರನ್ ಕಲೆಹಾಕಿತು. ಗುರಿ ಬೆನ್ನಟ್ಟಿದ ಆರ್‌ಸಿಬಿ 2 ವಿಕೆಟ್‌ಗಳ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಆರ್‌ಸಿಬಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೆ, ಇತ್ತ ಮುಂಬೈ ಇಂಡಿಯನ್ಸ್ ಪ್ಲೇ ಆಫ್‌ನಿಂದ ಅಧಿಕೃತವಾಗಿ ಹೊರಬಿದ್ದಿತು.



**ಮುಂಬೈಗೆ ನಮನ್– ತಿಲಕ್ ಆಸರೆ:** ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ತಂಡವು ಉತ್ತಮ ಆರಂಭವನ್ನು ಪಡೆಯಲಿಲ್ಲ, ಕೇವಲ ಮೂರು ಓವರ್‌ಗಳಲ್ಲಿ ತಮ್ಮ ಆರಂಭಿಕ ಮೂವರು ಬ್ಯಾಟ್ಸ್‌ಮನ್‌ಗಳನ್ನು ಕಳೆದುಕೊಂಡಿತು. ಭುವನೇಶ್ವರ್ ಕುಮಾರ್ ಇದಕ್ಕೆ ಕಾರಣರಾಗಿದ್ದರು, ರೋಹಿತ್ ಶರ್ಮಾ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಸತತ ಎಸೆತಗಳಲ್ಲಿ ಔಟ್ ಮಾಡಿದರು. ರೋಹಿತ್ ಕೇವಲ 10 ಎಸೆತಗಳಲ್ಲಿ 22ರನ್ ಗಳಿಸಿದರೆ, ಸೂರ್ಯಕುಮಾರ್‌ಗೆ ಖಾತೆ ತೆರೆಯಲು ಸಾಧ್ಯವಾಗಲಿಲ್ಲ. ಅಲ್ಲಿಂದ ಜೊತೆಯಾದ ನಮನ್ ಧೀರ್ ಮತ್ತು ತಿಲಕ್ ವರ್ಮಾ 82 ರನ್‌ಗಳ ಜೊತೆಯಾಟ ಕಟ್ಟಿ ತಂಡವನ್ನು 100 ರನ್‌ಗಳ ಗಡಿ ದಾಟಿಸಿದರು.ಅಂತಿಮವಾಗಿ ಮುಂಬೈ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 166 ರನ್ ಗಳಿಸಲಷ್ಟೇ ಶಕ್ತವಾಯಿತು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ ಗರಿಷ್ಠ 4 ವಿಕೆಟ್‌ಗಳನ್ನು ಪಡೆದರು.

**ಆರಂಭದಲ್ಲೇ ಎಡವಿದ ಆರ್‌ಸಿಬಿ:** ಈ ಗುರಿ ಬೆನ್ನಟ್ಟಿದ ಆರ್‌ಸಿಬಿ ಕಥೆಯೂ ಭಿನ್ನವಾಗಿರಲಿಲ್ಲ. ದೀಪಕ್ ಚಾಹರ್ ಅವರ ಮ್ಯಾಜಿಕ್‌ನಿಂದಾಗಿ ಆರ್‌ಸಿಬಿ ಪವರ್‌ಪ್ಲೇ ಒಳಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಚಾಹರ್ ತಮ್ಮ ಮೊದಲ ಓವರ್‌ನಲ್ಲೇ ವಿರಾಟ್ ಕೊಹ್ಲಿಯನ್ನು ಶೂನ್ಯಕ್ಕೆ ಔಟ್ ಮಾಡಿದರು. ನಂತರ ದೇವದತ್ ಪಡಿಕ್ಕಲ್ ಕೂಡ ಚಾಹರ್‌ಗೆ ಬಲಿಯಾದರು. ಆ ಬಳಿಕ ದಾಳಿಗಿಳಿದ ಕಾರ್ಬಿನ್ ಬಾಷ್ ನಾಯಕ ರಜತ್ ಪಾಟಿದಾರ್ ಅವರ ದೊಡ್ಡ ವಿಕೆಟ್ ಪಡೆದರು. ಅಲ್ಲಿಂದ, ಕೃನಾಲ್ ಪಾಂಡ್ಯ ಮತ್ತು ಜಾಕೋಬ್ ಬೆಥೆಲ್ 55 ರನ್ ಜೊತೆಯಾಟವನ್ನು ರಚಿಸಿದರು.

**ಕೃನಾಲ್ ಗೆಲುವಿನ ಅರ್ಧಶತಕ:** ಬೆಥೆಲ್ ಔಟಾದ ನಂತರ, ಕ್ರುನಾಲ್ ಬ್ಯಾಟಿಂಗ್ ಪ್ರದರ್ಶಿಸಿ 32 ಎಸೆತಗಳಲ್ಲಿ ಅರ್ಧಶತಕ ಗಳಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವ ಕೆಲಸ ಮಾಡಿದರು.

**ಕೊನೆಯ ಓವರ್ ಥ್ರಿಲರ್:** ಅಂತಿಮ ಓವರ್‌ನಲ್ಲಿ 15 ರನ್‌ಗಳು ಬೇಕಾಗಿದ್ದವು. ಮುಂಬೈ ಪರ ರಾಜ್ ಅಂಗದ್ ಬಾವಾ ಬೌಲ್ ಮಾಡಿದರೆ, ಸ್ಟ್ರೈಕ್‌ನಲ್ಲಿ ಶೆಫರ್ಡ್ ಇದ್ದರು. ಅನಾನುಭವಿ ಬಾವಾಗೆ ಒತ್ತಡವನ್ನು ನಿಯಂತ್ರಿಸಲು ಸಾಧ್ಯವಾಗದೆ ಈ ಓವರ್‌ನಲ್ಲಿ ವೈಡ್‌ಗಳು ಹಾಗೂ ನೋ ಬಾಲ್ ಕೂಡ ಬೌಲ್ ಮಾಡಿದರು. ಇದೆಲ್ಲದರ ಲಾಭ ಪಡೆಯಲು ಶೆಫರ್ಡ್‌ಗೆ ಸಾಧ್ಯವಾಗಲಿಲ್ಲ. ನಿರ್ಣಾಯಕ ಹಂತದಲ್ಲಿ ಶೆಫರ್ಡ್ 11 ಎಸೆತಗಳನ್ನು ಎದುರಿಸಿ ಕೇವಲ 4 ರನ್ ಬಾರಿಸಿ ಔಟಾದರು.